೨೦ ಪುಟಗಳು

ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೧೨ - ೯ - ೧೯೪೯



ಬೆಲೆ ಎರಡಾಣೆ



ನಮ್ಮ ಮಾಸ್ಕೊ ರಾಯಭಾರಿ ಸರ್ ಎಸ್. ರಾಧಾಕೃಷ್ಣನ್

Karmaveer KANNADA ILLUSTRATED WEEKLY. HUBLI.

ಹೆಣ್ಣುಮಕ್ಕಳಿಗಾಗಿ

ಇಂಗ್ಲೆಂಡಿನಲ್ಲಿ ಗಂಡಸರ ಉದ್ಧಾರ?

... ಸ್ತ್ರೀ ಸ್ವಾತಂತ್ರ್ಯದ ಚಳವಳಿ ಹಬ್ಬಿ ಹೂವ ಹೊಳಕೆ. ಅದಕ್ಕೆ ನೀರೆರೆದವರು ಪಾಶ್ಚಾತ್ಯ ಪುರುಷರು- ಅದೀಗ ಅವರ ಕಾಲನ್ನೇ ಕಚ್ಚುತ್ತಿದೆ ಎಂಬ ಅನುಭವ ಅವರಿಗೀಗ ಬರಹತ್ತಿದೆ. ಗಂಡಸಿನ ಕೊರಳಿಗೆ ಎಲ್ಲ ಹೊಣೆಯನ್ನು ಸುತ್ತಿ ಹೆಂಗಸನ್ನು ಸ್ವಚ್ಛಂದವಾಗಿ ಬಿಟ್ಟುದೇ ಸ್ತ್ರೀಸ್ವಾತಂತ್ರ್ಯದ ಪರಿಣಾಮ. ಅದುದರಿಂದ ಪಾಶ್ಚಾತ್ಯರಲ್ಲಿ ಮದುವೆಯಾಗುವುದೆಂದರೇ ಒಂದು ಗಂಡಾಂತರ ಎನಿಸಿದೆ ಗಂಡಸಿಗೆ. ಇದನ್ನು ತಿಳಿಯದ ಪೌರಸ್ತ್ಯ ಪುರುಷರು ಆಧುನಿಕತೆಯ, ಸಮತೆಯ ಮತ್ತು ನ್ಯಾಯದ ಹೆಸರಿನಲ್ಲಿ ಹೊಸ ಕಾಯದೆಗಳನ್ನು ರಚಿಸಲು ಆಂದೋಲನ ನಡೆಸಿ ಔದಾರ್ಯದ ಉರುಳಿನಲ್ಲಿ ಪುರುಷರನ್ನು ಸಿಕ್ಕಿಸುವ ಪ್ರಯತ್ನ ಮಾಡುತ್ತಿರುವುದು ಶೋಚನೀಯವೆಂದು ಪ್ರಾಮಾಣಿಕ ಪತಿಪ್ರೀತಿಯುಳ್ಳ ಹೆಂಗಸಿಗೆ ಎನ್ನಿಸದಿರದು. ಹಿಂದು ಧರ್ಮದಲ್ಲಿ ಹೆಂಗಸಿಗೆ ಗಂಡಸಿಗಿಂತ ಹಕ್ಕುಗಳು ಕಡಿಮೆಯಿರುವಂತೆ ಹೊಣೆಗಳೂ ಕಡಿಮೆಯಾಗಿವೆ ಎಂಬುವದನ್ನು ಪುರುಷಸ್ಪರ್ಧಿ ಸ್ತ್ರೀಯರು ಗಮನಕ್ಕೆ ತಂದುಕೊಳ್ಳಬೇಕು. ಪ್ರಾಚೀನರು ಹೆಂಗಸಿನ ಸುರಕ್ಷಿತತೆಗಾಗಿ ಮದುವೆಯನ್ನು ನಿರ್ಮಿಸಿದ್ದರೆ ಇಂದು ಅದು ಗಂಡಸಿನ ಕೊರಳಕಂಟಿಯಾಗಿ ಪರಿಣಮಿಸಲು ಗಂಡಸಿನ ಜೀವನದ ಬಗ್ಗೆ ಸ್ತ್ರೀಪುರುಷರಿಬ್ಬರಿಗೂ ಅಸಹನೆ ಹುಟ್ಟಿದ್ದೇ ಕಾರಣ. ಹೀಗಾಗಲು ಗಂಡಸಿನ ಭೋಳೆತನವೇ ತಳಹದಿ. ಸ್ತ್ರೀಯರ ಸ್ತ್ರೀತ್ವವನ್ನು ಪೋಷಿಸಲು ಮಾನಿಸಲು ಹವಣಿಸಿ, ಅದರಲ್ಲಿ ಹೆಜ್ಜೆ ಹೆಜ್ಜೆಗೂ ಇಂದು ಗಂಡಸು ಸ್ತ್ರೀ ತಿರಸ್ಕಾರಕ್ಕೆ ಗುರಿಯಾಗಿ, ಪೌರಸ್ತ್ಯರ ಹಿಂದಿನ ಸ್ತ್ರೀಯರಂತೆ ಅವನಿಂದು ಒಂದು ತರದ ನೀಚೋಹಂಭಾವಕ್ಕೆ ಬಲಿಯಾಗಿ ದಾಂಪತ್ಯಜೀವನದಲ್ಲಿ ವಿನಾಶೋನ್ಮುಖನಾಗಿದ್ದಾನೆಂದರೆ ಅತಿಶಯೋಕ್ತಿಯಾಗಲಾರದು. ಇದು ಪಟ್ಟಣಿಗರ ಜೀವನದಲ್ಲಿ ಎದ್ದು ಕಾಣುತ್ತಿದೆ.

ಗಂಡನಿಗೆ ದಂಡ

ಇಂಗ್ಲೆಂಡಿನಲ್ಲಿ ಒಂದು ವಿವಾಹವಿಚ್ಛೇದವಾಯಿತೆಂದರೆ ಗಂಡನೇ ಯಾವಾಗಲೂ ಖಟ್ಲೆಯ ಖರ್ಚನ್ನು ಹೆಂಡತಿಗೆ ಕೊಡಬೇಕಾಗಿತ್ತು. ಅಲ್ಲದೆ, ಅವಳಿಗೆ ವಾರಕ್ಕೆ ೨ ಪೌಂಡಿನಂತೆ ಭುಕ್ತಾಂಶವನ್ನೂ ಅವನು ಸಲ್ಲಿಸಬೇಕು. ಹಾಗೆ ಕೊಡದಿದ್ದರೆ ಅವನಿಗೆ ಕಾರಾಗೃಹವಾಸ ಅಥವಾ ಸ್ವಯಂಕೃತ ವಿದೇಶವಾಸ. ಒಂದು ವರ್ಷದಲ್ಲಿ ಈ ಕಾರಣಕ್ಕಾಗಿ ಅಲ್ಲಿ ೨೩೫೪ ಗಂಡಸರು ತಲೆಗೆ ಮೂರು ತಿಂಗಳಂತೆ ಕಾರಾಗೃಹ ವಾಸವನ್ನು ಅನುಭವಿಸಿದರು.

ಕಾಯದೆ ಅಲ್ಲಿಯ ಮಹಿಳೆಯರಿಗೆ ಅನುಕೂಲವಾಗಿಯೂ ಪುರುಷರಿಗೆ ಪ್ರತಿಕೂಲವಾಗಿಯೂ ಇದೆ. ಮದುವೆಯಲ್ಲಿ ಗಂಡಸು ಎಲ್ಲ ತರದ ಖಾತ್ರಿಯನ್ನೂ ಹೆಂಗಸಿಗೆ ಕೊಟ್ಟರೆ ಹೆಂಗಸು ಅವನಿಗೆ ಯಾವ ಖಾತ್ರಿಯನ್ನೂ ಕೊಡುವುದಿಲ್ಲ. ಇದನ್ನು ಸುಧಾರಿಸಲು ದರಿದ್ರರ ಹೊಸ ಕಾಯದೆಯನ್ನು ಪಾಸು ಮಾಡಲಾಯಿತು. ಅದರ ಮೇರೆಗೆ ಗಂಡ ಹೆಂಡಿರಿಬ್ಬರೂ ಪರಸ್ಪರರ ಮತ್ತು ಮಕ್ಕಳ ಪಾಲನೆ ಪೋಷಣೆಯ ಸಮಾನ ಹೊಣೆಯನ್ನು ಹೊರುವಂತಾಯಿತು.

ಕಾಯದೆಯಂತೆ ಗಂಡ ಹೆಂಡಿರು ಒಂದು ವ್ಯಕ್ತಿಯೆಂದು ಗಣಿಸಲಾಗಿದ್ದರೂ ಹೆಂಡತಿ ತಪ್ಪು ಮಾಡಿದರೆ ಯಾವಾಗಲೂ ಗಂಡನ ಪ್ರೇರಣೆ ಅಥವಾ ಬಲಾತ್ಕಾರದಿಂದ ತಾನು ಹಾಗೆ ಮಾಡಿದೆನೆಂದು ತಪ್ಪಿಸಿಕೊಳ್ಳಲು ಅವಕಾಶವಿತ್ತು; ಗಂಡನಿಗೆ ಹಾಗಿಲ್ಲ; ಅವನು ಹೆಂಡತಿಯ ಬಲಾತ್ಕಾರಕ್ಕೆ ಒಳಗಾಗಿ ಯಾವುದಾದರೊಂದು ಅಪರಾಧವನ್ನು ಮಾಡಿದರೂ ಅದಕ್ಕೆ ಅವನೇ ಹೊಣೆಯಾಗುವನಲ್ಲದೆ ಹೆಂಡತಿ ಅದರಿಂದ ಯಾವತರದ ಆರೋಪಕ್ಕೂ ಗುರಿಯಾಗುವುದಿಲ್ಲ. ಈ ಸ್ಥಿತಿ ೧೯೩೫ ರ ವರೆಗೆ ಇತ್ತು. ಯಾವ ಕೋರ್ಟಿಗೆ ಹೋದರೂ ಗಂಡನಿಗೆ ಧನ ಮತ್ತು ಮಾನಗಳ ನಷ್ಟ, ಹೆಂಡತಿಗೆ ಆ ಎರಡರ ಲಾಭ!

ಯಾವಾತನನ್ನಾದರೂ ಒಬ್ಬಾಕೆ ಕಟ್ಟಿಕೊಂಡು ಓಡಿ ಹೋದರೆ ವಿವಾದದಲ್ಲಿ ಪ್ರತ್ಯೇಕ ವಾಸ ಅಥವಾ ವಿವಾಹವಿಚ್ಛೇದ ಈಯಿರ ದಕ್ಕೂ ಖಟ್ಲೆಯ ಖರ್ಚನ್ನು ಗಂಡನೇ ತೆರಬೇಕಾಗಿತ್ತು. ಒಂದು ವೇಳೆ ಹೆಂಡತಿ ವ್ಯಭಿಚಾರ ಮಾಡಿದರೆ ಗಂಡನಿಗೆ ನಷ್ಟ ತುಂಬಿಕೊಡುವುದು ಅವಳ ಕರ್ತವ್ಯವಲ್ಲ; ಅದು ಅವಳು ಇಟ್ಟುಕೊಂಡ ಮಹಾಶಯನ ಗಂಡಸಿನದೆಂದು ಕಾಯದೆಯಿದೆ. ಅಂತೂ ಅವಳಿಗೆ ಯಾವ ನಷ್ಟವೂ ಇಲ್ಲ!

ಹೆಂಡತಿಯ ತಪ್ಪು ಸದಾ ಕ್ಷಮ್ಯ

ಗಂಡ ಹೆಂಡಿರು ಒಂದೇ ವ್ಯಕ್ತಿಯೆಂದು ಪರಿಗಣಿತವಾಗಿರುವುದರ ದುರ್ಲಾಭ ಪಡೆದು ಹೆಂಡತಿ ಓಡಿ ಹೋಗುವಾಗ ಮನೆಯ ಸಾಮಾನುಗಳನ್ನು ಕದ್ದುಕೊಂಡು ಹೋಗುತ್ತಿದ್ದಳು. ಆದರೆ ಅವಳಿಗೆ ಆ ಬಗ್ಗೆ ಶಿಕ್ಷೆಯೇ ಇಲ್ಲ. ಅದು ಗಂಡ ಹೆಂಡಿರ ಸಮಾಚಾರವೆಂದು ಪೋಲೀಸರು ಅಲಕ್ಷಿಸುತ್ತಿದ್ದರು. ೧೮೮೨ ರಲ್ಲಿ ಪಾರ್ಲಿಮೆಂಟು ಪರಸ್ಪರರ ಸ್ವತ್ತನ್ನು ಕದ್ದರೆ ಪರಸ್ಪರರು ಕೋರ್ಟಿನಲ್ಲಿ ಖಟ್ಲೆ ಹಾಕಿ ನಷ್ಟವನ್ನು ತುಂಬಿಕೊಳ್ಳಬಹುದು ಎಂದು ಕಾಯದೆ ಮಾಡಿ ಗಂಡಸಿಗಾಗುತ್ತಿದ್ದ ಅನ್ಯಾಯವನ್ನು ತಡೆಯಲು ಯತ್ನಿಸಿತು. ಆದರೆ ಅದರ ಬಳಕೆಯ ರೂಢಿ ಬೆಳೆಯದೆ ಕೋರ್ಟುಗಳು ಹಳೆಯ ಪದ್ಧತಿಯಂತೆ ಹೆಂಗಸಿನ ಅಪರಾಧವನ್ನು ಅಲಕ್ಷ್ಯ ಮಾಡುತ್ತ ಬಂದವು.

ಇತ್ತೀಚೆಗೆ ಕೋರ್ಟಿನ ದೃಷ್ಟಿಗೆ ಇಂಥ ಅನ್ಯಾಯಗಳು ಹಲವಾರು ಬಿದ್ದಿವೆ. ಗಂಡನ ದುಡಿತವೆಲ್ಲ ಕುಟುಂಬಪೋಷಣೆಗಾಗಿ; ಹೆಂಡತಿಯದು ಸ್ವತಃ ಅವಳೊಬ್ಬಳಿಗೇ ಎಂದಿರುವುದರಿಂದ ಅವಳಿಗೆ ದುಡಿಯದೆ ಕಾಲ ಹಾಕುವ ಹಕ್ಕೂ ದುಡಿದರೆ ಅಷ್ಟನ್ನೂ ಪ್ರತ್ಯೇಕ ಉಳಿಸಿಕೊಂಬ ಹಕ್ಕೂ ಇದ್ದುದು ಗಂಡನಿಗೆ ಅನ್ಯಾಯವಲ್ಲದೆ ಮತ್ತೇನು? ಮದುವೆಗೆ ಮೊದಲು ಹೆಂಡತಿಯ ಹತ್ತಿರವಿದ್ದುದೆಲ್ಲ ಅವಳ ಸ್ವತ್ತು; ಆದರೆ ಮದುವೆಗೆ ಮೊದಲು ಗಂಡನ ಹತ್ತಿರವಿದ್ದುದೆಲ್ಲ ಮದುವೆಯಾದ ಮೇಲೆ ಸಂಯುಕ್ತ ಆಸ್ತಿಯೆನಿಸುತ್ತದೆ. ಖಾಸಗಿ ದಾನಗಳಿದ್ದರೆ (ಹೆಂಡತಿಯವು) ಅವಳವೇ. ಇದೂ ಸಾಲದೆಂದು ಮನೆ ನಡೆಸಿಕೊಂಡು ಹೋಗುವಾಗ ಮಿಗಿಸಿದ ಗಂಡನ ಆದಾಯವೂ ತನಗೇ ಸೇರಬೇಕೆಂದು ಅಲ್ಲಿಯ ಹೆಂಗಸೀಗ ಕೂಗುತ್ತಿದ್ದಾಳೆ! ಮದುವೆಯಲ್ಲಿ ಗಂಡನಿಗೆ ಬಂದ ಉಡುಗರೆಗಳು ಸಂಯುಕ್ತ ಆಸ್ತಿಯಾಗುತ್ತದೆ!

ಹೆಂಡತಿ ಗಂಡನ ಪಾತ್ರೆಪಡಗ ಮೇಜು ಕುರ್ಚಿಗಳನ್ನು ಕದ್ದೊಯ್ದರೆ ಅವಳಿಗೆ ಶಿಕ್ಷೆಯಿಲ್ಲದಿದ್ದುದಷ್ಟೇ ಅಲ್ಲ, ಅವನನ್ನು ಬಿಟ್ಟು ಓಡಿಹೋದರೂ ಅವಳನ್ನು ಕೇಳುವ ಕೋರ್ಟೊಂದೂ ಇಲ್ಲವಾಗಿತ್ತು. ಗಂಡನೇನಾದರೂ ಪ್ರತ್ಯೇಕ ವಾಸಮಾಡತೊಡಗಿದನೆಂದರೆ ಅವನನ್ನು ಹೆಂಡತಿ ಕೋರ್ಟಿಗೆಳೆದು ತನಗೆ ವಾರಕ್ಕೆ ೨ ಪೌಂಡು ಮತ್ತು ಮಕ್ಕಳಿಗೆ ತಲೆಗೆ ೧೦ ಶಿಲಿಂಗುಗಳಂತೆ ಭುಕ್ತಾಂಶವನ್ನು ಪಡೆಯುತ್ತಿದ್ದಳು. ಅವಳು ಮತ್ತೂ ಜೋರಿನವಳಾದರೆ ೧೯೩೫ ರ ಮಕ್ಕಳ ಕಾಯದೆಯನ್ವಯ ೧೦ ಶಿಲಿಂಗುಗಳ ಬದಲು ಒಂದು ಪೌಂಡನ್ನೇ ಅವಳು ಪಡೆಯಬಹುದು. ಈಗ ಮಸೂದೆಯ ರೂಪದಲ್ಲಿರುವ ಮದುವೆಯಾದ ಹೆಂಗಸರ ಪೋಷಣೆಯ ಕಾಯದೆ ಪಾಸಾದರೆ ಅವರಿಗೆ ತಲೆಗೆ ೨ ಪೌಂಡಿನ ಬದಲು ೫ ಪೌಂಡೂ ಮಕ್ಕಳಿಗೆ ೧೦ ಶಿಲಿಂಗುಗಳ ಬದಲು ೧ ಪೌಂಡೂ ಗಂಡನಿಂದ ದೊರಕುವಂತಾಗುತ್ತದೆ. ಭುಕ್ತಾಂಶವನ್ನು ಹೆಂಣು ಗಂಡನಿಂದ ಕೇಳುವಂತೆ ಗಂಡನಾದರೂ ಪರಸ್ಪರ ಆದಾಯದ ಪರಿಗಣನೆಯಂತೆ ಹೆಂಡತಿಗೆ ಸಲ್ಲಿಸುವ ಭುಕ್ತಾಂಶದ ಪ್ರಮಾಣವನ್ನು ಒಮ್ಮೆ ಕಡಿಮೆಮಾಡಿಕೊಳ್ಳಬಹುದೆಂಬುದೊಂದೇ ಅವನಿಗಿರುವ ಸಾಂದರ್ಭಿಕ ಸೌಕರ್ಯ!

ಮದುವೆಯ ಇಕ್ಕಳು

ಒಬ್ಬಾಕೆ ಇನ್ನೊಬ್ಬನನ್ನು ಮದುವೆಯಾಗಿ ಹೋದರೂ ಅವಳಿಗೆ ಮೊದಲಿನ ಗಂಡನು ಕೊಡುತ್ತಿದ್ದ ಭುಕ್ತಾಂಶ ತಾನೇ ತಾನಾಗಿ ನಿಲ್ಲುವ ಹಾಗಿಲ್ಲ. ಕೋರ್ಟಿನ ಮೂಲಕ ಅಪ್ಪಣೆ ಪಡೆದು ಭುಕ್ತಾಂಶದಾನವನ್ನು ನಿಲ್ಲಿಸಬೇಕೆಂಬ ಅಂಶ ತಿಳಿಯದೆ ಅನೇಕ ಗಂಡಂದಿರು ಹಾಗೇ ನಿಲ್ಲಿಸಿ ಕಾರಾಗೃಹವಾಸ, ದಂಡ ಮೊದಲಾದ ಅನೇಕ ಕಷ್ಟನಷ್ಟಗಳಿಗೆ ಗುರಿಯಾದರು.

ಗಂಡಸು ದಂಡ ತೆರುವುದನ್ನು ಯಾವ ಸಂದರ್ಭದಲ್ಲೂ ತಪ್ಪಿಸಿಕೊಳ್ಳಲಾರನು. ಹೆಂಡತಿಗೆ ನಷ್ಟವೆಂಬುದಿಲ್ಲವೇ ಇಲ್ಲ; ಬಂದರೆ ಲಾಭ, ಹೋದರೆ ಶೂನ್ಯ! ಅವನು ಎಲ್ಲಿಗೆ ಹೋದರೂ ಕೋರ್ಟಿನ ದೃಷ್ಟಿಯಿಂದ ಮುಕ್ತನಾಗಲಾರ, ಕಾಯದೆ ಅವನ ಪಾಲಿಗೆ ಬೆನ್ನು ಹತ್ತಿದ ಬೇತಾಳ! ಒಂದುವೇಳೆ ಕೋರ್ಟೇನಾದರೂ ಓಡಿಹೋದ ಹೆಂಡತಿ ನಷ್ಟತುಂಬಿಕೊಡಬೇಕೆಂದು ಎಲ್ಲಾದರೂ ತೀರ್ಮಾನಿಸಿತೆಂದರೆ ಅದಕ್ಕೆ ಜಾಮೀನಿಲ್ಲದುದರಿಂದ ಅವಳು ಅದರಂತೆ ನಷ್ಟತುಂಬಿ ಕೊಡದೆ ತಪ್ಪಿಸಿಕೊಳ್ಳುವುದೇ ಹೆಚ್ಚು.

ಗಂಡನಿಗೆ ಟೊಪ್ಪಿಗೆಹಾಕಲು ಓಡಿಹೋಗುವುದೊಂದೇ ಹೆಂಗಸಿನ ಉಪಾಯವಲ್ಲ. ಅವನೇ ಪ್ರತ್ಯೇಕಇದ್ದಾನೆ ಎಂದು ಆರೋಪಿಸುವುದು, ತನಗೆ ಅಥವಾ ಮಕ್ಕಳಿಗೆ ಕ್ರೌರ್ಯ ತೋರಿದನೆಂದು ಜರೆಯುವುದು, ಹಾದರ ಮಾಡಿದನೆನ್ನುವುದು; ಈ ಕಾರಣಗಳ ಸೌಕರ್ಯ ತೋರಿದಳೆನ್ನಲವಕಾಶವಿಲ್ಲ; ಮಕ್ಕಳಿಗೆ ಗಂಡನಿಗೂ ಇದ್ದರೂ ಹೆಂಡತಿ ತನಗೆ ಕ್ರೌರ್ಯ ತೋರಿದಳೆನ್ನಬಹುದು. ಇದರ ಮೇಲೆ ಹೆಂಡತಿಗೆ ಇನ್ನೆರಡು ಹೆಚ್ಚಿನ ಕಾರಣಗಳಿವೆ. ಅವೆಂದರೆ, ಗಂಡನಲ್ಲಿ ವೇಶ್ಯಾರೋಗಗಳಿವೆಯೆನ್ನುವುದು ಮತ್ತು ಒತ್ತಾಯದಿಂದ ಹಾದರಕ್ಕೆ ಹಚ್ಚಿದನೆನ್ನುವುದು.

ಹೆಂಗಸರ ಬೆಂಬಲ

ಅತಿ ಹೆಚ್ಚು ಬಳಕೆಗೆ ಬಂದಿರುವ ಕಾಯದೆಯೆಂದರೆ ಹೆಂಗಸಿಗೆ ಪ್ರತ್ಯೇಕ ವಾಸದ ಸೌಕರ್ಯ ಕೊಡುವ ಶಾಸನ. ಅದರ ಪ್ರಕಾರ ಅವಳು ಗಂಡನಿಂದ ಪ್ರತ್ಯೇಕವಾಗಿ ವಾಸಮಾಡಬಹುದಲ್ಲದೆ, ಅವನಿಂದ ಭುಕ್ತಾಂಶವನ್ನೂ ಪಡೆಯುತ್ತ, ಸ್ವತಂತ್ರ ಉದ್ಯೋಗದಿಂದ ಹಣಗಳಿಸಿ ಸ್ವಚ್ಛಂದವಾಗಿ ಬಾಳಬಹುದು. ಹೀಗೆ ಪ್ರತ್ಯೇಕವಾಗಿರುವ ಸವಲತ್ತನ್ನು ಪಡೆಯಲು ಅವಳು ಯಾವಾಗಲೂ ಗಂಡನಮೇಲೆ ಕ್ರೌರ್ಯ ತೋರಿದ ಅಪವಾದನೆಯನ್ನು ಹೊರಿಸುತ್ತಾಳೆ. ಈ ಕಾಯದೆಯನ್ನು ತಿದ್ದುಪಡಿ ಮಾಡಲು ಗಂಡಸರು ಪ್ರಯತ್ನಿಸುತ್ತಿದ್ದಾರೆ. ಇದರಲ್ಲಿ ಒಂದು ವಿಶೇಷವೆಂದರೆ, ಇವಕ್ಕೆ ಹೆಂಗಸರಲ್ಲಿ ಕೆಲವರೂ ಈಗ ಬೆಂಬಲ ಕೊಡಲು ಮುಂದೆ ಬಂದಿದ್ದಾರೆ. ಗಂಡಸು ತನ್ನ ಔದಾರ್ಯದ ಇಕ್ಕಳಲ್ಲಿ ಸಿಕ್ಕಿಕೊಂಡಿರುವದನ್ನು ಗಮನಿಸಿದ ಕರುಣವಂತ ಸ್ತ್ರೀಯರಿಂದು ಗಂಡಸಿನ ಎಲ್ಲ ಹೊಣೆಯಲ್ಲೂ ಸಮಾನಾರ್ಧವನ್ನು ಹೆಂಗಸು ಹೊರುವಂತೆ ಕಾಯದೆ ರಚಿಸಲ್ಪಡಬೇಕೆಂದು ಹೇಳತೊಡಗಿದ್ದು ಪುರುಷರ ಪುಣ್ಯ. ಜೇನ್ ಮ್ಯಾನ್ ಎಂಬ ಪ್ರಮುಖ ಸ್ತ್ರೀ ಈ ಪ್ರಕಾರ ಗಂಡನನ್ನು ಸುಲಿದು ೨ ಪೌಂಡು ಭುಕ್ತಾಂಶ ಪಡೆಯುವುದನ್ನು ತಪ್ಪೆಂದು ಘಂಟಾಘೋಷವಾಗಿ ಸಾರಿದ್ದಾಳೆ.

ಹಿಂದು ಕಾಯದೆಯ ಕ್ರೋಡೀಕರಣವನ್ನು ಒತ್ತಾಯಪಡಿಸುತ್ತಿರುವ ಅ. ಭಾ. ಮಹಿಳಾ ಪರಿಷತ್ತಿನವರು ಮದುವೆ ಮಾಡಿಕೊಳ್ಳುವುದರಲ್ಲಿ ಪರಸ್ಪರರ ಸಮಾನಹಿತವೇ ಮುಖ್ಯವೆಂಬುದನ್ನು ತಿಳಿದಿದ್ದರೆ ತಮ್ಮ ಅರ್ಥವಿಲ್ಲದ ಆಂದೋಲನದಿಂದ ಅವರು ಹಿಂಜರಿಯದೆ ಇರುತ್ತಿರಲಿಲ್ಲ. ಗಂಡನನ್ನು ದುಡಿಸಿ ದಣಿಸಿ ಅವನ ಮೇಲೆ ಈಗಿರುವ ಹೊಣೆಗಳೆಲ್ಲವನ್ನೂ ಹಾಗೇ ಉಳಿಸಿ, ಅವನಿಂದ ತಾವು ಈಗಿನಿಕಿಂತ ಹೆಚ್ಚಿನ ಸ್ವಾರ್ಥಮಯ ಸೌಕರ್ಯಗಳನ್ನು ಪಡೆಯಬೇಕೆಂಬ ದುರುದ್ದೇಶಪ್ರೇರಿತ ಭಾವನೆ ಅವರ ಕೇಂದ್ರ ಶಾಸನಸಭೆಯನ್ನು ಒತ್ತಾಯಿಸುವ ವಿನಂತಿಪರ್ತರಾವುಗಳ ಹಿನ್ನೆಲೆಯಲ್ಲಿದೆ ಎಂಬುದು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗಿದೆ. ತಂದೆ, ಅಣ್ಣ, ತಮ್ಮ, ಗಂಡ, ಮಗ ಇವರಿರುವ ನನ್ನ ಅಕ್ಕ ತಂಗಿಯರು ಅಂಬೇಡ್ಕರರ ವಾದವನ್ನು ಪುರಸ್ಕರಿಸುವ ಮೊದಲು ಮೇಲಿನ ಸಂಗತಿಯನ್ನು ಒಂದುಗಳಿಗೆ ಶಾಂತಚಿತ್ತದಿಂದ ಪರಾಮರ್ಶಿಸಬೇಕೆಂದು ನನ್ನ ನಮ್ರ ಬೇಡಿಕೆ. - ಸುಭದ್ರೆ

ಮುಖಪತ್ರದಲ್ಲಿ

ಮಾಸ್ಕೋದಲ್ಲಿ ನಮ್ಮ ರಾಯಭಾರಿಯಾಗಿ ನೇಮಿಸಲ್ಪಟ್ಟಿರುವ ಡಾ. ಸರ್. ರಾಧಾಕೃಷ್ಣನ್ನರ ಸಂಕ್ಷಿಪ್ತ ಜೀವನಕಥೆಯನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಓದುವಿರಿ. ತತ್ವಜ್ಞಾನಿಯೊಬ್ಬನನ್ನು ರಾಯಭಾರಿಯಾಗಿ ಮಾಡಿದ್ದು ಸರಿಯಲ್ಲವೆನ್ನುವವರೂ ಇದ್ದಾರೆ ಆದರೆ ಸರ್ ರಾಧಾಕೃಷ್ಣನ್ನರ ದೌತ್ಯಕೌಶಲದ ಬಗ್ಗೆ ನಮ್ಮ ಮುಖ್ಯಮಂತ್ರಿಗಳಿಗೆ ಅಪಾರ ವಿಶ್ವಾಸವಿದೆ. ಮಾಸ್ಕೊ ರಾಯಭಾರ ಬಹಳ ಸೂಕ್ಷ್ಮವಾದ ಕಾರ್ಯ, ಅದನ್ನು ಯಶಸ್ವಿಯಾಗಿ ಡಾ ರಾಧಾಕೃಷ್ಣನ್ನರು ನೆರವೇರಿಸುವರೆಂಬ ವಿಶ್ವಾಸವಿದೆಯೆಂಬದಾಗಿ ಅವರನ್ನು ಬೀಳ್ಕೊಡುವ ಸಮಾರಂಭದಲ್ಲಿ ಪಂ. ಜವಾಹರಲಾಲರು ಸಾರಿದರು. ಡಾ. ರಾಧಾಕೃಷ್ಣನ್ನರು ಲಂಡನ್ನಿಗೆ ಹೋಗಿ ಅಲ್ಲಿಂದ ಇದೀಗ ಮಾಸ್ಕೋ ಮುಟ್ಟಿದ್ದಾರೆ. ಇಷ್ಟರಲ್ಲೇ ಅವರು ವಿದೇಶ ಮಂತ್ರಿ ವಿಶಿನ್ಸ್ಕಿಯವರಿಗೆ ತಮ್ಮ ಅಧಿಕಾರಪತ್ರವನ್ನು ಒಪ್ಪಿಸಬಹುದು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :

ಶ್ರೀ. ರಂ. ರಾ. ದಿವಾಕರ

ಸಂಪಾದಕರು :

ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಒಮ್ಮೆ ಚಂದಾದಾರರಾದವರಿಗೆ ಅವರ ಅವಧಿ ಮುಗಿಯುವ ೧೫ ದಿನ ಮುಂಚಿತವೇ ವ್ಹಿ. ಪಿ. ಮಾಡಲಾಗುವದು. ಬೇಡಾದವರು ಮೊದಲೇ ತಿಳಿಸಬೇಕು. ಚಂದಾ ಹಣ ಮುಂಗಡ.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ

ಸಂಪುಟ ೨೧ ಸಂಚಿಕೆ ೬೨ **ಕರ್ಮವೀರ** ಸೋಮವಾರ ಭಾದ್ರಪದ ವದ್ಯ ೫

ತಾರೀಖು ೧೨—೯—೧೯೪೯

ಮಿತವ್ಯಯದ ಯೋಜನೆಗಳು

ಹಿಂದುಸ್ಥಾನ ಸರಕಾರದ ವೆಚ್ಚವು ಮಿತಿಮೀರಿ ಹೆಚ್ಚುತ್ತಿದ್ದುದರಿಂದ ಮಿತವ್ಯಯದತ್ತ ಅದು ಧಾವಿಸಹತ್ತಿದೆ. ೧೯೪೯—೫೦ ನೆಯ ಇಸ್ವಿಯ ಆಯವ್ಯಯ ಪತ್ರಿಕೆಯ ಕಾಲಕ್ಕೆ ಸುಮಾರು ೪೫ ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗುವುದೆಂದು ಅರ್ಥಸಚಿವರು ಲೆಕ್ಕ ಹಾಕಿದ್ದರೆ ಈಗಾಗಲೆ ಆ ಉಳಿತಾಯ ಒತ್ತಟ್ಟಿಗುಳಿದು ೪೫ ಕೋಟಿ ರೂಪಾಯಿಗಳಷ್ಟು ಕೊರತೆಯಾಗಬಹುದೆಂದು ಎನಿಸಹತ್ತಿದೆ. ಕೇವಲ ಅಂದಾಜಿನ ಅಂಕಿಗಳಿವು. ಬರತಕ್ಕ ಉತ್ಪನ್ನದಲ್ಲಿ ಯಾವದೇ ಕಾರಣದಿಂದ ಇನ್ನೂ ಕಡಿತವಾದರೆ ಕೊರತೆ ಮತ್ತಷ್ಟು ಹೆಚ್ಚುವುದು. ಏಕೆಂದರೆ ವೆಚ್ಚದ ಬಾಬುಗಳಂತೂ ಕಡಮೆಯಾಗುವದೇ ಇಲ್ಲ. ಹೀಗೆ ಆರ್ಥಿಕ ದುಃಸ್ಥಿತಿಯು ಹದಗೆಡಹತ್ತಿದ್ದರಿಂದ ಹಿಂದುಸ್ಥಾನ ಸರಕಾರವು ಮತ್ತೆ ಅದರ ಕಡೆಗೆ ವಿವಂಚನೆಯಿಂದ ಲಕ್ಷ್ಯ ಹಾಕಹತ್ತಿದೆ. ಸುಮಾರು ಒಂದು ವರ್ಷ ಹಿಂದೆಯೇ ಇದೇ ಬಗೆಯಾಗಿ ಅತಿಪ್ರಸರಣದ ಅಬ್ಬರ ಹೆಚ್ಚಾದಾಗ ಸರಕಾರದವರು ಬಂಡವಲುದಾರರು, ಕೂಲಿಕಾರರು, ತಜ್ಞರು ಮೊದಲಾದವರೆಲ್ಲರನ್ನು ಕೂಡಿಸಿ ವಿಚಾರ ವಿನಿಮಯ ಮಾಡಿ ಕೆಲವೊಂದು ನಿರ್ಣಯಕ್ಕೆ ಬಂದಿದ್ದರು. ಆದರೆ ಆ ನಿರ್ಣಯಗಳನ್ನು ಕಾರ್ಯಕಾರಿ ಮಾಡುವಲ್ಲಿ ಸರಕಾರವು ಅಷ್ಟೊಂದು ಗಮನ ಕೊಡಲಿಲ್ಲ. ಈಗ ವಿವಂಚನೆಗೆ ಕಾರಣವಿಲ್ಲದಿದ್ದರೂ ಈಗಲೆ ಈ ದುಃಸ್ಥಿತಿಯನ್ನು ಹೋಗಲಾಡಿಸಲು ಉಪಾಯಗಳನ್ನು ಯೋಜಿಸುವದು ಅತ್ಯವಶ್ಯವಾಗಿದೆ.

ಸದ್ಯದಲ್ಲಿ ಬಳಕೆಯ ಪದಾರ್ಥಗಳ ಧಾರಣೆ ಮಿತಿಮೀರಿ ಏರಿದ್ದರಿಂದ ಅತಿಪ್ರಸರಣವು ಹೆಚ್ಚಿದೆ. ಈ ಧಾರಣೆಗಳ ಏರಿಕೆಯಿಂದ ಒಕ್ಕಲಿಗರಿಗೇನೋ ಸ್ವಲ್ಪ ಹೆಚ್ಚು ಹಣ ಬರಬಹುದು. ಆದರೆ ಆ ಹಣವನ್ನು ಹೇಗೆ ಉಳಿಸಿಕೊಂಡು ಒಳ್ಳೆ ಯೋಜನೆಗಳಲ್ಲಿ ತೊಡಗಿಸಬೇಕೆಂಬುದರ ಜ್ಞಾನವು ಅವರಿಗಿರದ್ದರಿಂದ ಆ ಹಣ ದುರುಪಯೋಗವಾಗಿ ಧಾರಣೆಗಳು ಮತ್ತಷ್ಟು ಏರಲು ಕಾರಣವಾಗುತ್ತದೆ. ಆದುದರಿಂದ ಈ ಧಾರಣೆಗಳನ್ನು ೧೦೦ ಕ್ಕೆ ೧೦ ರಷ್ಟು ಕಡಮೆ ಮಾಡಬೇಕೆಂದು ಸರಕಾರದವರು ನಿರ್ಧರಿಸಿರುವರೆಂದು ತಿಳಿಯುತ್ತದೆ. ಇಂತು ಧಾರಣೆಗಳು ಇಳಿದರೆ ಅತಿಪ್ರಸರಣವು ಕಡಮೆಯಾಗಿ ತುಟ್ಟಿಭತ್ತೆ ಮೊದಲಾದ್ದಕ್ಕಾಗಿ ಕೊಡಬೇಕಾಗಿದ್ದ ವೆಚ್ಚದಲ್ಲಿಯೂ ಉಳಿತಾಯವಾಗಬಹುದು. ಆದರೆ ಇಷ್ಟರಿಂದಲೆ ಉದ್ದೇಶವು ಸಾಧಿಸಲಾರದು. ಸರಕಾರದವರು ಇತ್ತೀಚೆ ಕೈಕೊಳ್ಳುತ್ತಿರುವ ಭಾರೀ ಯೋಜನೆಗಳಿಗಾಗಿ ಬಹಳಷ್ಟು ಹಣವು ವ್ಯಯವಾಗಹತ್ತಿದೆ. ಆ ಯೋಜನೆಗಳಲ್ಲಿ ಪ್ರಥಮ ಪ್ರಾಶಸ್ತ್ಯ ಯಾವದಕ್ಕೆ ಕೊಡಬೇಕು, ಯಾವ ಯೋಜನೆಗಳಿಂದ ಆದಷ್ಟು ಬೇಗ ಪ್ರತಿಫಲ ಸಿಕ್ಕಬಹುದು ಎಂಬದನ್ನು ಪೂರ್ಣವಾಗಿ ವಿಚಾರಿಸಿ ಯೋಜನೆಗಳನ್ನು ಕೈಕೊಳ್ಳುವದು ಅವಶ್ಯವಾಗಿದೆ. ಸರಕಾರದವರು ಯುದ್ಧ ಕಾಲದಲ್ಲಿ ಯೋಜಿಸಿದ ಅನೇಕ ಶಾಖೆಗಳು ಈಗ ಅನವಶ್ಯಕವಾಗಿವೆ. ಅಂಥವುಗಳನ್ನು ವಿಸರ್ಜಿಸಿ ಬಿಡುವದು ಉಳಿತಾಯದ ಮಾರ್ಗವಾಗಿದೆ. ಅನೇಕ ಶಾಖೆಗಳವರು ವಿಶೇಷವೇನೂ ಕೆಲಸವಿಲ್ಲದೆ ಬರಿ ಕಾಗದ ಕುದುರೆಗಳನ್ನು ಓಡಾಡಿಸುತ್ತ ಕಾಲ ಕಳೆಯುವುದುಂಟು. ಇಂಥ ಶಾಖೆಗಳನ್ನು ವಿಸರ್ಜಿಸಿ ಬಿಟ್ಟರೆ ಆಡಳಿತೆಯ ಕಾರ್ಯಕ್ರಮಕ್ಕೆ ಯಾವ ಬಗೆಯಿಂದಲೂ ವ್ಯತ್ಯಯವುಂಟಾಗದು. ಈ ಶಾಖೆಗಳ ವಿಸರ್ಜನೆಯಿಂದ ಅನೇಕ ಅಧಿಕಾರಿಗಳು ನಿರುದ್ಯೋಗಿಗಳಾಗುವದರಿಂದ ಅವರು ಇದನ್ನು ವಿರೋಧಿಸಬಹುದು. ಆದರೆ ಈ ಜನರನ್ನೆಲ್ಲ ವಿಲೀನವಾದ ಸಂಸ್ಥಾನ ಪ್ರದೇಶದ ಆಡಳಿತೆಯಲ್ಲಿ ತೊಡಗಿಸಬಹುದು ಹೊಸ ನೌಕರರನ್ನು ಸದ್ಯಕ್ಕೆ ನೇಮಿಸಿಕೊಳ್ಳುವುದನ್ನು ಬಿಟ್ಟು ಈಗಿದ್ದ ಅನವಶ್ಯಕ ಶಾಖೆಗಳನ್ನು ವಿಸರ್ಜಿಸಿ ತೀರ ಅವಶ್ಯಕ ಶಾಖೆಗಳಿಗಾಗಿ ಹಣವನ್ನು ವ್ಯಯ ಮಾಡುವದು ಅವಶ್ಯವಾಗಿದೆ.

ಹೆಚ್ಚು ಆಹಾರೋತ್ಪಾದನೆಯ ಯೋಜನೆಯಲ್ಲಿ ಲಾಭಕ್ಕಿಂತ ಹಾನಿಯೆ ಹೆಚ್ಚಾಗಹತ್ತಿದೆಂಬುದು ಸೂಕ್ಷ್ಮ ರೀತಿಯಿಂದ ವಿಚಾರ ಮಾಡಿದರೆ ಗೊತ್ತಾಗದಿರದು. ಸರಕಾರದವರು ಆಹಾರೋತ್ಪಾದನೆಯ ಪ್ರಚಾರಕ್ಕಾಗಿ ವ್ಯಯ ಮಾಡುವ ಹಣ ಮುಂತಾದ್ದು ಯಾವ ಪ್ರಮಾಣದಲ್ಲಿ ವೆಚ್ಚವಾಗುವದೋ ಆ ಪ್ರಮಾಣದಲ್ಲಿ ಆಹಾರೋತ್ಪಾದನೆಯು ಹೆಚ್ಚಳವಾಗಹತ್ತಿದೆಯೋ ಎಂಬದನ್ನು ವಿಮರ್ಶಿಸುವದು ಅವಶ್ಯವಾಗಿದೆ. ಈ ಯೋಜನೆಯಲ್ಲಿಯೇ ಹಣದ ಅಪವ್ಯಯವಾಗುವದೆಂದು ಅನೇಕರ ಕೂಗು. ಬರಿ ಕಾಗೇರಿಕೆ(?) ಅನುಭವಕ್ಕೆ ಬಂದ ಮಾತೂ ಅದಾಗಿದೆ. ಗೊಬ್ಬರ, ತಗಾಯಿ ಮೊದಲಾದ್ದಕ್ಕೆಂದು ತೆಗೆದುಕೊಂಡ ಸಾಲದ ಉಪಯೋಗವು ನಿಜವಾಗಿ ಅವಕ್ಕಾಗಿಯೇ ಆಗಿದೆಯೋ? ಒಕ್ಕಲಿಗರಿಗೆ ಯೋಗ್ಯ ಧಾರಣೆಯಲ್ಲಿ ದೊರೆಯಬೇಕಾಗಿದ ಹಳ, ಮತ್ತು ಇತರ ಕಬ್ಬಿಣ ಉಕ್ಕಿನ ಸಾಮಾನುಗಳು ದೊರೆಯುತಿವೆಯೋ? ಆಹಾರ ಪದಾರ್ಥಗಳನ್ನೆ ಹೆಚ್ಚು ಬೆಳೆಯಬೇಕೆಂಬ ನಿಯಮವನ್ನುಲ್ಲಂಘಿಸಿ ಹತ್ತಿ ತಂಬಾಕು ಮೊದಲಾದ ಹಣದ ಪೈರುಗಳನ್ನು ಬಿತ್ತುವ ಜನ ಎಷ್ಟು? ಇದೆಲ್ಲದರ ನಿಜವಾದ ಅಂಕಿ ಸಂಖ್ಯೆಗಳು ಹೊರಬಿದ್ದರೆ ಪ್ರಚಾರ ಕಾರ್ಯಕ್ಕಾಗಿ ಮಾಡುತಿರುವಷ್ಟು ಹಣ, ಉತ್ಸಾಹಶಕ್ತಿಗೆ ತಕ್ಕಷ್ಟು ಪ್ರತಿಫಲ ದೊರೆಯುವದಿಲ್ಲೆಂಬುದು ಕಂಡು ಬರದಿರಲಾರದು. ಈ ಬಗ್ಗೆ ವಿಚಾರ ಮಾಡುವದು ಪ್ರಾಂತೀಯ ಮತ್ತು ಕೇಂದ್ರ ಸರಕಾರಗಳ ಆದ್ಯ ಕರ್ತವ್ಯವಾಗಿದೆಯೆಂದು ನಾವು ಹೇಳಬಯಸುತ್ತೇವೆ.

ಮಧ್ಯಮ ವರ್ಗದ ಜನರಲ್ಲಿಯೆ ಸಾಧಾರಣವಾಗಿ ಹಣವನ್ನುಳಿಸುವ ರೂಢಿಯುಂಟು. ಆದರೀಗ ಅವರೆಲ್ಲ ಆರ್ಥಿಕ ದುಃಸ್ಥಿತಿಗೀಡಾದ್ದರಿಂದ ಸೆವ್ಹಿಂಗ್ಸ ಸರ್ಟಿಫಿಕೇಟು ಮುಂತಾದ್ದರಲ್ಲಿ ತೊಡಗಿಸುತಿದ್ದ ಹಣಕ್ಕೆ ಸಂಚಕಾರ ಬಂದಿದೆ. ಇನ್ನು ಶ್ರೀಮಂತರಾದರೊ ತಮ್ಮ ಹಣವನ್ನು ಹೊರಗೆ ತೆಗೆದರೆ ಎಲ್ಲಿ ಅದೆಲ್ಲ ಸರಕಾರದ ಪಾಲಾಗಬಹುದೊ ಎಂದು ಹೆದರಿಕೊಂಡಿದ್ದಾರೆ. ಹೀಗಾಗಿ ಔದ್ಯೋಗೀಕರಣಕ್ಕಾಗಿ ಹಣ ಸಿಕ್ಕದಂತಾಗಿದೆ. ಈ ಬಗ್ಗೆಯೂ ಸರಕಾರದವರು ವಿಚಾರ ಮಾಡಿ ಶ್ರೀಮಂತರು ಬಚ್ಚಿಟ್ಟ ಹಣ ಹೊರಗೆ ಬರುವಂತೆ ಯೋಜಿಸಬೇಕು. ಕಳೆದ ವರುಷ ಪ್ರಾರಂಭಿಸಿದ ಮಿತವ್ಯಯದ ಯೋಜನೆಗಳನ್ನು ಲೋಕಪ್ರಿಯ ಮಾಡುವಲ್ಲಿ ಆ ಶಾಖೆಯವರು ಪ್ರಯತ್ನಿಸಬೇಕು ಸರಕಾರ ತೆಗೆಯುತಿರುವ ಸಾಲ ತೆಗೆದುಕೊಳ್ಳಲು ಜನ ಅಷ್ಟೊಂದು ಉತ್ಸಾಹದಿಂದ ಇತ್ತೀಚೆ ಮುಂದೆ ಬರುತಿರುವದಿಲ್ಲ. ಇದನ್ನು ನೋಡಿದರೆ ಮಧ್ಯಮವರ್ಗದವರ ಆರ್ಥಿಕಪರಿಸ್ಥಿತಿ ಎಷ್ಟು ಕೆಟ್ಟಿದೆ ಎಂಬುದು ಗೊತ್ತಾಗುವದು. ಈ ಎಲ್ಲ ಸಾಲಗಳ ಮೇಲೆ ಮಿತಿಮೀರಿ ಕರ ಬೀಳುವದೆಂದು ಶ್ರೀಮಂತರು ತಮ್ಮ ಹಣವನ್ನು ತೊಡಗಿಸುವಲ್ಲಿ ಉತ್ಸಾಹ ತೋರುವದಿಲ್ಲ. ಹೀಗಾಗಿ ಎಲ್ಲೆಲ್ಲಿಯೂ ಆರ್ಥಿಕ ಮಾಂದ್ಯ ಕಂಡು ಬರಹತ್ತಿದೆ. ಆದರೂ ಸರಕಾರವು ಎಣಿಸಿದಷ್ಟು ಪರಿಸ್ಥಿತಿ ಹದಗೆಟ್ಟಿಲ್ಲ. ಆದುದರಿಂದ ಸರಕಾರದವರು ಯಾವುದೇ ಬಗೆಯಿಂದ ಧೈರ್ಯಗೆಡದೆ ಅವಶ್ಯಕ

[illegible] ಗಳನ್ನು [illegible] ಶ್ರೀಮಂತರ [illegible]

× × ×

ಪಾಕಿಸ್ತಾನದವರು [illegible] ಹಿಂದುಸ್ಥಾನ ಸರಕಾರದ ವಿರುದ್ಧ ಅಪವಾದ ಎಬ್ಬಿಸಿ [illegible] ಪ್ರಯತ್ನಿಸಿದರು. ಆದರೆ ಹಿಂದುಸ್ಥಾನದಲ್ಲಿಯ ಮುಸಲ್ಮಾನರು ಅವರಿಗೆ ಯೋಗ್ಯ ಉತ್ತರ ಕೊಟ್ಟು ಅವರ ಕಣ್ಣಲ್ಲಿ [illegible] ಹಾಕಿದರು. [illegible] ಪಾಕಿಸ್ತಾನ ಸರಕಾರದವರು [illegible] ಭಾರೀ ಶಸ್ತ್ರಾಸ್ತ್ರಗಳನ್ನು ಕೊಳ್ಳುತ್ತಿರುವರೆಂದು ತಿಳಿಯುತ್ತದೆ. [illegible] ಪಾಕಿಸ್ತಾನ ಸರಕಾರದ ಸೈನ್ಯದ ವೆಚ್ಚ [illegible] ಹಿಂದುಸ್ಥಾನ ಸರಕಾರದ ಸೈನ್ಯದ ವೆಚ್ಚವು ಭಾರಿಯಿದ್ದರೂ ಪಾಕಿಸ್ತಾನ ಸರಕಾರದ ವೆಚ್ಚದಷ್ಟು ಇಲ್ಲೆಂದು ಗೊತ್ತಾಗುವದು. ಇಷ್ಟೊಂದು ಭಾರಿ ಶಸ್ತ್ರಾಸ್ತ್ರಗಳನ್ನು ಕೊಳ್ಳುವದರಲ್ಲಿ ಪಾಕಿಸ್ತಾನ ಸರಕಾರದ ಉದ್ದೇಶವೇನಿದೆಯೋ ತಿಳಿಯದು! ನೆರೆಯ ರಾಷ್ಟ್ರಗಳ ಮೇಲೆ [illegible] ಕೂಡಿಸಲಿಕ್ಕೋ ಇಲ್ಲವೆ [illegible] ಸಮರವನ್ನು ಶುರು ಮಾಡುವದಕ್ಕೋ?

× × ×

[illegible] ಸಕ್ಕರೆಯ ಉದ್ದಿಮೆದಾರರು ಮಿತಿಮೀರಿ ಲಾಭ ಮಾಡಿಕೊಳ್ಳ[illegible] ಸರಕಾರದವರು ಸಕ್ಕರೆಯ ಸಂಗ್ರಹವನ್ನೆಲ್ಲ ತಮ್ಮ ವಶಪಡಿಸಿಕೊಳ್ಳಲು ನಿರ್ಧರಿಸಿರುವರು. [illegible]

ಮಧ್ಯಸ್ಥರ ನೇಮಕಕ್ಕೆ ಒಪ್ಪಲಾರೆವು

ಟ್ರೂಮನ್—ಆಟ್ಲೆಯವರಿಗೆ ಮುಖ್ಯ ಮಂತ್ರಿಗಳ ಉತ್ತರ

ಆಹಾರೋತ್ಪಾದನೆಯತ್ತ ಲಕ್ಷ ಕೊಡಲು ಆಹಾರ ಕಮೀಶನರರ ಬಿನ್ನಹ

ಟ್ರೂಮನ್ ಆಟ್ಲೆಯವರಿಗೆ ಉತ್ತರ

ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿ ಮಧ್ಯಸ್ಥರ ನಿರ್ಣಯಕ್ಕೊಪ್ಪಿಕೊಳ್ಳಿರಿ ಎಂದು ಅಮೇರಿಕೆಯ ಅಧ್ಯಕ್ಷ ಟ್ರೂಮನ್ ಮತ್ತು ಬ್ರಿಟನ್ನಿನ ಮುಖ್ಯಮಂತ್ರಿ ಅಟ್ಲಿಯವರು ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಕ್ಕೆ ಕೇಳಿಕೊಂಡಿದ್ದರಷ್ಟೆ. ಹಿಂದುಸ್ತಾನ ಸರಕಾರದ ಪರವಾಗಿ ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲರು ಅದಕ್ಕೆ ಉತ್ತರ ಕಳಿಸುತ್ತ ಹಿಂದುಸ್ತಾನ ಮತ್ತು ನೆರೆಯ ರಾಷ್ಟ್ರಗಳಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವದಕ್ಕಾಗಿ ಟ್ರೂಮನ್‌ರು ತಾಳಿದ ಆಸ್ಥೆಗಾಗಿ ಅವರನ್ನಭಿನಂದಿಸಿದುವದಲ್ಲದೆಶಾಂತಿಸ್ಥಾಪನೆಗಾಗಿ ತಮಗೂ ಅಷ್ಟೆ ಆಸ್ಥೆಯಿದೆಯೆಂದು ತಿಳಿಸಿದ್ದಾರೆ. ಆದರೆ ಕಾಶ್ಮೀರ ಪ್ರಶ್ನೆಯಲ್ಲಿ ಮಧ್ಯಸ್ತರ ನಿರ್ಣಯಕ್ಕೆ ಒಪ್ಪುವುದನ್ನು ನಿರಾಕರಿಸಿದ್ದೇಕೆ ಎಂಬದನ್ನು ವಿವರಿಸುತ್ತ ಹಿಂದುಸ್ತಾನ ಸರಕಾರದ ನಿಲುಮೆಯನ್ನು ಸ್ಪಷ್ಟಪಡಿಸಿರುವರು. ಮೊದಲನೆಯದಾಗಿ ಇಂಥ ಮುದ್ದೆಗಳ ಸಂಬಂಧದಲ್ಲಿಯೇ ಮಧ್ಯಸ್ತರನ್ನು ಕೇಳಿಕೊಳ್ಳಬೇಕೆಂಬದನ್ನು ಸ್ಪಷ್ಟಪಡಿಸಿಲ್ಲ. ಮಧ್ಯಸ್ತನಾದವನು ಬೇಕಾದ ಮುದ್ದೆಗಳನ್ನಾರಿಸಿಕೊಂಡು ತನಗೆ ತಿಳಿದಂತೆ ನಿರ್ಣಯಕೊಡಬಹುದೆಂದು ಹೇಳುವದು ವಿಲಕ್ಷಣ ತೋರುತ್ತದೆ. ಆಜಾದ ಕಾಶ್ಮೀರ ಸೈನ್ಯದ ವಿಸರ್ಜನೆ ಮತ್ತು ನಿಃಶಸ್ತ್ರೀಕರಣವನ್ನು ಜನಮತಗಣನೆ ನಡೆಯುವ ಮೊದಲೇ ಸಾಧಿಸತಕ್ಕದ್ದು ಎಂಬುದನ್ನು ಕಾಶ್ಮೀರ ಸಮಿತಿಯು ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಆ ವಚನವನ್ನು ಕಾರ್ಯರೂಪದಲ್ಲಿತರುವದನ್ನು ಬಿಟ್ಟು ಕಾಶ್ಮೀರ ಸಮಿತಿಯು ಹಿಂದೆ ತಾನು ಕೊಟ್ಟ ವಚನವನ್ನು ದುರ್ಲಕ್ಷಿಸಬೇಕೆಂದೂ ಈ ಪ್ರಶ್ನೆಯ ಬಗ್ಗೆ ಮಧ್ಯಸ್ತರ ನಿರ್ಣಯಕ್ಕೆ ಒಪ್ಪಸಬೇಕೆಂದು ಈಗ ಕೇಳಿಕೊಳ್ಳುತ್ತದೆ. ಪಾಕಿಸ್ತಾನವು ಆಜಾದ ಕಾಶ್ಮೀರ ಸೈನ್ಯದ ಬಗ್ಗೆ ಅದು ಮೊದಲು ಹೇಳುತ್ತ ಬಂದುದಕ್ಕೂ ಈಗ ಒಪ್ಪಿಕೊಂಡಿದ್ದಕ್ಕೂ ಇರುವ ವ್ಯತ್ಯಾಸವನ್ನು ಎತ್ತಿತೋರಿಸಿದ್ದಾರೆ. ಪಾಕಿಸ್ತಾನದ ನಿಲುಮೆ ಇಂತು ಆಕ್ಷೇಪಾರ್ಹ ಮತ್ತು ಅನ್ಯಾಯದ್ದಾಗಿರುವದೆಂಬುದು ಸುಸ್ಪಷ್ಟವಿದೆ. ಅಂತೆಯೇ ಕೊನೆಯಲ್ಲಿ ಪಂಡಿತ ಜವಾಹರಲಾಲರು ಈ ಬಗ್ಗೆ ತಪ್ಪುತಿಳುವಳಿಕೆ ಪಡಿದುಕೊಳ್ಳಬಾರದೆಂದು ಕೇಳಿಕೊಂಡಿದ್ದಾರೆ. ಟ್ರೂಮನ್ ಮತ್ತು ಅಟ್ಲಿಯವರು ಈ ಬಗ್ಗೆ ಪಾಕಿಸ್ತಾನಕ್ಕೆ ಯೋಗ್ಯ ಬುದ್ಧಿವಾದ ಹೇಳುವರೆಂದು ನಂಬಬಹುದೋ?

ಸಂಯುಕ್ತ ಪರಿಷತ್ತು ಕೂಡಲಿಲ್ಲೇಕೆ?

ಕಾಶ್ಮೀರ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಅನೇಕ ತಿಂಗಳು ಕೂಡಲಿದ್ದ ತ್ರಿಪಕ್ಷೀಯ ಪರಿಷತ್ತು ಏಕೆ ಕೂಡಲಿಲ್ಲ ಎಂಬ ವಿಷಯವು ಈ ಹೊತ್ತು ಪ್ರಸಿದ್ಧವಾಗಿದೆ. ಈ ಸಂಬಂಧದಲ್ಲಿ ಕಾಶ್ಮೀರ ಸಮಿತಿ, ಭಾರತ ಮತ್ತು ಪಾಕಿಸ್ತಾನ ಸರಕಾರ ಪ್ರತಿನಿಧಿಗಳಲ್ಲಿ ನಡೆದ ಪತ್ರವ್ಯವಹಾರವೀಗ ಪ್ರಸಿದ್ಧವಾಗಿದೆ. ಪರಿಷತ್ತಿನ ಸಂಬಂಧದಲ್ಲಿ ಭಾರತ ಮತ್ತು ಪಾಕಿಸ್ತಾನ ಗಳಿಂದ ಬಂದ ಸೂಚನೆಗಳನ್ನು ಮತ್ತು ಈ ಪ್ರಶ್ನೆಯ ಒಪ್ಪಿಗೆಯನ್ನು ಲಕ್ಷಿಸಿ ಪರಿಷತ್ತನ್ನು ಕೂಡಿಸುವದರಿಂದ ಏನೂ ಲಾಭವಿಲ್ಲೆಂದೆನಿಸ್ಸಿದ್ದರಿಂದ ಅದನ್ನು ರದ್ದುಗೊಳಿಸಲಾಯಿತೆಂದು ಸಮಿತಿಯು ಅಭಿಪ್ರಾಯಪಟ್ಟಿದೆ. ಪರಿಷತ್ತಿಗೆ ಬರಲು ಕೊಟ್ಟ ಆಮಂತ್ರಣವನ್ನು ಹಿಂದುಸ್ತಾನ ಸರಕಾರದ ಸರ್ ಗಿರಿಜಾ ಶಂಕರ ಬಾಜಪೇಯಿಯವರು ಸ್ವೀಕರಿಸುತ್ತ, ಆಜಾದ ಕಾಶ್ಮೀರ ಸೈನ್ಯದ ನಿಃಶಸ್ತ್ರೀಕರಣ ಮತ್ತು ವಿಸರ್ಜನೆಯ ಬಗ್ಗೆ ಕೈಕೊಳ್ಳುವ ಕ್ರಮಗಳನ್ನು ವಿಷಯಪಟ್ಟಿಯಲ್ಲಿ ಸೇರಿಸಬೇಕೆಂದು ಸೂಚಿಸಿದ್ದರು. ಈ ವಿಷಯ ಪಟ್ಟಿಯನ್ನು ಕೊನೆಗೊಮ್ಮೆ ನಿರ್ಧರಿಸುವಾಗ ಈ ಪ್ರಶ್ನೆಯನ್ನು ತೆಗೆದುಕೊಳ್ಳಬಹುದೆಂದು ಸಮಿತಿಯವರು ಸೂಚಿಸಿದ್ದಕ್ಕೆ ಗಿರಿಜಾ ಶಂಕರರು ಒಪ್ಪಿಕೊಂಡರು. ಆದರೆ ಪಾಕಿಸ್ತಾನ ಸರಕಾರವು ಕಳಿಸಿದ ಆಮಂತ್ರಣವನ್ನು ಸ್ವೀಕರಿಸುತ್ತ ವಿಷಯಪಟ್ಟಿಯಲ್ಲಿಯ ಕೊನೆಯ ವಿಷಯವಾದ "ಸಂಬಂಧಿಸಿದ ಪ್ರಶ್ನೆಗಳು" ಎಂಬುದನ್ನು ತೆಗೆದುಹಾಕಿದರೆ ಮಾತ್ರ ತಾನು ಪರಿಷತ್ತಿಗೆ ಬರುವದಾಗಿ ತಿಳಿಸಿತ್ತು. ಇನ್ನೊಂದು ಪತ್ರದಲ್ಲಿ ಅವರು ಆಜಾದ ಕಾಶ್ಮೀರ ಸೈನ್ಯದ ವಿಸರ್ಜನೆ ಮತ್ತು ಉತ್ತರ ಕಾಶ್ಮೀರವನ್ನು ಭಾರತಕ್ಕೆ ಹಸ್ತಾಂತರಿಸುವದು ಎಂಬ ಭಾರತದ ಬೇಡಿಕೆಯು ಸಮಿತಿಯ ಕಳೆದ ತಿಂಗಳ ಗೊತ್ತುವಳಿಗೆ ವಿರುದ್ಧವಿರುವದರಿಂದ ಅದನ್ನು ವಿಷಯಪಟ್ಟಿಯಲ್ಲಿ ಸೇರಿಸಬಾರದೆಂದು ಅಭಿಪ್ರಾಯಪಟ್ಟರು. ಈ ರೀತಿ ಪರಸ್ಪರರಲ್ಲಿ ಮತಭೇದವಾಗಿರುವಾಗ ಪರಿಷತ್ತನ್ನು ಸೇರಿಸುವದರಿಂದ ಪ್ರಯೋಜನವಾಗದೆಂದು ಭಾವಿಸಿ ಸಮಿತಿಯ ಅಧ್ಯಕ್ಷರು ಈ ಸಂಯುಕ್ತ ಪರಿಷತ್ತನ್ನು ರದ್ದುಗೊಳಿಸಲಾಗಿದೆ ಎಂದು ತಂತಿಯಿಂದ ಎರಡೂ ಸರಕಾರಗಳಿಗೆ ತಿಳಿಸಿದರು.

ಮಹಾಸಮಿತಿಯ ವಿಸರ್ಜನೆ

ಕರ್ನಾಟಕ ಏಕೀಕರಣ ಮಹಾ ಸಮಿತಿಯ ವಿಶೇಷ ಸಾಧಾರಣ ಸಭೆಯಲ್ಲಿ ಮಹಾ ಸಮಿತಿಯನ್ನು ವಿಸರ್ಜನೆ ಮಾಡಬೇಕೆಂಬ ಗೊತ್ತುವಳಿಯು ಸ್ವೀಕೃತವಾಯಿತು. ಆ ಗೊತ್ತುವಳಿಯ ಪೂರ್ತಿಪಾಠವು ಇಂತಿದೆ. ಕರ್ನಾಟಕ ಏಕೀಕರಣ ಸಮಸ್ಯೆಯು ಏಕೀಕರಣ ಇಲ್ಲವೆ ಮರಣ ಎನ್ನುವಷ್ಟರ ಮಟ್ಟಿಗೆ ಈಗ ನಿಕರಕ್ಕೆ ಬಂದಿದ್ದು ಅಖಿಲ ಭಾರತೀಯ ಕಾಂಗ್ರೆಸ ಕಾರ್ಯಕಾರೀ ಸಮಿತಿಯು ಈ ಬಗ್ಗೆ ವಹಿಸಿದ ಈ ವರೆಗಿನ ಮೌನದ ಧೋರಣೆಯನ್ನು ಸೂಕ್ಷ್ಮ ರೀತಿಯಿಂದ ಪರಿಶೀಲಿಸಲಾಗಿ ಕರ್ನಾಟಕವು ಬೇಗನೆ ಉಗ್ರವಾದ ಕಾರ್ಯರಂಗಕ್ಕಿಳಿಯುವ ಸಮಯ ಸನ್ನಿಹಿತವಾಗಿದೆಯೆಂದು ಈ ಸಭೆಗೆ ಖಚಿತವಾಗಿ ಮನವರಿಕೆಯಾಗಿದೆ. ಈ ಬಗೆಯ ತೀಕ್ಷ್ಣ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯೂ ತೀವ್ರ ಫಲಪ್ರದವೂ ಆಗಬೇಕಾದ್ದಲ್ಲಿ ಜನತೆಗೆ ಏಕಮುಖವಾದ ಮಾರ್ಗದರ್ಶನವು ಅನಿವಾರ್ಯವಾಗಿದೆ. ಅಲ್ಲದೆ ಮಹಾ ಸಮಿತಿಗೆ ಅದರ ಜನಕಸಂಸ್ಥೆಗಳಾದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ ಮತ್ತು ಅಖಿಲ ಕರ್ನಾಟಕ ಏಕೀಕರಣ ಸಂಘಗಳಿಂದ ಇನ್ನು ಮುಂದೆ ಎದುರಿಸಬೇಕಾದ ಸಮಸ್ಯೆಗಳ ಬಗ್ಗೆ ಸ್ವತಂತ್ರ ಕಾರ್ಯನೀತಿಯು ಅಧಿಕೃತವಾಗಿ ಒಪ್ಪಿಸಲ್ಪಟ್ಟಿಲ್ಲವಾದ್ದರಿಂದ ಹಾಗು ಅದರ ಜನಕ ಸಂಸ್ಥೆಗಳು ಪರಿಸ್ಥಿತಿಗನುಸರಿಸಿ ತಮತಮಗೆ ಉಚಿತವಾದ ರೀತಿಯಲ್ಲಿ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಲು ಮುಕ್ತದ್ವಾರವಿರಬೇಕಾದುದು ಯುಕ್ತವಾದುದರಿಂದ ಮಹಾ ಸಮಿತಿಯನ್ನು ಸಾಧ್ಯವಿದ್ದಷ್ಟು ಬೇಗನೆ ವಿಸರ್ಜಿಸಿ ಪರಿಣಾಮಕಾರಿಯಾದ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಆ ಜನಕ ಸಂಸ್ಥೆಗಳಿಗೆ ಕರ್ನಾಟಕ ಏಕೀಕರಣ ಮಹಾ ಸಮಿತಿಯ ವಿಶೇಷ ಸಾಧಾರಣ ಸಭೆಯು ಬಿನ್ನವಿಸಿಕೊಳ್ಳುತ್ತದೆ." ಮಹಾಸಮಿತಿಯಲ್ಲಿ ಈ ಗೊತ್ತುವಳಿ ಸ್ವೀಕೃತವಾಗುವ ಮೊದಲು ಒಳ್ಳೆ ಕುರುಹಿನ ಚರ್ಚೆಯಾಯಿತು. ವಿಸರ್ಜಿಸಬೇಕೆಂದು ದೊಡ್ಡ ಹೋಟಿ, ಸೇಸ್ಕ್ಯ ಮೊದಲಾದವರು ಪ್ರತಿಪಾದಿಸಿದರೆ ಮೂಗಳಿ, ಹಳ್ಳಿಕೇರಿ ಮೊದಲಾದವರು ಈ ಸಂಸ್ಥೆ ಜೀವಂತ ಇರುವದು ಅವಶ್ಯವಾಗಿದೆಯೆಂದು ಅಭಿಪ್ರಾಯಪಟ್ಟರು. ಮತಗಣನೆಯಲ್ಲಿಯೂ ಕುರುಹು; ಪಡೆದು ೧೩ ವಿರುದ್ಧ ೬ ಮತಗಳಿಂದ ಗೊತ್ತುವಳಿ ಸ್ವೀಕೃತವಾಯಿತು. ಮಹಾ ಸಮಿತಿಯು ಈ ವರೆಗೆ ೪೦ ಸಾವಿರ ರೂಪಾಯಿಗಳನ್ನು ಕೂಡಿಸಿ ಏಕೀಕರಣ ಪ್ರಚಾರ ಕಾರ್ಯಕ್ಕಾಗಿ ಖರ್ಚು ಮಾಡಿದೆಂದು ತಿಳಿಯುತ್ತದೆ. ಮಹಾಸಮಿತಿಯು ಸ್ವೀಕರಿಸಿದ ಇನ್ನೊಂದು ಗೊತ್ತುವಳಿಯಲ್ಲಿ ಕರ್ನಾಟಕ ಪ್ರಾಂತೀಕರಣದ ಬಗ್ಗೆ ಕಾಂಗ್ರೆಸವರಿಷ್ಠರು ತಾಳಿದ ಅನಾಸ್ಥೆಯಿಂದ ಪರಿಸ್ಥಿತಿ ಹದಗೆಡುತ್ತ ನಡೆದದ್ದನ್ನನು ಲಕ್ಷಿಸಿ ಬರುವ ರಾಜ್ಯಘಟನೆಯಲ್ಲಿಯೆ ಕರ್ನಾಟಕ ಸ್ವತಂತ್ರ ಪ್ರಾಂತದ ಉಲ್ಲೇಖ ಮಾಡಬೇಕೆಂದು ಕಾಂಗ್ರೆಸ ವರಿಷ್ಠರನ್ನು ಕೇಳಿಕೊಂಡು ಕನ್ನಡಿಗರೂ ತಮ್ಮ ಶಕ್ತಿ ಮೀರಿ ಪ್ರಯತ್ನಿಸಿ ಧ್ಯೇಯವನ್ನು ಸಾಧಿಸಿಕೊಳ್ಳಬೇಕೆಂದು ಬಿನ್ನವಿಸಲಾಗಿದೆ. ಮತ್ತೊಂದು ಗೊತ್ತುವಳಿಯಿಂದ ಮುಂಬಯಿ ಸರಕಾರವು ಕರ್ನಾಟಕದ ಹಿತಸಂಬಂಧಗಳ ಬಗ್ಗೆ ಇರುವ ತನ್ನ ಜವಾಬ್ದಾರಿಯನ್ನು ಮಾಡಿಲ್ಲೆಂದು ಹೇಳಿ ಆ ಬಗ್ಗೆ ವಿಸ್ತೃತ ವಿವರಗಳನ್ನು ಕೊಡಲಾಗಿದೆ. ಗೊತ್ತುವಳಿಯ ಕೊನೆಯಲ್ಲಿ ಕರ್ನಾಟಕದ ಪ್ರತಿನಿಧಿಗಳೆಲ್ಲ ಸಂಘಟಿತ ಪ್ರಯತ್ನ ಮಾಡಿ ಈಯೆಲ್ಲ ದೂರುಗಳ ನಿವಾರಣೆ ಮಾಡಿಕೊಳ್ಳಬೇಕೆಂದೂ ಕೇಳಿಕೊಳ್ಳಲಾಗಿದೆ.

ಪರಿಶಿಷ್ಟ ಪ್ರದೇಶಗಳು

ಪತ್ರಿಕೆಗಳ ಮೇಲೆ ಜಾಹಿರಾತು ಕರ ಹೇರಬೇಕೋ ಬಾರದೊ, ಆ ಕರ ಹೇರುವ ಅಧಿಕಾರವು ಪ್ರಾಂತೀಯ ಸರಕಾರದ್ದೊ ಇಲ್ಲವೆ ಕೇಂದ್ರ ಸರಕಾರದ್ದೊ ಎಂಬ ಪ್ರಶ್ನೆಯ ಬಗ್ಗೆ ಘಟನಾ ಸಮಿತಿಯಲ್ಲಿ ಕುರುಹಿನ ಚರ್ಚೆಯಾಯಿತು. ಕೊನೆಗೆ ಲಾಲಾ ದೇಶಬಂಧು ಗುಪ್ತರು ಮಂಡಿಸಿದ ವಿಧಿಬಿಂದುವಿನ ಬಗ್ಗೆ ಅಧ್ಯಕ್ಷ ಡಾ. ರಾಜೇಂದ್ರ ಬಾಬುಗಳು ತಮ್ಮ ನಿರ್ಣಯ ಹೇಳಿ ಇದರ ಇತ್ಯರ್ಥ ಮಾಡಿದರು. ಪತ್ರಿಕೆಗಳು ಮತ್ತು ಅವುಗಳಲ್ಲಿ ಪ್ರಸಿದ್ಧವಾಗುವ ಜಾಹೀರಾತುಗಳ ಮೇಲೆ ಕರ ಹೇರಬಾರದೆಂದು ರಾಜ್ಯಘಟನೆಯ ೧೩ ನೆಯ ಕಲಮಿನಲ್ಲಿ ಎಲ್ಲಿಯೂ ಹೇಳಿಲ್ಲ. ಆದುದರಿಂದ ಈ ಮಸೂದೆ ಕ್ರಮಬದ್ಧವಾಗಿದೆಂದು ಅಧ್ಯಕ್ಷರು ತಮ್ಮ ನಿರ್ಣಯದಲ್ಲಿ ಅಭಿಪ್ರಾಯಪಟ್ಟರುವರು. ಈ ವಿಷಯವು ಪ್ರಾಂತೀಯ ಸರಕಾರದ ಅಧಿಕಾರ ಕ್ಷೇತ್ರದಲ್ಲಿ ಸಮಾವೇಶವಾಗದೆ ಕೇಂದ್ರ ಸರಕಾರದ ವಿಷಯಗಳ ಯಾದಿಯಲ್ಲಿ ಸೇರ್ಪಡೆಯಾಗತಕ್ಕದ್ದೆಂದು ನಿರ್ಣಯವಾಯಿತು. ಪತ್ರಿಕೆಗಳ ಮೇಲೆ ಕರಹೇರಬೇಕೋ ಬಾರದೊ ಎಂಬ ವಿಷಯದ ಚರ್ಚೆ ಮತ್ತೊಂದು ದಿನ ನಡೆಯಲಿದೆ ಎಂದೂ ಅಧ್ಯಕ್ಷರು ಅಭಿಪ್ರಾಯಪಟ್ಟರು.

ಮದುವೆ, ಬಿಡುಗಡೆ, ಶಿಶುಗಳು ಅಲ್ಪವಯಸ್ಕರ ಸಂರಕ್ಷಣೆ ಮುಂತಾದ ವಿಷಯಗಳ ಕಲಮು ಸ್ವೀಕೃತವಾಯಿತು. ಪರಿಶಿಷ್ಟ ಪ್ರದೇಶಗಳ ಆಡಳಿತ ಮತ್ತು ಪರಿಶಿಷ್ಟ ವರ್ಗಗಳ ನಿಯಂತ್ರಣ ಇವುಗಳಿಗೆ ಸಂಬಂಧಿಸಿದ ಕಲಮುಗಳ ೫ ನೆ ಪರಿಶಿಷ್ಟದ ಮೇಲೆ ೫ ನೇ ತಾರೀಕಿನ ದಿನ ಚರ್ಚೆ ನಡೆದು ಅದು ಸ್ವೀಕೃತವಾಯಿತು. ಅಸಾಮ ಪ್ರಾಂತದಲ್ಲಿಯ ಗುಡ್ಡಗಾಡು ಪ್ರದೇಶದ ಆಡಳಿತೆಗೆ ಸಂಬಂಧಿಸಿದ ಆರನೇ ಪರಿಶಿಷ್ಟದ ಚರ್ಚೆಯೂ ಇಂದು ನಡೆಯಿತು. ಪರಿಶಿಷ್ಟ ಪ್ರದೇಶಗಳ ಆಡಳಿತೆಯ ಬಗ್ಗೆ ಘಟಕಗಳಿಗೆ ಮಾರ್ಗದರ್ಶನ ಮಾಡುವ ಅಧಿಕಾರವು ಒಕ್ಕೂಟ ಸರಕಾರಕ್ಕೆ ಸೇರಿದೆ. ಘಟಕದ ಗವರ್ನರರು ಇಲ್ಲವೆ ರಾಜಪ್ರಮುಖರು ಪರಿಶಿಷ್ಟ ವರ್ಗದ ಪ್ರತಿನಿಧಿಗಳು ೩/೪ ಸಂಖ್ಯೆಯಲ್ಲಿ ಇದ್ದ ೨೦ ಜನರಿಗೆ ಮೀರದಷ್ಟು ಸದಸ್ಯರುಳ್ಳ ಸಲಹೆ ಸಮಿತಿಯನ್ನು ನೇಮಿಸಬೇಕು. ಪರಿಶಿಷ್ಟ ಪ್ರದೇಶಗಳಿಗೆ ಶಾಸನ ಸಭೆ ಅಥವಾ ಪಾರ್ಲಮೆಂಟು ಪಾಸು ಮಾಡುವ ಕಾನೂನು ಅನ್ವಯಿಸುವದಿಲ್ಲವೆಂದೂ ಗವರ್ನರರು ಸಾರಬಹುದು. ಭೂಮಿಯ ಹಸ್ತಾಂತರವನ್ನು ನಿಯಂತ್ರಿಸುವ, ಅವರಿಗೆ ಸಾಲ ಕೊಡುವವರ ಮೇಲೆ ನಿಯಂತ್ರಣ ಹಾಕುವ ಕಟ್ಟಳೆಗಳನ್ನು ಗವರ್ನರರು ಇಲ್ಲವೆ ರಾಜಪ್ರಮುಖರು ಮಾಡಬಹುದು. ಇಂಥ ಕಟ್ಟಳೆಗಳಿಗೆ ಒಕ್ಕೂಟ ಪ್ರದೇಶದ ಅಧ್ಯಕ್ಷನು ಒಪ್ಪಿಗೆ ಕೊಡತಕ್ಕದ್ದು ಎಂದು ಮುಂತಾಗಿ ಈ ಕಲಮಿನಲ್ಲಿ ಹೇಳಿದೆ.

ಅಸಾಮ ಗುಡ್ಡಗಾಡು ಪ್ರದೇಶ

ಅಸಾಮ ಗುಡ್ಡಗಾಡು ಪ್ರದೇಶಗಳ ಆಡಳಿತೆಗೆ ಸಂಬಂಧಪಟ್ಟ ೬ ನೇ ಪರಿಶಿಷ್ಟದಲ್ಲಿಯ ೧೯ ಕಲಮುಗಳು ೬ ನೇ ತಾರೀಕಿನ ದಿನ ಸ್ವೀಕೃತವಾದವು. ಅಸಾಮದ ಗುಡ್ಡಗಾಡು ಪ್ರದೇಶಗಳ ಆಡಳಿತೆಯನ್ನು ಗವರ್ನರರು ಪ್ರಾಂತ ಮಂತ್ರಿಮಂಡಳ ಸಹಾಯದಿಂದ ... ಹೊಂದಿದ ಸದಸ್ಯರುಳ್ಳ ಪ್ರಾದೇಶಿಕ ಹಾಗು ಜಿಲ್ಲಾ ಸಮಿತಿಗಳ ಮುಖಾಂತರ ಸಾಗಿಸಬೇಕು. ಈ ಸಮಿತಿಗಳಿಗೆ ಕೆಲವೊಂದು ವಿಷಯಗಳಲ್ಲಿ ಪ್ರಾದೇಶಿಕಸ್ವಾಯತ್ತತೆಯಿರುವದು. ಕೆಲ ವಿಷಯಗಳಲ್ಲಿ ಗವರ್ನರರಿಗೆ ಈ ಸಮಿತಿಗಳ ನಿರ್ಣಯಗಳನ್ನುರದ್ದುಗೊಳಿಸು ಇಲ್ಲವೆ ತಡೆ ಹಿಡೆಯುವಹೆಚ್ಚಿನ ಅಧಿಕಾರವಿದೆ ಎಂದು ಮುಂತಾದ ಕಲಮುಗಳು ಇಂದು ಸ್ವೀಕೃತವಾದವು. ಪರಿಶಿಷ್ಟ ವರ್ಗದವರೆಂದು ಕರೆಯಬೇಡಿರೆಂಬ ಮುಂತಾದ ಟೀಕೆಗೆ ಡಾ. ಅಂಬೇಡಕರರು ಸಮಯೋಚಿತ ಉತ್ತರ ಕೊಡುತ್ತ ಅಸಾಮದಲ್ಲಿಯ ಗುಡ್ಡಗಾಡುಜನರ ವಿಶಿಷ್ಟ ಪರಿಸ್ಥಿತಿಯ ಮೂಲಕ ಇದು ಅವಶ್ಯವೆಂದು ಅಭಿಪ್ರಾಯಪಟ್ಟರು.

ಆಹಾರ ಕಮೀಶನರರು

ಹಿಂದುಸ್ತಾನದ ಆಹಾರ ಕಮೀಶನರರಾದ ಆರ್ ಕೆ ಪಾಟೀಲರು ಘಟನಾ ಸಮಿತಿಯ ಕಾಂಗ್ರೆಸ ಪಕ್ಷದ ಸಭೆಯಲ್ಲಿ ಮಾತಾಡುತ್ತ ಪ್ರಾಂತಗಳು ಸಾಮಾನ್ಯವಾಗಿ ಸಮರ್ಥ ರೀತಿಯಿಂದ ಆಹಾರ ಧಾನ್ಯಗಳ ಎತ್ತುವಳಿಯನ್ನು ನಡೆಸುವದಿಲ್ಲ. ಆಹಾರ ಧೋರಣೆಯ ಯಶಸ್ಸು ಆಹಾರ ಪದಾರ್ಥಗಳ ಎತ್ತುವಳಿಯ ಯಶಸ್ಸನ್ನೆ ಅವಲಂಬಿಸುವದುಎಂದು ಹೇಳಿದರು. ಹಾಗೆಯೆಮುಂದೆ ಸಾಗಿ ಅವರು ಹೀಗೆ ಹೇಳಿದರು. ಆಹಾರೋತ್ಪಾದನೆ, ಎತ್ತುವಳಿ, ಹಂಚುವಿಕೆ ಹೀಗೆ ತ್ರಿವಿಧವಾಗಿ ಆಹಾರ ಸಮಸ್ಯೆಯಿದೆ. ಸಾರ್ವಜನಿಕರು ಉತ್ಪಾದನೆಯ ಅಂಶವನ್ನು ಬಿಟ್ಟು ಎತ್ತುವಳಿ ಮತ್ತು ಸಂಚುವಿಕೆಗೇ ಹೆಚ್ಚು ಮಹತ್ವ ಕೊಡುತಿದ್ದಾರೆ. ಪಡಭೂಮಿಯ ಸಾಗುವಳಿ ಮತ್ತು ಬಾವಿಗಳನ್ನು ತೋಡಿಸುವ ಬಗ್ಗೆ ಸರಕಾರದವರು ಯೋಜನೆ ಸಿದ್ಧಪಡಿಸಿದ್ದಾದರೆ ಪೂರ್ವ ಪಂಜಾಬ, ಯುಕ್ತಪ್ರಾಂತ ಮತ್ತು ಬಿಹಾರಗಳಲ್ಲಿ ೭೬೦ ಲಕ್ಷ ಟನ ಆಹಾರ ಧಾನ್ಯ ಬೆಳೆಯುವದಕ್ಕಾಗಿ ೩ ಸಾವಿರ ಬಾವಿಗಳನ್ನು ತೋಡಿಸಬೇಕಾಗುವದು. ಉತ್ತಮ ಬೀಜ, ಗೊಬ್ಬರ, ನೀರು ಈ ಮೊದಲಾದ ಸೌಕರ್ಯಗಳು ರೈತರಿಗೆ ದೊರೆಯಬೇಕು. ಈಗೆ ಪ್ರತಿ ಎಕರೆಗೆ ಬೆಳೆಯುವ ಆಹಾರ ಧಾನ್ಯದ ಪ್ರಮಾಣವು ಕಡಮೆಯಾಗಿದ್ದು ಆಹಾರಾಂದೋಲನವು ಕನಿಷ್ಠ ೧೫ ವರುಷಗಳ ವರೆಗಾದರೂ ಒಂದಿಲ್ಲೊಂದು ರೀತಿಯಿಂದ ನಡೆಯಬೇಕು. ಈಗ ನಡೆದಿರುವ ಆಂದೋಲನದಿಂದ ಹಳ್ಳಿಗಳಿಗೆ ಪ್ರಯೋಜನವಾಗುತ್ತಿಲ್ಲ. ಒಕ್ಕಲತನದ ಶಿಕ್ಷಣವನ್ನು ತಾತ್ವಿಕವಾಗಿಕೊಡುವದರಿಂದ ಪ್ರಯೋಜನವಿಲ್ಲ. ಆಹಾರೋತ್ಪಾದನೆಯನ್ನು ಹೆಚ್ಚಿಸುವಲ್ಲಿ ಎಲ್ಲರೂ ಸಹಕರಿಸಬೇಕು ಸರಕಾರದವರ ಮತ್ತು ಸಾರ್ವಜನಿಕರ ಯೋಜನೆಗಳೆಂಬ ಎರಡು ಭಾಗಗಳನ್ನು ಅಧಿಕ ಆಹಾರ ಉತ್ಪಾದನೆಯಆಂದೋಲನದಲ್ಲಿಮಾಡಲಾಗಿದೆ. ಎತ್ತುವಳಿಗನುಗುಣವಾಗಿ ಸೀದಾವನ್ನು ಊರ್ಜಿತದಲ್ಲಿಡಬೇಕು. ಇಲ್ಲವಾದರಸರಕಾರಕ್ಕೆ ಆಯಾತವನ್ನು ನಿಲ್ಲಿಸುವದಾಗದು" ಎಂದು ಮುಂತಾಗಿ ಪಾಟೀಲರು ಹೇಳಿ ಸರಕಾರದ ಯೋಜನೆಗಳನ್ನೆಲ್ಲ ಹಳ್ಳಿಗರಿಗೆ ತಿಳಿಸಿ ಹೇಳಿ ಅವನ್ನು ಆಹಾರ ಸ್ವಾವಲಂಬಿ ಮಾಡುವದಕ್ಕೆ ನುರಿತ ಕೆಲಸಗಾರರ ಸೈನ್ಯವನ್ನು ಸಂಘಟಿಸಬೇಕು ಎಂದು ಹೇಳಿದರು. ಸಂಬಂಧಿಸಿದವರು ಆಸ್ಥೆಯಿಂದ ಇದರ ವಿಚಾರ ಮಾಡಬೇಕಾದುದು ಅವಶ್ಯವಾಗಿದೆ.

ಈಸ್ಟ ಇಂಡಿಯನ್ ರೇಲ್ವೆಯಲ್ಲಿ ೫ ನೇ ತಾರೀಕು ಮಿಕ್ಸ್ಡ ಪ್ಯಾಸೆಂಜರ ಗಾಡಿಯೊಂದು ಗೂಡ್ಸ ಗಾಡಿಗೆ ಡಿಕ್ಕಿ ಹೊಡೆದದ್ದರಿಂದ ೩೨ ಜನರಿಗೆ ಗಾಯಗಳಾಗಿವೆ. ಇವರಲ್ಲಿ ೧೧ ಜನ ರೇಲ್ವೆ ನೋಕರರಿರುವರು.

× × ×

೧೯೪೯ ರ ಜೂನ ತಿಂಗಳಲ್ಲಿ ಭಾರತ ಸರಕಾರದ ಸುಂಕವು ೧೧೫೦ ಲಕ್ಷ ರೂಪಾಯಿ ವಸೂಲಾಗಿದೆ. ಎಪ್ರಿಲದಿಂದ ಜೂನ ವರೆಗೆ ೩೪೪೭ ಲಕ್ಷ ರೂಪಾಯಿ ವಸೂಲಾಗಿತ್ತು.

× × ×

ಪಶ್ಚಿಮ ಬಂಗಾಲದಲ್ಲಿ ಉಪ್ಪಿನ ಮತ್ತು ಮೀನಗಾರಿಕೆಯ ಉದ್ದಿಮೆಗಳ ಅಭಿವೃದ್ಧಿ ಯೋಜನೆಗಳನ್ನು ಕುರಿತು ಸರಕಾರವು ವಿಚಾರ ನಡೆಸಿದೆ. ಮುಖ್ಯ ಮಂತ್ರಿ ಡಾ. ಬಿ. ಸಿ. ರಾಯರು ಈ ಬಗ್ಗೆ ಯುರೋಪದಲ್ಲಿ ಚರ್ಚೆ ಮಾಡಿರುವರಂತೆ.

× × ×

ಬಿಹಾರದ ಸಂಸ್ಥಾನದ ಪೋಲೀಸ ಇನಸ್ಪೆಕ್ಟರ ಜನರಲ್ ಸರದಾರ ಸುಂದರಸಿಂಗರನ್ನು ಹೈದರಾಬಾದ ಸಂಸ್ಥಾನ ಪೋಲೀಸ ಖಾತೆಯಲ್ಲಿ ಹೋಲ್ಮಿಬಾರಕರೆಂದು ನೇಮಿಸಲಾಗಿದೆ.

ರಷ್ಯದಲ್ಲಿ ಭಾರತೀಯ ರಾಯಭಾರಿ

ಸರ್ವಪಲ್ಲಿ ಡಾ. ರಾಧಾಕೃಷ್ಣನ್ ಇವರ ಜೀವನದ ಒಂದು ವಿಹಂಗಮ ನೋಟ

ಸಂಗ್ರಾಹಕ ಪಿ. ಕೆ. ದೇವಡಿಗ, ಪಣಂಬೂರು

ನಮ್ಮ ದೇಶದ ಪ್ರಸಿದ್ಧ ತತ್ವಜ್ಞಾನಿಗಳಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಇವರು ರಷ್ಯದಲ್ಲಿ ಭಾರತ ಸರಕಾರದ ರಾಯಭಾರಿಗಳಾಗಿ ನೇಮಿಸಲ್ಪಟ್ಟಿರುವರು. ಇಂತಹ ಮಹಾಜ್ಞಾನಿಗಳಿಗೆ ದೊರೆತ ಈ ಸನ್ಮಾನದಿಂದ ಜನತೆಯು ಸಂತೋಷ ಹೊಂದುವುದು ಸ್ವಾಭಾವಿಕವಾಗಿದೆ. ಸಾಮಾನ್ಯವಾಗಿ ತತ್ವಶಾಸ್ತ್ರಜ್ಞರು ನಿಪುಣ ರಾಜನೀತಿಜ್ಞರೂ ಪ್ರಬಂಧಕರ್ತರೂ ಆಗಿರುವುದು ಕಡಿಮೆ. ಅವರು ಬರೇ ತತ್ವಶಾಸ್ತ್ರಾಧ್ಯಯನ ಹಾಗೂ ವಿಚಾರವಿನಿಮಯಗಳಲ್ಲಿ ಮಗ್ನರಾಗಿರಲು ಬಾಧ್ಯರು ಎಂದು ಹಲವರ ಭಾವನೆ. ಅಲ್ಲದೆ ಸತ್ಯಾಂಶವೂ ಹಾಗೆಯೇ ಇರುವುದು. ಕೆಲವು ತತ್ವಶಾಸ್ತ್ರಜ್ಞರು ವಕ್ತೃತ್ವ ಕಲೆಯು ತಮ್ಮ ಉನ್ನತಿಗೆ ಬಾಧಕವೆಂದೇ ಭಾವಿಸುತ್ತಿದ್ದರು; ಭಾವಿಸುತ್ತಲೂ ಇರುವರು. ಅವರ ಭಾವನೆಯಲ್ಲಿ ಒಬ್ಬ ತತ್ವಜ್ಞಾನಿಯು ವಾಕ್ಪಟುವಾಗಿರುವುದು ಅಸಂಭವವಾಗಿರುವುದು. ಆದರೆ ಡಾ. ರಾಧಾಕೃಷ್ಣನ್‌ರು ಈ ಉಕ್ತಿಗೆ ಹೊರತಾಗಿರುವುದರಿಂದಲೇ ಅವರ ಕೀರ್ತಿಯು ಇಂದು ವಿಶ್ವವ್ಯಾಪಿಯಾಗಿದೆ.

ಬಾಲ್ಯ

ಡಾ. ರಾಧಾಕೃಷ್ಣನರ ಜನ್ಮ ದಕ್ಷಿಣ ಭಾರತದ ತಿರುತ್ತಾನಿಯ ಮಧ್ಯಮ ವರ್ಗದ ನಿಯೋಗಿ ಕುಟುಂಬದಲ್ಲಿ ೧೮೮೮ ರಲ್ಲಿ. ಬಾಲ್ಯಕಾಲದಿಂದಲೇ ಅವರ ಅರೈಕೆಯು ಧಾರ್ಮಿಕ ವಾತಾವರಣದಲ್ಲೇ ಆಗಿತ್ತು. ಅವರ ಜನ್ಮಸ್ಥಾನವಾದ ತಿರುತ್ತಾನಿ ಸುಬ್ರಹ್ಮಣ್ಯದೇವನ ಭಕ್ತರ ಒಂದು ತೀರ್ಥಸ್ಥಾನ. ಮಾತಾಪಿತನಮ್ಮ ಧಾರ್ಮಿಕ ಆಚಾರ ವಿಚಾರಗಳ ಮಹಿಳೆ. ಅವರ ವಿದ್ಯಾಭ್ಯಾಸವು ಕ್ರೈಸ್ತಮತ ಪ್ರಚಾರಕರಿಂದ ಸ್ಥಾಪಿತವಾದ ಶಾಲೆಯೊಂದರಲ್ಲಿ ನಡೆಯಿತು. ಆ ಶಾಲೆಯಲ್ಲಿ ಗುರುಗಳು ಹಿಂದೂ ಧರ್ಮವನ್ನು ಖಂಡತುಂಡವಾಗಿ ಟೀಕಿಸುತ್ತಿದ್ದರು. ಅಷ್ಟೇ ಅಲ್ಲದೆ ಆಗಲೇ ಸ್ವಾಮಿ ವಿವೇಕಾನಂದರ ಗ್ರಂಥಗಳ ಪ್ರಭಾವವು ಕೂಡ ಇವರ ಮೇಲೆ ಹೆಚ್ಚಾಗಿ ಬೀಳತೊಡಗಿದುದರಿಂದ ಬಾಲಕ ರಾಧಾಕೃಷ್ಣನರಿಗೆ ತಮ್ಮ ಹಾಗೂ ಇತರ ಧರ್ಮಗಳ ರಹಸ್ಯವನ್ನು ತಿಳಿಯುವ ಪ್ರಬಲೇಚ್ಛೆಯುಂಟಾಯಿತು. ವಿದ್ಯಾರ್ಥಿಜೀವನದಲ್ಲೇ ಅವರು ತಮ್ಮ ತೀಕ್ಷ್ಣ ಬುದ್ಧಿಯ ಪರಿಚಯ ಮಾಡಿಕೊಟ್ಟರು. ಯಾವಾಗಲೂ ವರ್ಗದಲ್ಲಿ ಸರ್ವಪ್ರಥಮವಾಗಿ ಉತ್ತೀರ್ಣರಾಗುತ್ತಿದ್ದರು. ಪ್ರಾರಂಭಿಕ ಶಿಕ್ಷಣವನ್ನು ತಿರುತ್ತಾನಿಯಲ್ಲಿ ಪಡೆದ ಮೇಲೆ ಅವರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮ್ಮ ಉಚ್ಚ ಶಿಕ್ಷಣವನ್ನು ಪ್ರಾರಂಭಿಸಿದರು. ಅಲ್ಲಿ ತಮ್ಮ ೨೧ ನೆಯ ವಯಸ್ಸಿನಲ್ಲೇ ತತ್ವಶಾಸ್ತ್ರದಲ್ಲಿ M. A. ಡಿಗ್ರಿಯನ್ನು ಪಡೆದು ಸರ್ವಪ್ರಥಮವಾಗಿ ತೇರ್ಗಡೆ ಹೊಂದಿದರು. ಅದಕ್ಕಾಗಿ ಅವರಿಗೆ ಪುರಸ್ಕಾರ ರೂಪವಾಗಿ ಸ್ವರ್ಣಪದಕವೊಂದು ಕೊಡಲ್ಪಟ್ಟಿತು. ಬಳಿಕ ೧೯೧೧ ರಲ್ಲಿ ಅವರು ಅದೇ ಕಾಲೇಜಿನ ಅಧ್ಯಾಪಕರಾಗಿ ನೇಮಿಸಲ್ಪಟ್ಟರು. ತಮ್ಮ ವಿಶೇಷ ಜ್ಞಾನ ಹಾಗೂ ಅದರ ಸುಂದರ ವಿವೇಚನೆಯ ಯೋಗ್ಯತೆಯಿಂದಾಗಿ, ಇಲ್ಲಿಯ ವಿದ್ಯಾರ್ಥಿಗಳ ಹೃದಯಪಟದಲ್ಲಿ ಪ್ರಭಾವ ಮುದ್ರೆಯನ್ನೊತ್ತಿದರು. ಹಾಗೂ ಕೆಲವೇ ಕಾಲದಲ್ಲಿ ಅವರು ಒಬ್ಬ ಗಣನೀಯ ಅಧ್ಯಾಪಕರೆನ್ನಿಸಿಕೊಂಡರು. ಐದು ವರ್ಷಗಳ ಅಲ್ಪ ಅವಧಿಯಲ್ಲೇ ಅವರು ಇಂಡಿಯನ್ ಎಜ್ಯುಕೇಶನಲ್ ಸರ್ವಿಸಿಗೆ ತೆಗೆದುಕೊಳ್ಳಲ್ಪಟ್ಟು, ಒಬ್ಬ ಸಾಧಾರಣ ಲೆಕ್ಚರರಿಂದ ಪ್ರೊಫೆಸರರಾದರು. ೧೯೧೮ ರಲ್ಲಿ ಶ್ರೀ. ರಾಧಾಕೃಷ್ಣನರು ಮೈಸೂರು ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರೊಫೆಸರರಾದರು. ೧೯೨೧ ರ ತನಕ ಅವರು ಅಲ್ಲಿ ಕೆಲಸ ಮಾಡಿದರು.

ಪ್ರಸಿದ್ಧಿಯ ಪ್ರಾರಂಭ

ಚಿಕ್ಕಂದಿನಿಂದಲೇ ಶ್ರೀ ರಾಧಾಕೃಷ್ಣನರು ಲೇಖನ ಇತ್ಯಾದಿಗಳನ್ನು ಬರೆಯುತ್ತಿದ್ದರು. ೧೯೦೮ ರಲ್ಲಿ ಎಂ. ಎ. ಕ್ಕಾಗಿ ಬರೆಯಲ್ಪಟ್ಟ ತೀಸಿಸ್ (Thesis) "ವೇದಾಂತದ ನೀತಿ" ಎಂಬ ಅವರ ಗ್ರಂಥವು ಪ್ರಕಟವಾಯಿತು. ಅದಕ್ಕಾಗಿ ಅವರ ಅಧ್ಯಾಪಕರು ಅವರನ್ನು ತುಂಬಾ ಪ್ರಶಂಸಿಸಿದರು. ವಿದೇಶೀ ಪತ್ರಿಕೆಯಲ್ಲೂ ಅವರ ಲೇಖನಗಳು ಪ್ರಕಟವಾಗುತ್ತಿದ್ದುವು. "ಹಿಬರ್ಟ್ ಜರ್ನಲ್" ಎಂಬ ಪತ್ರಿಕೆಯಲ್ಲಿ ಮೊದಲಾಗಿ ಪ್ರಕಟವಾದ ಭಾರತೀಯನ ಲೇಖನವೆಂದರೆ ಡಾ. ರಾಧಾಕೃಷ್ಣನರದೇ. ಈ ಲೇಖನವನ್ನು ವಿದೇಶಗಳಲ್ಲೂ ಜನರು ತುಂಬಾ ಪ್ರಶಂಸಿಸಿದರು; ಬೆಳ್ಜಿಯಮ್‌ದ "ದಿ ಮೇಲ್" ಎಂಬ ಆಂಗ್ಲ ಪತ್ರಿಕೆ ಈ ಲೇಖನವನ್ನು ಉದ್ಧರಿಸಿ ಕೊಂಡಾಡಿತು, ಅಲ್ಲದೆ ರಾಧಾಕೃಷ್ಣನರ ಕುರಿತು ಸಂಪಾದಕೀಯ ಲೇಖನವನ್ನು ಅಚ್ಚು ಹಾಕಿತು. ಇದರಿಂದ ಅವರ ಹೆಸರು ವಿದೇಶದಲ್ಲೂ ಹರಡಿತು. ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇರಿದ ಬಳಿಕ ಅವರ "ಧರ್ಮ ಮತ್ತು ತತ್ವಸಂಬಂಧ" ಎಂಬ ಪುಸ್ತಕವೊಂದು ಪ್ರಕಾಶ ಹೊಂದಿತು. ಈ ಪುಸ್ತಕವು ತತ್ವಶಾಸ್ತ್ರದಲ್ಲಿ ಬಹಳ ಅದ್ಭುತ ಗ್ರಂಥವಾಗಿತ್ತು. ಶ್ರೀ ಜೆ. ಎಚ್. ಮೋರಹೆಡ್, ಶ್ರೀ ಜೆ. ಎಸ್. ಮೆಕೆಂಜೀ, ಹಾಗೂ ಡಾ. ಜೆ. ಮ್ಯಾಕಟೀಗರ್ಟ್‌ರಂತಹ ವ್ಯಾಸಂಗಶೀಲ ವ್ಯಕ್ತಿಗಳ ಲಕ್ಷ್ಯ ಕೂಡ ಈ ಪುಸ್ತಕದೆಡೆಗೆ ಎಳೆಯಲ್ಪಟ್ಟಿತು. ಅಮೇರಿಕದಲ್ಲೂ ಈ ಪುಸ್ತಕದ ಕಂಪು ಹರಡಿತು. ಫಿಲೋಸೊಫಿಕಲ್ ಕಾಂಗ್ರೆಸಿನ ಅಧ್ಯಕ್ಷರು ಆ ವರ್ಷ ತಮ್ಮ ಭಾಷಣಕ್ಕಾಗಿ "ಡಾ. ರಾಧಾಕೃಷ್ಣನ್ ಮತ್ತು ಬಿ. ಬೋಸಾಂಕೆರವರ ಆದರ್ಶವಾದ" ಎಂಬ ವಿಷಯವನ್ನು ಆರಿಸಿಕೊಂಡರು. ಬೊಸಾಂಕೆರರೊಂದಿಗೆ ಗಣನೆಯಾದುದು ಶ್ರೀ ರಾಧಾಕೃಷ್ಣನರಿಗೆ ಹೆಮ್ಮೆಯ ವಿಷಯವಾಗಿತ್ತು.

ಕಲಕತ್ತೆಯ ವಿಶ್ವವಿದ್ಯಾಲಯದಲ್ಲಿ

೧೯೨೧ ನೇ ಇಸವಿಯು ಡಾ. ರಾಧಾಕೃಷ್ಣರ ಪ್ರಗತಿಶೀಲ ಜೀವನದಲ್ಲಿ ಒಂದು ಮಹತ್ವದ ವರ್ಷವಾಗಿತ್ತು. ಕಲ್ಕತ್ತಾ ವಿಶ್ವವಿದ್ಯಾಲಯದ ತತ್ವಶಾಸ್ತ್ರ ವಿಭಾಗದಲ್ಲಿ ಭಾರತ ಸರಕಾರವು ಐದನೇ ಜಾರ್ಜರ ಹೆಸರಿನಲ್ಲಿ ಒಂದು ಪೀಠವನ್ನು ಸ್ಥಾಪಿಸಿತು. ಆ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಶ್ರೀ ಆಶುತೋಷ ಮುಖರ್ಜಿಯವರು— ಪ್ರತಿಯೊಂದು ಉಚ್ಚಪದಕ್ಕೂ ಯೋಗ್ಯತೆಯುಳ್ಳವರನ್ನೇ ಆರಿಸುವುದು ಅವರ ಸ್ವಭಾವವಾಗಿತ್ತು— ಡಾ. ರಾಧಾಕೃಷ್ಣನರನ್ನೇ ಪೀಠಸ್ವೀಕಾರಕ್ಕೆ ಆಮಂತ್ರಿಸಿದರು. ಕಲ್ಕತ್ತಾ ವಿಶ್ವವಿದ್ಯಾಲಯದ ಪೀಠ ಸ್ವೀಕಾರ ಮಾಡಿದ ಬಳಿಕವೇ ಅವರ ಪ್ರತಿಭೆಯು ವ್ಯಾಪಕಗೊಂಡು ಪ್ರಾರಂಭಿಸಿತು. ಅಲ್ಲೇ ಅವರು ತಮ್ಮ ಸುಪ್ರಸಿದ್ಧ ಪುಸ್ತಕ "ಭಾರತೀಯ ದರ್ಶನ"ವನ್ನು ಬರೆದರು. ಅದು ಜಾರ್ಜ್ ಎಲೆನ್ ಹಾಗೂ ಅನ್ವಿನ ಪ್ರೆಸ್ ಲಂಡನ ಮೂಲಕ ಎರಡು ಭಾಗಗಳಲ್ಲಿ ಪ್ರಕಾಶಿತವಾಯಿತು. ಈ ಪುಸ್ತಕದಿಂದಾಗಿ ಅವರ ಖ್ಯಾತಿಯು ಇನ್ನಷ್ಟು ಹೆಚ್ಚಿತು. ೧೯೨೬ ರಲ್ಲಿ ಬ್ರಿಟಿಶ್ ವಿಶ್ವವಿದ್ಯಾಲಯಗಳ ಸಭೆಗೆ ಕಲ್ಕತ್ತಾ ಯುನಿವರ್ಸಿಟಿಯ ಪ್ರತಿನಿಧಿಯಾಗಿ ಡಾ. ರಾಧಾಕೃಷ್ಣನ್ ತೆರಳಿದರು. ಲಂಡನಿನಲ್ಲಿ ಈ ಮಹಾಸಭೆಯ ಚಾಲಕರು ಡಾ. ರಾಧಾಕೃಷ್ಣನ್ನರನ್ನು ಭಾಷಣ ಕೊಡಲು ಆಗ್ರಹಪಡಿಸಿದರೆ ರಾಧಾಕೃಷ್ಣನ್ ಭಾಷಣ ಕೊಡಲು ತಯಾರಾಗಿ ಬಂದಿರಲಿಲ್ಲ. ಆದರೂ ಅವರು ಮೆಂಚೆಸ್ಟರ್ ಕಾಲೇಜಿನಲ್ಲಿ ತತ್ವಶಾಸ್ತ್ರದ ಕುರಿತು ಒಂದು ಚಿಕ್ಕದ ಭಾಷಣವಿತ್ತರು. ಅದು "ಜೀವನದ ಮೇಲೆ ಹಿಂದುಗಳ ವಿಚಾರ" ವೆಂಬ ಪುಸ್ತಕದಲ್ಲಿ ಸಂಗ್ರಹಿಸಲ್ಪಟ್ಟಿತು. ಅದೇ ವರ್ಷ ಅವರು ಅಮೇರಿಕಕ್ಕೂ ತೆರಳಿದರು. ಅಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಣವಿತ್ತರು. ವಿಷಯದ ಸುಂದರ ವಿವೇಚನೆಯು ಮತ್ತು ಪಾಂಡಿತ್ಯ [illegible] ಜನರು ಇವರಿಂದ ತುಂಬ ಪ್ರಭಾವಿತರಾದರು. ೧೯೨೯ ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ "ತುಲನಾತ್ಮಕ ಧರ್ಮಶಿಕ್ಷಣ" ಎಂಬ ವಿಷಯದ ಉಪನ್ಯಾಸಗಳನ್ನು ಕೊಡುವುದಕ್ಕೆ ಡಾ. ರಾಧಾಕೃಷ್ಣನ್ ಆರಿಸಲ್ಪಟ್ಟರು. ಮತ್ತು ಹಿಬರ್ಟ್ ಲೆಕ್ಚರರಾದರು. ೧೯೩೬ ರಲ್ಲಿ ಶ್ರೀ ರಾಧಾಕೃಷ್ಣನ್‌ರನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪೌರಸ್ತ್ಯ ಧರ್ಮ ಹಾಗೂ ನೀತಿಶಾಸ್ತ್ರದ ಸ್ಪಾಲ್ಡಿಂಗ್ ಪ್ರೊಫೆಸರರನ್ನಾಗಿ ನೇಮಿಸಿ ಅವರ ಆದರವನ್ನು ಹೆಚ್ಚಿಸಿತು. ಈ ಸನ್ಮಾನವನ್ನು ಪಡೆದ ಪ್ರಥಮ ಭಾರತೀಯನೆಂದರೆ ಡಾ. ಎಸ್. ರಾಧಾಕೃಷ್ಣನ್‌ರೇ. ಅಲ್ಲಿ ಅವರು ಕೊಟ್ಟ ಉಪನ್ಯಾಸಗಳು "ಪೌರಸ್ತ್ಯ ಧರ್ಮ ಮತ್ತು ಪಾಶ್ಚಾತ್ಯ ವಿಚಾರಧಾರೆ" ಎಂಬ ಪುಸ್ತಕದಲ್ಲಿ ಪ್ರಕಟಿಸಲ್ಪಟ್ಟಿತು. ಪ್ರಪಂಚದ ಮಹಾಮಹಾ ವಿದ್ವಾಂಸರು ಹಾಗೂ ತತ್ವಜ್ಞರು ಈ ಪುಸ್ತಕದ ವಿವೇಚನೆಯನ್ನು ಹೊಗಳಿದರು. ಶ್ರೀ. [illegible] ಈ ಪುಸ್ತಕವನ್ನು [illegible] ಅವರು "[illegible]" ಎಂಬ ಪತ್ರಿಕೆಯಲ್ಲಿ ಹೀಗೆ ಬರೆದರು: "[illegible] ಪುಸ್ತಕಗಳನ್ನು [illegible] ಪುಸ್ತಕವನ್ನು [illegible] ವಿದೆ. ಏಕೆಂದರೆ ಇದು ಯುಗಾಂತರಗಳ ಪರಿಗೆ ಮಾನವತೆಯ ಸತ್ಯದ ಅನ್ವೇಷಣದ ದೀಪಕವಾಗಿದೆ."

ಎಪ್ರಿಲ್ ೧೯೪೪ ರಲ್ಲಿ ಚೀನ ಸರಕಾರದ ಆಮಂತ್ರಣದ ಮೇರೆಗೆ ಡಾ. ರಾಧಾಕೃಷ್ಣನ್ ಅಲ್ಲಿಗೆ ತೆರಳಿದರು. ಅಲ್ಲಿ ಅವರು ೧೫ ದಿನಗಳ ತನಕವಿದ್ದು ಹಲವು ವಿಶ್ವವಿದ್ಯಾಲಯಗಳಲ್ಲಿ ಉಜ್ವಲ ಭಾಷಣಗಳನ್ನಿತ್ತು, ಚೀನ ಮತ್ತು ಭಾರತಗಳೊಳಗಿನ ಹಳೆಯ ಸಂಬಂಧವನ್ನು ಬಲಪಡಿಸಿದರು.

ಡಾ. ರಾಧಾಕೃಷ್ಣನ್ ಕೇವಲ ವಿದ್ವಾಂಸರೂ ತತ್ವಜ್ಞಾನಿಗಳೂ ಮಾತ್ರವಲ್ಲ ಒಳ್ಳೆಯ ಪ್ರಬಂಧಕರ್ತರೂ ಆಗಿದ್ದಾರೆ. ೧೯೩೧ ರಲ್ಲಿ ಅವರು ಆಂಧ್ರ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಆಗಿದ್ದರು. ಆ ಸಮಯ ವಿಶ್ವವಿದ್ಯಾಲಯವು ಬಹಳ ಹೀನಸ್ಥಿತಿಯಲ್ಲಿತ್ತು. ಅವರು ಪರಿಶ್ರಮದಿಂದ ಧನ ಸಂಗ್ರಹಿಸಿ, ಹೊಸ ಕಟ್ಟಡಗಳನ್ನು ಕಟ್ಟಿಸಿದರು, ಉತ್ತಮ ಶಿಕ್ಷಕರನ್ನು ನಿಯಮಿಸಿದರು ಮತ್ತು ಇತರ ವಿಶ್ವವಿದ್ಯಾಲಯಗಳ ಸ್ಥಾನಕ್ಕೆ ಅದನ್ನೇರಿಸಿದರು.

ಕಾಶಿ ವಿಶ್ವವಿದ್ಯಾಲಯದಲ್ಲಿ

೧೯೩೯ ರಲ್ಲಿ ಪೂಜ್ಯ ಪಂ. ಮದನಮೋಹನ ಮಾಲವೀಯರ ಆಗ್ರಹದಿಂದ ಡಾ. ರಾಧಾಕೃಷ್ಣನರು ಕಾಶೀ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ ಪದವಿಗೇರಿದರು; ೭ ವರ್ಷಗಳ ತನಕ ಆ ಕಾರ್ಯವನ್ನು ಮಾಡಿ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸಿದರು. ಮಾಲವೀಯರ ಅಧಿಕಾರತ್ಯಾಗದ ಬಳಿಕ ವಿಶ್ವವಿದ್ಯಾಲಯದ ಸ್ಥಿತಿ ಅವನತಿಗಿಳಿಯುವುದು ಖಂಡಿತವೆಂದು ಜನತೆಯು ಭಾವಿಸಿತ್ತು. ಆದರೆ ಶ್ರೀ ರಾಧಾಕೃಷ್ಣನರು ತಮ್ಮ ಅದ್ಭುತ ಶಾಸನದ ಯೋಗದಿಂದ ವಿಶ್ವವಿದ್ಯಾಲಯವನ್ನು ಬೆಳಗಿಸಿ, ಪ್ರಪಂಚದಲ್ಲೇ ಅದಕ್ಕೊಂದು ಉನ್ನತ ಸ್ಥಾನ ಗಳಿಸಿಕೊಟ್ಟರು.


ಡಾ. ರಾಧಾಕೃಷ್ಣನ್‌ರಿಗೆ ತಮ್ಮ ವಿದ್ವತ್ತಿನ ಹಾಗೂ ದೊಡ್ಡಸ್ತಿಕೆಯ ಬಗ್ಗೆ ಎಳ್ಳಷ್ಟೂ ಗರ್ವವಿಲ್ಲ. ಪಂಡಿತರಿಂದ ಹಿಡಿದು ಸಾಮಾನ್ಯರ ತನಕ ಎಲ್ಲರೊಡನೆ ಅವರು ಸಂಭಾಷಿಸುವರು, ಅವರೊಡನೆ ಬೆರೆಯುವರು. ಬೇರೆಯವರಿಗೆ ತಮ್ಮ ಭಾವನೆಗಳನ್ನು ವಿವರವಾಗಿ ತಿಳಿಸಿ, ಅವರ ಮನೋಭಿಪ್ರಾಯಗಳನ್ನು ಸೂಕ್ಷ್ಮವಾಗಿ ತಿಳಿ [illegible]

[illegible]

ಓದುಗರ ಲಕ್ಷ್ಯಕ್ಕಾಗಿ

[illegible]

—ಸಂ.



ವಿಚಾರ ದ್ವಂದ್ವ

ಈ ತಲೆಬರಹದ ಕೆಳಗೆ ಜನಾಭಿಪ್ರಾಯವನ್ನು ಪ್ರಕಟಿಸಲಾಗುವದು. ಕೇವಲ ವ್ಯಕ್ತಿಕ ದೂರುಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಸಾರ್ವತ್ರಿಕ ವಿಷಯಗಳ ಮೇಲೆ ಜನರ ಸರಿಯಾದ ಅಭಿಪ್ರಾಯವನ್ನು ಅರಿಯುವದೇ ಮುಖ್ಯವಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

*

ನಿರುದ್ಯೋಗಿಗಳು

ಈಗ ನಮ್ಮ ದೇಶದ ಆಹಾರೋತ್ಪಾದನೆಯ ಕೆಲಸದಲ್ಲಿ ಸುಮಾರು ನೂರರಲ್ಲಿ ೬೫ ಜನರು ತೊಡಗಿದ್ದಾರೆ. ಸರಕಾರಿ ನೌಕರಿ, ಸೈನ್ಯ ವ್ಯಾಪಾರ ಉದ್ದಿಮೆಗಳಲ್ಲಿ ಸುಮಾರು ಶೇಕಡಾ ೨೦ ರಷ್ಟು ಜನರಿದ್ದಾರೆ. ಉಳಿದ ೧೫ ಟಕ್ಕೆ ಜನರು ಈ ನಿರುದ್ಯೋಗಿಗಳು. ಆದರೆ ಈ ೬೫ ಟಕ್ಕೆ ಕೃಷಿ ಉದ್ಯೋಗದವರು ತಾವು ಉತ್ಪನ್ನ ಮಾಡಿದ ಆಹಾರ ವಸ್ತುವನ್ನು ತಮ್ಮ ಹೊಟ್ಟೆ ಹೊರಕೊಂಡು ಉಳಿದದ್ದನ್ನು ಈ ೩೫ ಟಕ್ಕೆ ಜನಗಳಿಗೆ ಕೊಡಬೇಕಾಗುತ್ತದೆ. ನಮ್ಮ ದೇಶದ ಕೃಷಿ ವ್ಯವಸಾಯವು ಲಾಭಕರ ವಾಗಿರುವದಿಲ್ಲ. ಕೃಷಿ ಮಾಡುವ ರೈತನಿಗೆ ಎಲ್ಲರಿಗೂ ಸಾಕಷ್ಟು ಉತ್ಪನ್ನ ಸಿಗುವದಿಲ್ಲ. ೨೦ ಟಕ್ಕೆ ಸರಕಾರಿ ನೌಕರರು ಮತ್ತು ವ್ಯಾಪಾರೋದ್ಯಮಿಗಳ ಹೊಟ್ಟೆಯ ಭಾರವು ಸಹಜವಾಗಿ ಈ ರೈತನ ಮೇಲೆ ಬೀಳುತ್ತದೆ. ಇದು ಅನಿವಾರ್ಯವಾಗಿದೆ. ಆದರೆ ನಿರುದ್ಯೋಗಿಗಳಾದ ೧೫ ಟಕ್ಕೆ ಜನಗಳ ಜೀವನದ ಭಾರವನ್ನು ಸಹ ಈ ರೈತರ ಮೇಲೆ ಹಾಕುವದು ಎಂದರೆ ರಾಷ್ಟ್ರೀಯ ದೃಷ್ಟಿಯಿಂದ ಹಾನಿಕರವಾಗಿದೆ. ಒಟ್ಟಿನ ಮೇಲೆ ಆಹಾರದ ಕೊರತೆಯಾಗಿ ಎಲ್ಲರ ಹೊಟ್ಟೆಗೂ ಕಡಿಮೆಯಾಗುತ್ತಿದೆ. ಇದ ಕ್ಕೋಸ್ಕರ ನಮ್ಮ ಸರಕಾರದವರು ಲಕ್ಷ ಹಾಕಬೇಕು.

ಬರುವ ೧೯೫೧ ನೇ ಇಸವಿ ನಂತರ ನಮ್ಮ ದೇಶವು ಆಹಾರದ ಬಗ್ಗೆ ಕೊರತೆಯ ದೇಶವಾಗ ಬಾರದೆಂದೂ ಪರದೇಶದಿಂದ ಆಹಾರ ವಸ್ತುವನ್ನು ತರಿಸಬಾರದೆಂದೂ ನಿರ್ಧಾರಮಾಡಿ ನಮ್ಮ ಸರಕಾರವು ಅಧಿಕ ಆಹಾರವನ್ನು ಬೆಳೆಸುವ ಬಗ್ಗೆ ಬಹಳ ಪ್ರಯತ್ನ ಮಾಡುತ್ತಾ ಇದೆ. ಉತ್ತಮ ಬೀಜ ಗೊಬ್ಬರ ಮತ್ತು ನೀರಾವರಿ ಕೆಲಸಗಳಿಂದ ಸ್ವಲ್ಪ ಭಾಗ ಆಹಾರವನ್ನು ಮಾತ್ರ ಹೆಚ್ಚಿಸಬಹುದು. ನಮ್ಮ ದೇಶಕ್ಕೆ ಕಡಿಮೆಯಾಗುವಷ್ಟು ಧಾನ್ಯವನ್ನು ಕೂಡಾ ಬೆಳೆಸುವದು ಸಾಧ್ಯವಾಗದ ಮಾತು. ಈಗ ಕೃಷಿ ಉದ್ಯೋಗದಲ್ಲಿ ತೊಡಗಿದವರಷ್ಟೇ ಜನರಿಂದ, ಈಗ ಕೃಷಿ ಕೆಲಸಕ್ಕೆ ಉಪಯೋಗಿಸುವಷ್ಟೇ ಎತ್ತುಗಳಿಂದ ಈಗಿನಕಿಂತ ಹೆಚ್ಚು ಶ್ರಮಮಾಡುವದು ಶಕ್ಯವಿಲ್ಲ. ಇದಲ್ಲದೆ ಪ್ರತಿವರ್ಷ ಸುಮಾರು ೭೦-೮೦ ಲಕ್ಷ ಜನಸಂಖ್ಯೆಯು ನಮ್ಮ ಹಿಂದುಸ್ತಾನದಲ್ಲಿ ಹೆಚ್ಚುತ್ತಾ ಇರುತ್ತದೆ. ಈ ಹೆಚ್ಚಾಗುವ ಜನಸಂಖ್ಯೆಗೆ ಸುಮಾರು ೧೦ ಲಕ್ಷ ಟನ್ ಆಹಾರವನ್ನು ಪ್ರತಿವರ್ಷ ಅಧಿಕವಾಗಿ ಉತ್ಪನ್ನ ಮಾಡಬೇಕಾಗುವದು.

ಕೃಷಿ ಉದ್ಯೋಗ ಮಾಡುವವರ ಸಂಖ್ಯೆಯು ಪ್ರತಿವರ್ಷ ಹೆಚ್ಚು ಆಗುವದಿಲ್ಲ. ಕೃಷಿ ಕ್ಷೇತ್ರವು ಹಳ್ಳಿಗಳಲ್ಲಿರುವದು. ಹಳ್ಳಿ ವಾಸವು ಹೊಸ ಜನರಿಗೆ ಬೇಡಾಗಿರುವದು. ಶಿಕ್ಷಣದ ಪ್ರಸಾರವು ಹೆಚ್ಚು ಆದಹಾಗೆ ೪-೪ ಇಯತ್ತೆ ಕಲಿತ ಒಕ್ಕಲಿಗನ ಮಗನು ತನ್ನ ಕುಂಟೆ-ಹಂಡೆಯನ್ನೂ ಹಳ್ಳಿಯನ್ನೂ ಬಿಟ್ಟು ಶಹರಕ್ಕೆ ಬಂದು ನೌಕರಿ ಹುಡುಕುವನು. ನೌಕರಿ ಸಿಗದಿದ್ದರೆ ಬೀಡಿಅಂಗಡಿ, ಚಹದಅಂಗಡಿಯಲ್ಲಿ ಸೇರಿಕೊಳ್ಳುವನು. ಇದು ಅತಿಶಯೋಕ್ತಿ ಅಲ್ಲ. ಶಹರದ ಜನಸಂಖ್ಯೆಯು ಬೆಳೆಯುತ್ತ ಇದೆ, ನೋಡಿರಿ. ಹೀಗೆ ಆದರೆ ನಮ್ಮ ದೇಶದಲ್ಲಿ ಆಹಾರವು ನಮಗೆಲ್ಲಾ ಸಾಕಾಗುವಷ್ಟು ಹೇಗೆ ದೊರೆಯುವದು, ಮತ್ತು ಈ ನಿರುದ್ಯೋಗಿಗಳ ಹೊಟ್ಟೆಯ ಭಾರವನ್ನು ಎಲ್ಲಿಯವರೆಗೆ ಸೈರಿಸಿಕೊಳ್ಳಬೇಕು? ಪ್ರತಿ ವರ್ಷ ನೂರಾರು ಕೋಟಿ ರೂಪಾಯಿಗಳನ್ನು ನಮ್ಮ ರಾಷ್ಟ್ರವು ತೆರುತ್ತಾ ಇಂದರೆ ನಮ್ಮ ದೇಶದ ಆರ್ಥಿಕ ಪುಷ್ಟಿಯು ಎಷ್ಟುಕಾಲಗೆ ಇರುವದು.

ಈ ಬಗ್ಗೆ ನನ್ನ ಸೂಚನೆ

೧. ರಾಷ್ಟ್ರದ -ವ್ಯಾಪಾರ ಉದ್ಯೋಗ- ಸರಕಾರಿ ನೌಕರಿ ಸೈನ್ಯ ಮುಂತಾದ ಕಾರ್ಯಗಳಿಗೆ ಬೇಕಾಗುವಷ್ಟು ಜನರನ್ನು ನಿಂಗಡಿಸಿ ಉಳಿದವರನ್ನು ಕೃಷಿ ಅಂದರೆ ಆಹಾರ ಉತ್ಪನ್ನ ಮಾಡುವ ಬಗ್ಗೆ ತೊಡಗಿಸಲು ಕಡ್ಡಾಯ ಕಾಯದೆ ಮಾಡಿ ದೇಶದ ತುಂಬ ಬಂಜರಬಿದ್ದ ಜಮೀನನ್ನು ಸಾಗುವಳಿ ಮಾಡಲು ಹಚ್ಚಬೇಕು.

೨. ಚಹದ ಅಂಗಡಿ- ಬೀಡಿಅಂಗಡಿ ಇತ್ಯಾದಿ ಸಾವಿರ ಜನಸಂಖ್ಯೆ ಎಷ್ಟು ಬೇಕೆಂಬದನ್ನು ಪರಿಮಿತಗೊಳಿಸಿ ಅವರಿಗೆ ಮಾತ್ರ ಲೈಸೆನ್ಸು ಕೊಟ್ಟು ಮಿಕ್ಕುಳಿದವರನ್ನೂ ಸಶಕ್ತರಿದ್ದು ಭಿಕ್ಷೆ ಬೇಡುವವರನ್ನೂ ಹಳ್ಳಿಯಲ್ಲಿಯ ಬಂಜರು ಭೂಮಿ ಸಾಗುವಳಿಗೆ ಹಚ್ಚಿಸಬೇಕು.

೩. ಈಗ ಸಪ್ಲಾಯ ಖಾತೆ ನಿರ್ಮಿಸಿ ಎಷ್ಟೋ ಅಧಿಕವಾಗಿ ನೌಕರರನ್ನು ನೇಮಿಸಿಕೊಂಡದ್ದು ಇದ್ದು ಇದನ್ನು ಪರಿಶೀಲನೆ ಮಾಡಿ ಹೆಚ್ಚಾದ ನೌಕರರನ್ನು ಕೆಲಸದಿಂದ ತೆಗೆದು ಹಳ್ಳಿಯ ಬಂಜರ ಭೂಮಿ ಮೇಲೆ ಕೂಡ್ರಿಸಬೇಕು.

ಈ ಪ್ರಕಾರ ಮಾಡಿದರೆ ಕಡಿಮೆ ಬೀಳುವ ಆಹಾರದ ಸಮಸ್ಯೆ ಬಗೆಹರಿಯುವದು. ನಿರುದ್ಯೋಗಿಗಳಿಗೆ ಉದ್ಯೋಗವಾಗುತ್ತದೆ. ಒಕ್ಕಲಿಗನಿಗೆ ಹೊಟ್ಟೆ ತುಂಬ ಅನ್ನ ಆಗುತ್ತದೆ.

ಹಳ್ಳಿಯ ಬಂಜರು ಭೂಮಿ ಸಾಗು ಆಗಿ ಗ್ರಾಮೋದ್ಧಾರವಾಗುವದು.

ಶಹರದ ದಟ್ಟಣೆ ಕಡಿಮೆ ಆಗುವದು.

ಕೇಂದ್ರ ಮತ್ತು ಪ್ರಾಂತಿಕ ಸರಕಾರದವರು ತೀವ್ರವಾಗಿ ಮೇಲಿನ ವಿಷಯಕ್ಕೆ ಗಮನ ಕೊಡಬೇಕು. ಈ ನಿರುದ್ಯೋಗಿಗಳನ್ನು ಹೀಗೇ ಬಿಟ್ಟರೆ ರಾಷ್ಟ್ರಕ್ಕೆ ಈಗಿನಗಿಂತ ಹೆಚ್ಚು ಕಠಿಣ ಪರಿಸ್ಥಿತಿ ಒದಗಬಹುದು.

ತಾ. ೧-೯-೪೯ ಗಣೇಶ ಹೆಗಡೆ ಕಿಲಾರ

× × ×

ವ್ಯಾಪಾರದಲ್ಲಿ ಅವ್ಯಾಪಾರ

ಕಳೆದ "ಕರ್ಮವೀರ" ದಲ್ಲಿ, "ಶಿಕ್ಷಣ ತುಂಬ ತುಟ್ಟಿಯೆಂದು ಹೇಳುವುದುಂಟು; ಆದರೆ ನಿಜವಾದ ಮೌಲ್ಯಗಳನ್ನು ತೂಗಿದರೆ ಅಜ್ಞಾನವೇ ಅದಕ್ಕಿಂತ ತುಟ್ಟಿಯೆಂದು ಗೊತ್ತಾಗುತ್ತದೆ....ಅದನ್ನು ಹೊಸ ಹೊಸ ಫ್ಯಾಶನ್ನುಗಳನ್ನು ರೂಢಿಸುವ ಮತ್ತು ವ್ಯಾಪಾರಿಗಳ ಕೈಯೊಳಗಿನ ಪತ್ರಿಕೆಗಳಲ್ಲಿ ಜಾಹಿರಾತು ಮಾಡುವ ಮೂಲಕ ಪ್ರಚಾರಗೊಳಿಸಲಾಗುತ್ತದೆ" ಎಂಬ ಡಾ. ಜೆ. ಸಿ. ಕುಮಾರಪ್ಪನವರ ಹೇಳಿಕೆ ಪ್ರಕಟವಾಗಿದೆ. ಅದಕ್ಕೆ ಅಲ್ಲಿ ಅವರು ಕೊಟ್ಟ ನಿದರ್ಶನ ಕೇವಲ ಒಂದು. ಅಂಥ ನಿದರ್ಶನಗಳು ಹಲವಾಗಿವೆ. An idle brain in a devil's workshop- ಸೋಮಾರಿ ಮಿದುಳೆಂಬುದು ಪಿಶಾಚಿಯ ಕಾರಸ್ಥಾನ ಎಂಬ ಗಾದೆಯಂತೆ ಮೋಸದಿಂದ ಅಂದರೆ ಅತ್ಯಲ್ಪ ಅಥವಾ ಶೂನ್ಯ ಶ್ರಮದಿಂದ ಅಪಾರ ಧನವನ್ನು ಗಳಿಸಲೆಂದು ಸಂಚು ಹೂಡುವ ವ್ಯಾಪಾರಿಗಳಿಂದು ಹುಟ್ಟಿಕೊಂಡಿದ್ದಾರೆ.

ಸೌಂದರ್ಯವರ್ಧನ, ಕಾಮಶಕ್ತಿ ಸಂವರ್ಧನ, ಉದ್ಯೋಗ ಧನಾದಿಗಳ ಲಾಭ, ಚಿನ್ನ ಬಣ್ಣಗಳನ್ನು ಪಡೆಯುವುದು ಮುಂತಾದ ಆಶೆಗಳನ್ನು ಅಜ್ಞಾನಿಗಳಾದ ಸಾಮಾನ್ಯ ಜನರಲ್ಲಿ ಹುಟ್ಟಿಸಿ ಅತ್ಯಲ್ಪ ಮೌಲ್ಯದಿಂದ ಅಥವಾ ಶ್ರಮದಿಂದ ಅತ್ಯುತ್ತಮ, ಅನರ್ಘ್ಯ ಪದಾರ್ಥಗಳು ಮತ್ತು ಉಪಯೋಗಗಳು ಲಭ್ಯ ಎಂದು ಜಾಹಿರಾತು ಮಾಡಿ ಅವರಿಂದ ಹಣ ಸುಲಿಯುವ ಕೇಡಿಗಳು ವ್ಯಾಪಾರಿಜಾತಿಗೇ ಕಲಂಕ ತಂದಿದ್ದಾರೆ. ಕುಚವೀರ್ಯಾದಿಸಂವರ್ಧನ, ಸುವರ್ಣಾಭರಣ.೧೪ ಉಚಿತ ಪ್ರೇಷಣ, ಮಂತ್ರ ಯಂತ್ರಗಳ ಸಿದ್ಧಿ ಮುಂತಾದ ಜಾಹೀರಾತುಗಳು ಅಶ್ಲೀಲತೆ, ಅಜ್ಞಾನ, ಆತ್ಮಹಾನಿ, ಧನನಷ್ಟಗಳನ್ನು ಒದಗಿಸಿ ಮೂಢರನ್ನು ಹಳ್ಳಕ್ಕೆ ತಳ್ಳುವುವು. ಇದನ್ನು ತಡೆಗಟ್ಟಲು ಸರಕಾರ ಮುಂದೆ ಬಂದು ಇವುಗಳ ಮೇಲೆ ಬಹಿಷ್ಕಾರವನ್ನು ಸಾರಬಹುದು; ಇಲ್ಲವೆ ಗುಪ್ತಪೋಲೀಸರ ಸಹಾಯದಿಂದ ಅಂಥ ವಂಚಕರನ್ನು ಹಿಡಿದು ಕಠಿನ ಶಿಕ್ಷೆಗೆ ಗುರಿಪಡಿಸಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಅಕ್ಷರಜ್ಞರು ಸ್ವಲ್ಪ ಬುದ್ಧಿಯನ್ನು ಉಪಯೋಗಿಸಿ ಇಂಥ ವ್ಯಾಪಾರಗಳಲ್ಲಿ ಕೈಹಾಕದಿರುವುದನ್ನು ಕಲಿಯಬೇಕು. ಒಂದು ಪತ್ರಿಕೆಯಲ್ಲಿ ಇಂಥ ಒಂದು ಜಾಹೀರಾತು ಬಂದಮಾತ್ರಕ್ಕೆ ಅದರಲ್ಲಿರುವುದೆಲ್ಲ ಪತ್ರಿಕಾಕರ್ತರು ಹೊಣೆಗಾರರು ಎಂದು ತಿಳಿಯುವುದು ತಪ್ಪು. ಜಾಹಿರಾತಿನ ಸತ್ಯತೆ ಅಸತ್ಯತೆಗಳ ಬಗ್ಗೆ ಪತ್ರಿಕೆಗೆ ಯಾವ ಹೊಣೆಯೂ ಇಲ್ಲ. ಜಾಹೀರಾತುದಾರರು ಕೊಟ್ಟದ್ದನ್ನು ಹುದ್ದೆತೆಗೆದುಕೊಂಡು ಪತ್ರಿಕೆಯವರು ಪ್ರಕಟಿಸುತ್ತಾರೆ, ಅಷ್ಟೇ-ಎಂಬ ಅಂಶವನ್ನು ವಾಚಕರು ಗಮನಿಸಬೇಕು.

—ವಾಚಕ ಹಿತೈಷಿ

ರಾಜಕೀಯ ಸಂತ್ರಸ್ತರಿಗೆ ಪರಿಹಾರ

ಮೇಲಿನ ತಲೆಬರಹದ ಕೆಳಗೆ (ಅಗಸ್ಟ ೨೨) (ದ. ಕನ್ನಡ ಜಿಲ್ಲೆಯ) ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಬಿ. ಅಂತಯ್ಯ ಶೆಟ್ಟರಿಗೆ ಭೂದಾನದ ಅರ್ಹತೆಯಿಲ್ಲವೆಂದು ಸರಕಾರದವರು ತಿಳಿಸಿದ್ದನ್ನೋದಿದೆ. ಲೌಕಿಕ ದೃಷ್ಟಿಯಿಂದ ಇದರಲ್ಲಿ ಶ್ರೀ ಶೆಟ್ಟರಿಗೆ ಅನ್ಯಾಯವಾಗಿದ್ದರೂ ಧಾರ್ಮಿಕ ದೃಷ್ಟಿಯಿಂದ ಹಾಗಾಗಿಲ್ಲವೆಂದು ಹೇಳಬಹುದು. ಶ್ರೀ ಶೆಟ್ಟರು ತ್ಯಾಗಶೀಲರಾಗಿ ದೇಶಸೇವೆ ಮಾಡಿ ದೇಶದ ಹಿರಿಯರು.ಖಂಡರ ಪ್ರಶಂಸೆಯನ್ನೂ ಜನರ ಪ್ರೀತಿಯನ್ನೂ ಪಡೆದಿದ್ದಾರೆ. ಇದೇ ಸೇವೆಗೆ ದೊರಕಿದ ಸಾರ್ಥಕ್ಯ. ಇಂಥ ತ್ಯಾಗಶೀಲರು ಭೂದಾನಕ್ಕಾಗಿ ಸರಕಾರವನ್ನು ಕೇಳುವುದಾದರೆ ಸೇವೆಗೆ ಪ್ರತಿಫಲ ಕೇಳಿದ ಹಾಗಾಗುತ್ತದೆ ಎಂಬುದನ್ನು ಅವರ ಹಿತೈಷಿಗಳು ಗಮನಿಸದಿರುವುದು ಶೋಚನೀಯವಾಗಿದೆ. ಪೂಜ್ಯ ಮಹಾತ್ಮಾಗಾಂಧಿಯವರು ದೇಶಕ್ಕಾಗಿ ಎಷ್ಟು ತ್ಯಾಗ ಮಾಡಿದ್ದರು! ಸ್ವಾತಂತ್ರ್ಯ ಬಂದಾಗ ಅವರು ಏನನ್ನಾದರೂ ಅಪೇಕ್ಷಿಸಿದ್ದಲ್ಲಿ ಯಾರೂ ಅಡ್ಡಬರಲು ಸಾಧ್ಯವಿರಲಿಲ್ಲ. ಆದರೆ ಅವರು ಸ್ವಾತಂತ್ರ್ಯದ ದಿನ ಕಲಕತ್ತೆಯಲ್ಲಿ ಜನರಿಗೆ ದೇವರು ಸದ್ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತ ಉಪವಾಸವ್ರತ ಕೈಕೊಂಡು ರಾಜಯೋಗಿಯೆನಿಸಿದರು. ಅವರ ಶಿಷ್ಯರಾದ ಶ್ರೀ ಶೆಟ್ಟರು ಇದನ್ನರಿತು ನಡೆಯಲೆಂದು ಪ್ರಾರ್ಥಿಸುತ್ತೇನೆ.

ಭಿಡದಿ —ಎಸ್. ಆರ್. ಹೊಳ್ಳ

× × ×

ಹೊಸತೋಟ ಗೋಡೌನ್

ಸುತ್ತಲೂ ಹೊಳೆ ಹಳ್ಳಗಳಿಂದ ಸುತ್ತಲ್ಪಟ್ಟ ನಮ್ಮ ಊರಿಗೆ ಸರಕಾರದವರು ಒಂದು ಗೋಡೌನು ಕೊಟ್ಟದ್ದು ಸ್ತುತ್ಯ. ಆದರೆ ಇದಕ್ಕೆ ಧಾನ್ಯದ ಪೂರೈಕೆ ಸರಿಯಾಗಿ ಇದ್ದುದುರ್ದೈವ. ೧೨ ಮೈಲುದೂರದ ಕರ್ಕಿ (ಉ. ಕನ್ನಡ) ನವಲ ಗೋಡೌನಿನಿಂದ ಧಾನ್ಯ ತಂದುಕೊಳ್ಳಲು ನಮಗೀಗ ಮಾಮಲೇದಾರರು ತಿಳಿಸಿದ್ದಾರೆ. ಆದರೆ ಅದಕ್ಕೆ ಹೊಳೆ ದಾಟಿ ಹೋಗಬೇಕಾಗಿದ್ದು ಒಮ್ಮೊಮ್ಮೆ ಹೊಳೆಗೆ ತುಂಬ ನೀರು ಬಂದು ದೋಣಿಗಳು ಕೂಡ ಸಿಗುವುದಿಲ್ಲ. ಹೀಗೆ ಮಳೆಗಾಲದಲ್ಲಿ ಸಾಕಷ್ಟು ಧಾನ್ಯಸಂಗ್ರಹ ವಿಡದೆ ಇರುವ ಕಾರಣ ಜನರು ಸಂಕಟಕ್ಕೊಳಗಾಗಿ ಕಳ್ಳಪೇಟೆಗೆ ಶರಣುಹೋಗಬೇಕಾಗುತ್ತದೆ. ಈ ಬಗ್ಗೆ ಅಧಿಕಾರಿಗಳು ಯೋಗ್ಯ ವ್ಯವಸ್ಥೆಮಾಡುವರೋ?

೧೮—೮—೪೯ ಮ. ಗ. ಹೆಗಡೆ

× × ×

ದ. ಕ. ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ ಹುರಿಯಾಳುಗಳು

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯು ಕಾಂಗ್ರೆಸ್ಸಿನವತಿಯಿಂದ ಹುರಿಯಾಳುಗಳನ್ನು ನಿಲ್ಲಿಸಿ, ಮುಂಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿ, ಇದೀಗ ಕಾಂಗ್ರೆಸ್ ಪರವಾಗಿ ನಿಯೋಜಿತರಾದ ಉಮೇದ್ವಾರಿಗಳ ಹೆಸರುಗಳನ್ನು ಪ್ರಸಿದ್ಧಿಸಿದೆ. ಸಮಿತಿಯು ಹುರಿಯಾಳುಗಳನ್ನು ನಿಯೋಜಿಸುವ ಮುನ್ನ ಪ್ರತಿ ಚುನಾವಣೆಕ್ಷೇತ್ರದಲ್ಲೂ (Circle) ಸಂಚರಿಸಿ, ಜನಮತವನ್ನು ಸಂಗ್ರಹಿಸಿ ಜನಾಭಿಪ್ರಾಯದಂತೆಯೇ ಹುರಿಯಾಳುಗಳನ್ನು ನಿಯೋಜಿಸುವುದಾಗಿ ಉದ್ಘೋಷಿಸಿತ್ತು. ಅದರಂತೆ ಸಮಿತಿಯ ಕೆಲವಂದಿ ಸದಸ್ಯರು ಸಂಚಾರ ಕಾರ್ಯಕ್ರಮವನ್ನೇನೋ ಕೈಗೊಂಡರು. ಆದರೆ ಎಲ್ಲಾ ಸರ್ಕಲುಗಳಿಗೂ ಹೋಗಿ ಜನಾಭಿಪ್ರಾಯವೇನೆಂಬುದನ್ನು ಸಂಗ್ರಹಿಸಲಿಲ್ಲ. ಅದರೂ ತಮ್ಮ ಸರ್ಕಲಿಗೆ ಸಮಿತಿಯವರು ಬಾರದಿದ್ದರೂ ಇಲ್ಲಿನ ಕೆಲವು ಜನಪ್ರತಿನಿಧಿಗಳು ಸಮಿತಿಯವರ ಕಾರ್ಯಕ್ರಮಗಳನ್ನು ತಿಳಿದುಕೊಂಡು ಅವರಿದ್ದಲ್ಲಿಗೇ ಹೋಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದರು. ಆದರೆ, ಹುರಿಯಾಳುಗಳನ್ನು ನಿಯೋಜಿಸುವಾಗ ಜನಾಭಿಪ್ರಾಯಕ್ಕೆ ಸಮಿತಿಯು ಮನ್ನಣೆ ಕೊಡದಿದ್ದುದು ಕಂಡುಬರುತ್ತದೆ.

ಸಮಿತಿಯು ಉಮೇದ್ವಾರರನ್ನು ಆರಿಸುವಾಗ ಉಮೇದ್ವಾರರ ಯೋಗ್ಯತೆಯ ಕಡೆಗೆ ಲಕ್ಷ್ಯಕೊಟ್ಟದ್ದು ಕಂಡುಬರುವುದಿಲ್ಲ. ಜಾತೀಯವಾದಕ್ಕೆ ಎಡೆ ಕೊಟ್ಟದ್ದೂ, ಹಿಂದೆ ಕಾಂಗ್ರೆಸ್ಸಿಗೆ ವಿರೋಧ ನಿಂತವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದ್ದೂ ಕಂಡು ಬರುತ್ತದೆ. ೧೯೪೬ ರ ಚಲೇಜಾವ್ ಚಳವಳಿ ಕಾಲದಲ್ಲಿ ಕಾಂಗ್ರೆಸ್ಸಿನ ಆದೇಶದಂತೆ ಬಹುಮಂದಿ ಜಿಲ್ಲಾ ಬೋರ್ಡು ಸದಸ್ಯರು ರಾಜೀನಾಮೆ ಸಲ್ಲಿಸಿದ್ದರು. ಹಾಗೆ ತೆರವಾದ ಸ್ಥಳಗಳಿಂದ ಹಿಂದೆ ಜಿಲ್ಲಾ ಬೋರ್ಡಿಗೆ ಸದಸ್ಯರಾಗಿ ಹೋಗಿ ಕಾಂಗ್ರೆಸ್ಸಿನ ಬಿಕ್ಕಟ್ಟಿನ ಕಾಲದಲ್ಲಿ ಸಂದರ್ಭ ಸಾಧಕರಾದವರಿಗೂ ಇಂದು ಸ್ಥಾನ ದೊರಕಿದೆ. "ಇಂಥಾ ಜಾತಿ ಹಿಂದುಳಿದದ್ದು; ಅವರಿಗೆ ಪ್ರಾತಿನಿಧ್ಯ ಕೊಡಬೇಕಾಗಿದೆ" ಎಂಬ ಕೂಗಿಗೂ (Slogan) ಪುರಸ್ಕಾರ ದೊರಕಂತಿದೆ. ಹರಿಜನರಂತಹ ಹಿಂದುಳಿದ ಜಾತಿಯವರ ಕಾದಿಟ್ಟ ಸ್ಥಾನಗಳನ್ನೇ ಕ್ರಮಶಃ ಅಂಕ್ಯಗೊಳಿಸಬೇಕೆಂದು ಕಾಂಗ್ರೆಸ್ಸು ನಿರ್ಧರಿಸಿರುವಾಗ ಕಾದಿಡಲ್ಪಡದ ಸಾಮಾನ್ಯ ಸ್ಥಾನಗಳಿಗೂ (General seat) "ಆ ಜಾತಿಗೊಂದು ಪ್ರಾತಿನಿಧ್ಯ, ಈ ಜಾತಿಗೊಂದು" ಎಂಬ ಪರಂಪರೆಯನ್ನು ನಿರ್ಮಿಸಿ, ಅಸ್ಪೃಶ್ಯಕ್ಷವಾಗಿ ಜಾತೀಯ ಭಾವನೆಗೆ ಎಡೆಗೊಡಲೇಕೆ ? ಸಾಮಾನ್ಯ ಸ್ಥಾನಗಳಿಗೆ (General seats) ಆರಿಸುವಾಗ ಜಾತೀಯತೆಗೆ ಪ್ರಾಧಾನ್ಯಕೊಡದೆ ಆಯಾ ಸರ್ಕಲಿನ ಜನತೆಯ ಸಂಪರ್ಕವಿದ್ದು, ಅವರ ಮಧ್ಯದಲ್ಲಿರುವ ಸಾರ್ವಜನಿಕ ಕಾರ್ಯಕರ್ತರನ್ನು ನಿಯೋಜಿಸಬೇಕಿತ್ತು. ಈ ರೀತಿ ಮಾಡದುದು ದುರ್ದೈವದ ಸಂಗತಿ.

ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಕಾಂಗ್ರೆಸ್ ಸಂಸ್ಥೆಯ ಮೇಲಿನ ಅಭಿಮಾನದಿಂದ ಈ ಬಾರಿ ಮತದಾರರು ಕಾಂಗ್ರೆಸ್ ಹುರಿಯಾಳುಗಳಿಗೇ ಮತಕೊಡುವಲ್ಲಿ ಸಂದೇಹವಿರಲಾರದಾದರೂ ಅವರು ಎಂದಿನ ಉತ್ಸಾಹ ತಾಳಲಾರರು. ಅಲ್ಲದೆ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಈ ತೆರನಾದ ಧೋರಣೆಯಿಂದ ಕಾಂಗ್ರೆಸ್ಸಿನ ಚಟುವಟಿಕೆಗಳು ಕುಂಠಿತವಾಗಬಹುದೆಂದು ವಿಷಾದದಿಂದ ಹೇಳಬೇಕಾಗಿದೆ.

೩೧-೮-೪೯ ಕೋಟಿಗಣೇಶ ಸುಬ್ಬಪ್ಪಯ್ಯ

ಇತಿಹಾಸದಿಂದ ಭಾರತ ಕಲಿಯುತ್ತಿರುವ ಪಾಠ

ದಿವಂಗತ ಮಾನ್ಯ ವಿ. ಎಸ್. ಶ್ರೀನಿವಾಸಶಾಸ್ತ್ರಿ ಸ್ಮಾರಕ ಭಾಷಣಮಾಲೆಯ ಅಂಗವಾಗಿ ಅಣ್ಣಾಮಲೈ ವಿಶ್ವವಿದ್ಯಾನಿಲಯದಲ್ಲಿ ಡಾ. ಸಿ. ಆರ್. ರೆಡ್ಡಿಯವರು ಭಾರತದ ಈಗಿನ ರಾಜಕೀಯ ಒಲವುಗಳನ್ನು ಕುರಿತು ಒಂದು ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟಿದ್ದಾರೆ. ಅದರ ಸಾರ ಈ ಕೆಳಗೆ ಸಂಗ್ರಹಿಸಲಾಗಿದೆ.

೧೯೧೨ ರಲ್ಲಿ ಇಂಗ್ಲಂಡಿನಲ್ಲಿ ನಡೆದ ಘಟನೆಯೊಂದು ಮಂತ್ರಿಗಳ ವರ್ತನೆಯನ್ನು ಕುರಿತು ಮಾಡುವ ವಿಚಾರಣೆಗೆ ತುಂಬ ಸಂಬದ್ಧವಾಗಿದೆ. ಆಗ ಅಲ್ಲಿನ ಮಂತ್ರಿಗಳಾದ ಲಾಯ್ಡ್ ಜಾರ್ಜ ಮತ್ತು ಲಾರ್ಡರೀಡಿಂಗರ ಮೇಲೆ ಸ್ಟಾಕ್ ಎಕ್ಸಚೇಂಜದಲ್ಲಿ ನಡೆಯುವ ವ್ಯವಹಾರಗಳ ಸಂಬಂಧದಲ್ಲಿ ಕೆಲ ಆರೋಪಗಳು ಬಂದವು. ಇಂಗ್ಲಂಡಿನಲ್ಲಿ ಪ್ರಚಲಿತವಾದ ರೂಢಿಯಂತೆ ಆಗಿನ ಮುಖ್ಯ ಮಂತ್ರಿಯಾದ ಅಸ್ಕ್ವಿತ್‌ರು ಅವುಗಳಲ್ಲೇನಾದರೂ ಹುರುಳಿದೆಯೇ ಮತ್ತು ನ್ಯಾಯಮಂಡಲವನ್ನಾಗಲಿ ಪಾರ್ಲಮೆಂಟಿನ ಮಂಡಲವನ್ನಾಗಲಿ ಈ ಬಗ್ಗೆ ವಿಚಾರಿಸಲು ನೇಮಿಸುವುದವಶ್ಯವಿದೆಯೇ ಎಂದು ಪರಿಶೀಲಿಸಿ ತಮ್ಮ ಮಂತ್ರಿಗಳ ವರ್ತನೆಯಲ್ಲಿ ಅಂಥ ಕೊರತೆಯೇನೂ ಇಲ್ಲವೆಂದು ವಿಶ್ವಾಸವಾದರೂ ಒಂದು ಪಾರ್ಲಿಮೆಂಟರಿ ವಿಚಾರಣಾ ಸಮಿತಿಯನ್ನು ನೇಮಿಸಿದರು.

ಮಂತ್ರಿಯೊಬ್ಬನ ವರ್ತನೆ ಬರಿ ಪಕ್ಷಕ್ಕೆ ಸಂಬಂಧಿಸಿರದೆ ಇಡಿ ದೇಶದ ಆಡಳಿತಕ್ಕೇ ಅಸ್ಥೆಯದಾಗಿರುವುದರಿಂದ ಅದು ಪಕ್ಷದ ನಾಯಕನು ತೀರ್ಮಾನಿಸತಕ್ಕ ಸಂಗತಿಯಲ್ಲ. ಇಂಥ ಸಂದರ್ಭದಲ್ಲಿ ವಿಚಾರಣಾ ಸಮಿತಿಗೆ ವಿರುದ್ಧ ಪಕ್ಷದ ಒಬ್ಬ ಸದಸ್ಯನನ್ನು ಅಧ್ಯಕ್ಷನನ್ನಾಗಿ ನೇಮಿಸುವುದು ಬ್ರಿಟಿಶ ಸಂಪ್ರದಾಯ. ಮೇಲ್ಕಾಣಿಸಿದ ಸಂದರ್ಭದಲ್ಲಿ ವಿರುದ್ಧ ಪಕ್ಷದ ಲಾರ್ಡ ಹಾಲ್ಸ್‌ಬರಿಯವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಅವರು ವಿಚಾರಣೆ ನಡೆಸಿ ಇಬ್ಬರೂ ಮಂತ್ರಿಗಳು ನಿರ್ದೋಷಿಗಳೆಂದು ನಿರ್ಣಯ ಮಾಡಿದರು.

ಮದ್ರಾಸಿನಲ್ಲಿ ಅಕ್ರಮ

ಇಲ್ಲಿ (ಮದ್ರಾಸಿನಲ್ಲಿ) ನಡೆದ ವಿಚಾರಣೆಯಲ್ಲಿ ಮಂತ್ರಿ ಮಂಡಲಾತ್ಮಕ ಸರಕಾರಗಳ ಸಂಪ್ರದಾಯಗಳನ್ನೂ ಮುರಿಯಲಾಗಿದೆ. ದೋಷಾರೋಪಣೆ ಮಾಡುವದು ನನ್ನ ಉದ್ದೇಶವಲ್ಲ. ಆದರೆ ಮಂತ್ರಿಗಳನ್ನು ನೇಮಿಸಿಕೊಳ್ಳುವ ವನೆನಿಸಿದ ಮುಖ್ಯ ಮಂತ್ರಿಯ ಸ್ಥಾನ ಗೌರವಕ್ಕೂ ಜವಾಬ್ದಾರಿಕೆಗೂ ನಮ್ಮೀ ರೀತಿ ಸರಿಯಾಗಿದೆಯೆ ಎಂದು ಕೇಳಬೇಕು. ಮೊದಲು ಮುಖ್ಯ ಮಂತ್ರಿಯಾದವನು ಇದರಲ್ಲಿ ನ್ಯಾಯ ವಿಚಾರಣೆಗೆ ಅವಕಾಶ ಮಾಡಿಕೊಡಬಲ್ಲ ಲಿಖಿತ ಪ್ರಮಾಣಗಳೇನಾದರೂ ಇವೆಯೇ ಎಂದು ನೋಡಬೇಕು ಹಾಗಿದ್ದರೆ ಆ ಬಗ್ಗೆ ಒಬ್ಬ ನ್ಯಾಯಾಧೀಶನನ್ನು ನೇಮಿಸಬೇಕು. ಶಾಸನ ಸಭಾ ಸಂಪ್ರದಾಯಗಳಿಗೆ ವಿರುದ್ಧವಾದ ವರ್ತನೆ ಕಂಡುಬಂದಲ್ಲಿ ವಿರುದ್ಧ ಪಕ್ಷದಲ್ಲೊಬ್ಬನ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ನೇಮಿಸಬೇಕು. ಆದರೆ ಸರಕಾರೀ ಕಚೇರಿಯ ಕಾಗದ ಪತ್ರಗಳನ್ನು ಹೊರತಂದು ತೋರಿಸುವುದರಿಂದ ಆಡಳಿತೆಯ ಮಟ್ಟವನ್ನು ಕಾಯ್ದುಕೊಳ್ಳಲು ಸಹಾಯವಾದೀತೆ? ನನ್ನ ಅಭಿಪ್ರಾಯದಲ್ಲಿ ಈ ಪ್ರಸಂಗದಲ್ಲಿ ನಾವು ನಮ್ಮ ಸ್ವರೂಪದಲ್ಲಿ ಈ ಪ್ರಸಂಗದಲ್ಲಿ ನಾವು ನಮ್ಮ ಸ್ವರೂಪವೈಶಿಷ್ಟ್ಯಕ್ಕನುಸಾರವಾಗಿ ವರ್ತಿಸುತ್ತಿದ್ದೇವೆ. ಪಾರ್ಲಮೆಂಟರಿ ಪ್ರಜಾತಂತ್ರ ಇಲ್ಲಿ ಹೆಸರಿಗಷ್ಟೇ ಇದೆಯಲ್ಲದೆ ವಾಸ್ತವಿಕವಾಗಿಲ್ಲ. ಅದು ತಿರುಳಿಲ್ಲದ ಹೊರ ತೋರಿಕೆ ಮಾತ್ರ.

ನಮ್ಮ ದೇಶದಲ್ಲಿ ವೈಯಕ್ತಿಕ "ಮಾ ಬಾಪ್" ಸರಕಾರದ ಪ್ರವೃತ್ತಿ ಇನ್ನೂ ಪ್ರಬಲವಾಗಿರುವುದೂ ಇದಕ್ಕೊಂದು ಕಾರಣವೆಂದು ನನ್ನ ಭಾವನೆ. ಶಾಖೆಯ ಮುಖ್ಯಾಧಿಕಾರಿಗಳು, ಕಲೆಕ್ಟರರು ಮೊದಲಾದವರನ್ನು ಬದಿಗೆ ಸರಿಸಿ ಮಂತ್ರಿಯೇ ಸ್ವತಃ ಹೋಗಿ ನೋಡಿ, ಭೋಜನ ಮಾಡಿ ಅಪ್ಪಣೆಗಳನ್ನು ಹೊರಡಿಸುತ್ತಾನೆ. ಲೇಖಕರೂ ಕೈಕೋರ್ಟರಗಳೂ ತೋರಿಸಿದ ಮಾರ್ಗದಲ್ಲಿ ಮುನ್ನಡೆದು ದೇಶ ನಿಜವಾದ ಪ್ರಜಾತಂತ್ರದತ್ತ ಸಾಗಿಯೇ ಸಾಗುವದೆಂಬಲ್ಲಿ ನನಗೆ ಸಂಶಯವಿಲ್ಲ. ಆದರೆ ನಮ್ಮ ನಿತ್ಯ ಜೀವನದಲ್ಲಿಯೂ [illegible] ಶಾಸನ [illegible] ಕಾರದಲ್ಲಿಯೂ [illegible] ಸ್ವಾತಂತ್ರ್ಯ ಸ್ಥಾನವನ್ನು ಕೊಡುವ ಪ್ರವೃತ್ತಿ ಪಡೆಯಬೇಕು.

ಪಕ್ಷದ ಕಾರಭಾರ

ನಮ್ಮಲ್ಲಿ ಪಕ್ಷವೆಂಬುದು ಜನತೆಗೂ ಶಾಸನ ಸಭೆಗೂ ನಡುವೆ ಎರಿಸಿದ ಗೋಡೆಯಂತಿದೆ. ಪ್ರತಿಯೊಂದು ಮಸೂದೆಯೂ ಪಕ್ಷದ ಸಭೆಯಲ್ಲಿ ಸ್ವೀಕೃತವಾಗಿಯೇ ಶಾಸನ ಸಭೆಗೆ ಹೋಗಬೇಕು. ಸದಸ್ಯರು ಶಾಸನ ಸಭೆಯಲ್ಲಿ ಮಾತಾಡಬೇಕಾದ್ದೇ ಇಲ್ಲ. ಇದರಿಂದ ಶಾಸನ ಸಭೆಯ ಕಾರ್ಯಕಲಾಪಗಳು ತ್ವರಿತದಿಂದ ಸಾಗಬಹುದೇನೋ ನಿಜ. ಆದರೆ ಶಾಸನ ಸಭೆಯ ಮಟ್ಟ ಇದರಿಂದ ಇಳಿದು ಹೋಗುತ್ತದೆ. ಬ್ರಿಟಿಶ ಪಾರ್ಲಮೆಂಟಿನಲ್ಲಿ ಎಷ್ಟೋ ವೇಳೆ ಪಕ್ಷದ ಸದಸ್ಯರು ಸರಕಾರದ ವಿರುದ್ಧ ಮಾತಾಡುವುದುಂಟು. ಲಾಯ್ಡ್ ಜಾರ್ಜರೊಮ್ಮೆ ತಮ್ಮ ಪಕ್ಷದ ಸರಕಾರದ ವಿರುದ್ಧ ಮತಕೊಟ್ಟು "ನಾನು ಜನರ ಪ್ರತಿನಿಧಿ ಹೊರತು ಪಕ್ಷದ ಪ್ರತಿನಿಧಿಯಲ್ಲ" ವೆಂದು ಅದನ್ನು ಸಮರ್ಥಿಸಿಕೊಂಡಿದ್ದರು. ಎಡ್ಮಂಡ್ ಬರ್ಕನು ಪಾರ್ಲಮೆಂಟು 'ರಾಷ್ಟ್ರದ ಆಧಾರಸ್ತಂಭವಲ್ಲದೆ ಅದರ ಗಾಳಿಯ ಕೋಳಿಯಲ್ಲ'ವೆಂದಿದ್ದನು. ನಮ್ಮ ದೇಶದಲ್ಲಿ ಪಾರ್ಲಮೆಂಟರಿ ಪ್ರಜಾತಂತ್ರದ ಬಾಹ್ಯಾವರಣವನ್ನಷ್ಟೇ ಅನುಕರಿಸುವುದಾಗಿದೆ.

ತೆರೆಯ ಮರೆಯ ಸೂತ್ರಚಾಲಕರ ಆಳಿಕೆಯ ಸ್ಥಾನದಲ್ಲಿ ನಿಜವಾದ ಸರಕಾರದ ಆಳಿಕೆ ಇಲ್ಲಿ ಎಷ್ಟು ಮಟ್ಟಿಗೆ ಸಾಧ್ಯವೆಂದು ಊಹಿಸಲು ಯತ್ನಿಸುತ್ತಿದ್ದೇನೆ ಮಾತ್ರ. ಮದ್ರಾಸಿನಲ್ಲಿ ಮಹಾಪ್ರಧಾನ ರಾಜಾಜಿಯವರನ್ನು ಒದ್ದು ಹೊರಹಾಕಲು ಕೆಲ ಕಾಂಗ್ರೆಸ್ಸಿಗರು ಒಂದಾದಾಗ ಇಂಥ ಸೂತ್ರಚಾಲಕ ಆಳಿಕೆ ಮೊದಲಾಯಿತು. ಆದರೆ ಅವರನ್ನು ತಾವು ನಿಜವಾಗಿ ಮೇಲಕ್ಕೆ ಗವರ್ನರ ಜನರಲ್ ಪದಕ್ಕೆ ಒದೆಯುತ್ತಿದ್ದೇವೆಂಬ ಕಲ್ಪನೆ ಅವರಿಗಿದ್ದಿಲ್ಲ. ಅವರು ಆ ಉಚ್ಚಪದಾರೂಢರಾದ ಮೇಲೆ ಮದ್ರಾಸಿಗೆ ಮರಳಿದಾಗ ಮಾತ್ರ ಅವರಿಗೆ ಮಾಲೆ ಹಾಕುವಲ್ಲಿ ನೂಗ್ಗಾಟವೇ ನಡೆಯಿತು. ನಮ್ಮ ಮನಸು ದೊಡ್ಡದು. ನಾವು ಕಾಡಿದ ಜನರು ನಮ್ಮ ನೆರವಿಲ್ಲದೆ ಉತ್ಕರ್ಷಕ್ಕೇರಿದರೆ ಅವರನ್ನು ಕ್ಷಮಿಸಲು ನಾವು ಯಾವಾಗಲೂ ಸಿದ್ಧರೆ!

ತಿರುಳು–ನೆರಳು

ಕೇಂದ್ರದಲ್ಲಿರುವ ಮಂತ್ರಿಮಂಡಲ ಸರಕಾರವನ್ನು ಪ್ರಾಂತಗಳಲ್ಲಿರುವವುಗಳೊಡನೆ ಹೋಲಿಸಿದರೆ ನಿಜವಾದ ತಿರುಳು ದಿಲ್ಲಿಯಲ್ಲಿರುವುದೂ ಪ್ರಾಂತಗಳಲ್ಲಿ ಬರಿ ನೆರಳು ಮಾತ್ರ ಕುಣಿಯುತ್ತಿರುವುದೂ ಗೊತ್ತಾಗುತ್ತದೆ. ನಮ್ಮ ಮುಂದಾಳುಗಳಿಗೆ ಕಲಿಯಲೂ ಗೊತ್ತಿದೆ ಮರೆಯಲೂ ಗೊತ್ತಿದೆ. ಹಿಂದಿನ ಕಾಲದಲ್ಲಿ ತಾವು ಘೋಷಿಸುತ್ತಿದ್ದ ಮಂತ್ರಗಳನ್ನು ಅವರು ಬಹಳ ಯುಕ್ತಿಯಾಗಿ ಮರೆತುಬಿಟ್ಟಿದ್ದಾರೆ. ಅಂದಾಕ್ಷಣ ಕಾಂಗ್ರೆಸ್ಸಿಗರನ್ನು ದೂರಿದ್ದಂತಾಗಲಿಲ್ಲ. ಅವರಿಗೆ ಈಗ ವಸ್ತುಸ್ಥಿತಿಯ ಅರಿವಾಗಿ ಅದಕ್ಕನುಗುಣವಾಗಿ ನಡೆದುಕೊಳ್ಳತೊಡಗಿದ್ದಾರೆ, ಅಷ್ಟೆ. ಹೇಳಿದ್ದಕ್ಕೇ ಹಟದಿಂದ ಅಂಟಿಕೊಳ್ಳುವುದು ಅಲ್ಪ ಮತಿಗಳ ಲಕ್ಷಣ. ನಮ್ಮ ಮುಂದಾಳುಗಳು ಖಂಡಿತವಾಗಿ ಅಲ್ಪರಲ್ಲ. ಒಂದು ಕಾಲದಲ್ಲಿ ಪಾಶ್ಚಾತ್ಯ ವಿಜ್ಞಾನವನ್ನು ತೆಗಳುತ್ತಿದ್ದವರು ಈಗ ವೈಜ್ಞಾನಿಕ ಸಂಶೋಧನಗಳಿಗೆ ಶಕ್ತಿಮೀರಿ ಸಹಾಯವಾಗುತ್ತಿದ್ದಾರೆ. [illegible] ನಮ್ಮ ಆಯುಧ, [illegible] ಲಕ್ಷಣದವರು ಈಗ [illegible] ಗಳನ್ನು [illegible]. ನಿಜವಾಗಿ ೨೦೦ ವರ್ಷಗಳಿಂದ [illegible] ನಮ್ಮ [illegible] ಸರಕಾರ ಬೇರೆ [illegible] ಇಲ್ಲ. [illegible] ಮಾರ್ಗದಲ್ಲಿ [illegible] ಇದು ಒಳ್ಳೆಯ ಲಕ್ಷಣ.

ನಾಗರಿಕ ಸ್ವಾತಂತ್ರ್ಯ

ನಾಗರಿಕ ಸ್ವಾತಂತ್ರ್ಯ [illegible] ಅಧ್ಯಕ್ಷ [illegible] ಮಂತ್ರಿ [illegible] ನಾಗರಿಕ [illegible]

[illegible] ಸ್ವಾತಂತ್ರ್ಯ [illegible] ಕಾಂಗ್ರೆಸ್ಸನ್ನು [illegible] ಕಾಂಗ್ರೆಸ್ಸು [illegible] ಅದನ್ನು [illegible] ನಮ್ಮ [illegible] ಸ್ವಾತಂತ್ರ್ಯ [illegible] ನಮ್ಮ ಸರಕಾರ [illegible] ಗೌರವ [illegible] ಅವರು [illegible] ಸ್ವಾತಂತ್ರ್ಯದ ಬಗ್ಗೆ [illegible] ವುವೆಂದು ಪರಿಶೀಲಿಸಬೇಕು.

[illegible] ಈ ಭಾವನೆಯನ್ನು [illegible] ಅನಂತರ [illegible] ವಿಲಾಸಕ್ಕಾಗಿ ಅಲ್ಲದೆ [illegible] ಸ್ವಾರ್ಥದ ಕಾರ್ಯವನ್ನು ಸಾಧಿಸಲು ಯುರೋಪಿಗೆ ಹೋದ ಅಮೇರಿಕನ್ನರಿಗೆ ಭಯಾಶ್ಚರ್ಯಗಳು ಬಹಳ ಕಾಲದಲ್ಲಿ ಉಂಟಾಗದಿರವು. ಇತ್ತೀಚೆಗೆ ಯುರೋಪನ್ನು ಸುತ್ತಿಕೊಂಡು ಬಂದ ಬುದ್ಧಿವಂತ ಅಮೇರಿಕನ್ನನೊಬ್ಬನು ಯಾರಾದರೂ ಯುದ್ಧಕ್ಕೆ ನನ್ನನ್ನು ಒತ್ತಾಯದಿಂದ ಎಳೆದೊಯ್ಯುವುದು ಯುರೋಪಿಗೆ ಸ್ವಲ್ಪವೂ ಇಷ್ಟವಿಲ್ಲ ಎಂಬ ಅಂಶವನ್ನು ವರದಿಮಾಡಿದ್ದಾನೆ. ಎರಡು ವರ್ಷಗಳ ಕೆಳಗೆ ನಾನಾದರೂ ಇದೇ ಮಾತನ್ನು ಈ ಪತ್ರಿಕೆಯಲ್ಲಿ ಹೇಳಿದ್ದೆ. ಈಗ [illegible] ಅಮೇರಿಕನ್ನರಿಗೆ ಆ ಸತ್ಯ ಸ್ವಯಂವೇದ್ಯವಾಗುತ್ತಿದೆ.

ಯುದ್ಧದಿಂದ ದೂರವಿರಬೇಕೆಂಬ ಅಭಿಪ್ರಾಯವನ್ನು ಯುರೋಪು ವಿವಿಧ ಕಾರಣಗಳಿಗಾಗಿ ತಾಳಿರುತ್ತದೆ; ಅವುಗಳಲ್ಲಿ ಮುಖ್ಯವಾದವೆಂದರೆ ಪರಾತ್ರಮಣಭೀತಿ ಮತ್ತು ಅಮೇರಿಕದ ವಿದೇಶನೀತಿಯ ಕುರಿತಾದ [illegible] ಕಳೆದ ಮಹಾಯುದ್ಧ ಸುರುವಾದರೆ [illegible] ಯುರೋಪಿನಿಂದ [illegible] [illegible] ಕಳೆದ ಮಹಾಯುದ್ಧದಲ್ಲಿ [illegible] ಉಗ್ರತರವೆನಿಸುವ ಆಯುಧೋಪಕರಣಗಳಿಂದ ಕಾದಿದ್ದು, ಯುರೋಪಿನ ಮಧ್ಯ ಮತ್ತು ಪಶ್ಚಿಮ ಭಾಗಗಳ ಜನ, ಧನ, ಸೈನ್ಯ, [illegible] [illegible] [illegible] ಉಗಳು ಯುದ್ಧದಲ್ಲಿ [illegible] [illegible] ಮಾಡಿದ ಶ್ರೀ [illegible] [illegible]

ಅವನ ನಾಡಿನ ಸಾಮಾಜಿಕ ರಚನೆಯನ್ನು ವಿಪರ್ಯಯಗೊಳಿಸಲು, ತದ್ವಿರುದ್ಧವಾಗಿ ಅದನ್ನು ಮತ್ತಷ್ಟು ಸ್ಥಿರಬಂಧದಿಂದ ಬೆಸೆಯಲು ನೆರವಾಗುತ್ತದೆ. ಕಡೆಯ ವಾಕ್ಯದತ್ತ ನೀವು ಲಕ್ಷ್ಯಕೊಡಬೇಕು. ಏಕೆಂದರೆ ತೃತೀಯ ಮಹಾ ಯುದ್ಧದಿಂದ ಯಾವಬಗೆಯ ಫ್ರಾನ್ಸ್ ಹೊರಬೀಳಬಹುದು ಎಂಬುದರ ಬಗ್ಗೆ ಕಮ್ಯುನಿಸ್ಟೇತರ ಫ್ರೆಂಚ್ ಜನರ ಕಾತರತೆಯನ್ನು ಸೂಚಿಸುತ್ತದೆ. ಅದರಿಂದ ಫ್ಯಾಸಿಜಂ ಅಥವಾ ಕಮ್ಯುನಿಜಂ; ಇಲ್ಲದೆ ಹೋದರೆ ಅದಕ್ಕೂ ದುರ್ಧರವಾದ ಅರಾಜಕ ಪರಿಸ್ಥಿತಿ ಉಂಟಾಗಬಹುದೆಂದು ಅವರು ಮುನ್ನೋಡುತ್ತಾರೆ.


ಫ್ರೆಂಚರ ಭಯ

ಕೇವಲಯುದ್ಧೋನ್ಮುಖವಾಗಿರುವುದರಿಂದಲೇ ದೇಶದ ಸಾಮಾಜಿಕ ರಚನೆಗೆ ಹಾನಿ ಸಂಭವಿಸುವುದು ..ಎಂದು ಉದಾರವಾದಿ ಫ್ರೆಂಚ್ ವರ್ಗ ಅಭಿಪ್ರಾಯ ಪಡುತ್ತದೆ. ಯುದ್ಧವಾಗುವ ಸಂಭವ ಹೆಚ್ಚಿದಷ್ಟೂ ಡಿಗಾಲೆ ಅಧಿಕಾರಕ್ಕೆ ಬರುವ ಸಂಭವ ಹೆಚ್ಚೀತು. ಏಕೆಂದರೆ ಅವನು ಬಂದರೆ ಕಾಲು ಕೆರೆದು ಕಮ್ಯುನಿಸ್ಟರೊಡನೆ ಜಗಳ ತೆಗೆಯುವನು. ಅದರಿಂದ ಹೊರಗಿಂದ ಯಾರಾದರೂ ದಾಳಿ ಮಾಡುವ ಮೊದಲೇ ಫ್ರಾನ್ಸಿನಲ್ಲಿ ಯುದ್ಧ ಪ್ರಾರಂಭವಾಗುವದು ಎಂದು ಫ್ರೆಂಚರು ಹೆದರಿದ್ದಾರೆ.

ಅಮೇರಿಕದಲ್ಲೀಗ ಮುಲ್ಕಿ ಅಧಿಕಾರಿಗಳನ್ನೂ ಖಾಸಗಿ ಅಧಿಕಾರಿಗಳನ್ನೂ ಬೆದರಿಸಿ ಇಡುವುದು ಸಾಗುತ್ತಲೇ ಇದೆ. ಟೆಲಿಫೋನ್ ತುಂಬಿರುವ ಈ ನಾಡಿನಲ್ಲಿ ಯುದ್ಧದ ವಿಷಯವಾಗಿ ಯಾವ ಸಂಗತಿಯನ್ನೂ ತಮ್ಮ ಆಪ್ತರಿಗೆ ಕೂಡ ತಿಳಿಸುವಂತಿಲ್ಲ. ಏಕೆಂದರೆ, ತಂತಿಯಿಂದ ನಡುವೆ ಎಲ್ಲಿಯಾದರೂ ವಿರುದ್ಧ ಪಕ್ಷದವರು ಆ ವಿಷಯವನ್ನು ಗ್ರಹಿಸಿಬಿಟ್ಟರೇನುಗತಿ? ಎಂದು ಭೀತಿ. ಇದರಿಂದ ಯುದ್ಧ ಸಂಭವಿಸುವುದೆಂಬ ಚಿತ್ತಭ್ರಮೆ ಆಗಲೇ ತಕ್ಕಮಟ್ಟಿಗೆ ಇಲ್ಲಿಯ ಸಾಮೂಹಿಕ ಜೀವನದ ಮೇಲೆ ಪರಿಣಾಮವನ್ನುಂಟುಮಾಡಿದೆಯೆಂದು ಹೇಳಬಹುದು. ಆದರೆ ಯುದ್ಧ ಸಾಕ್ಷಾತ್ತಾಗಿ ಸುರುವಾಗುವ ತನಕ ಅಮೇರಿಕದಲ್ಲಿ ಅದರಿಂದಾಗಬಹುದಾದ ಪರಿಣಾಮಗಳನ್ನೂ ಯುರೋಪಿನಲ್ಲಿ ಅದರಿಂದ ಉಂಟಾಗಬಹುದಾದ ಫಲಿತಾಂಶಗಳನ್ನೂ ಹೋಲಿಸುವದು ಪೆದ್ದತನವೇ ಸರಿ. ಯುರೋಪಿನಲ್ಲಿಯ ಪ್ರಗತಿಪರರು ಕಳೆದೆರಡು ವರ್ಷಗಳಲ್ಲಿ ಸಾಕಷ್ಟು ಹಿನ್ನಡೆದಿದ್ದಾರೆ. ಇನ್ನು ಯುದ್ಧ ಸಿದ್ಧತೆಯಲ್ಲಿ ಹಿನ್ನಡೆಯುವ ಅಂಶ ಉಳಿದಿಲ್ಲ. ಫ್ರಾನ್ಸಿನಲ್ಲಿ ಈಗ ಅಥವಾ ನಾಳೆ ಸೋಶಲಿಸ್ಟರು ಸರಕಾರದಲ್ಲಿಯ ತಮ್ಮ ಸ್ಥಾನಗಳನ್ನು ಬಿಟ್ಟೋಡಬೇಕಾಗುವುದು ಖಂಡಿತ. ಪ್ರತಿಭಟನೆಯ ಒಂದು ಸ್ವರವೂ ಉಳಿಯದಂತೆ ಮಾಡಿದಲ್ಲದೆ ದೇಶವನ್ನು ಆತ್ಮರಕ್ಷಣೆಗೆ ಸಮರ್ಥವನ್ನಾಗಿ ಮಾಡಲು ಸಾಧ್ಯವಿಲ್ಲ ಎಂಬ ತನ್ನ ಧೋರಣವನ್ನು ಶ್ರೀ ಪಾಲ್ ಕಾರ್ಯರೂಪಕ್ಕೆ ತಂದೇತರುವನು. ಇಟಲಿಯಲ್ಲಿ ಕೂಡ ಈ [illegible]

ತಂತ್ರ ಯುದ್ಧದ ಪರಿಣಾಮದ ಬಗ್ಗೆ ಶಂಕೆ

ಈಗ ಸಾಗುತ್ತಿರುವ Cold war ಈ ಯಾಂತ್ರಿಕ ಸಮರವು ಒಮ್ಮೆಲೇ ಗುಂಡುಮದ್ದುಗಳಿಂದ ಉರಿಯುಗುಳುವ ಭೀಕರ ಯುದ್ಧವಾಗಿ ಪರಿಣಮಿಸಬಹುದೆಂದು ಪಶ್ಚಿಮದ ಯುರೋಪಿಯನ್ನರಿಗೆ ಎದೆಗುಂದಿಗೆ ಅಡುರಲು ಅಮೇರಿಕದ ವಿದೇಶ ಧೋರಣೆಯ ಅತಿ [illegible] ಕಾರಣವಾಗಿದೆ. ಅಮೇರಿಕದ [illegible] ನೀತಿಯ ಮೂಲವನ್ನು ಸಸ್ಯರ ಒಮ್ಮತ [illegible] ಸರಕಾರ ಜನರೂ ಪತ್ರಿಕೆಗಳೂ ಹರಿಸದು. [illegible] [illegible] ಮಾಡಿಕೊಳ್ಳ ಕೂಡ [illegible]



[illegible] ದಂತವೈದ್ಯಕೀಯ ಸಹಾಯವೆಲ್ಲೆಂ[illegible]ಲ್ಲಿ ಸಿಗುವಂತೆ ಮಾಡುವುದಕ್ಕಾಗಿ ಸರ್ವಶಸ್ತ್ರ [illegible] ದೊಡನೆ ದಂತ್ಯ ಶಸ್ತ್ರವೈದ್ಯರನ್ನು ಊರೂರಿಗೆ ಕಳಿಸುವ ವ್ಯವಸ್ಥೆ ಮಾಡಿದೆ. ಅದೊಂದು [illegible]ಗಳಿಂದ ತಿರುಗುವ ವಾಹನದಂತಿರುವ ಆಸ್ಪತ್ರೆ. ಅದರಲ್ಲಿ ಒಂದು ಕುಳಿತುಕೊಳ್ಳುವ [illegible]ಯಿದೆ; ಅದರಲ್ಲಿ ೬ ಜನರು ಕುಳಿತುಕೊಳ್ಳಬಹುದು. ಅನಂತರ ಒಂದು ಶಸ್ತ್ರ ಚಿಕಿತ್ಸಾ[illegible] ಪ್ರಯೋಗಶಾಲೆ ಮತ್ತು ರೋಗಿಗಳ ಆರೈಕೆಯ ಸ್ಥಳ ಎನಿಸಿದ ಒಂದು ಕೋಣೆ ಇವೂ [illegible] ಅದಕ್ಕೆ ತನ್ನದೇ ಆದ ಒಂದು ವಿದ್ಯುದುತ್ಪಾದಕ ಯಂತ್ರವೂ ಜಲಪೂರಕವೂ ಇವೆ.

[illegible]ತ್ತಿಯಿಂದ ಯುರೋಪಿಯನ್ನರಿಗೆ ಯುದ್ಧ ಭಯ ಎಷ್ಟಿದೆ ಎಂಬುದು ಸ್ಪಷ್ಟವಾಯಿತು. ಸ್ವಾಭಾವಿಕವಾಗಿ ಅಷ್ಟೇನೂ ಆಶೆಯಿಟ್ಟುಕೊಂಡಿರದಿದ್ದರೂ ಅವರು ಆ ಸಭೆಯನ್ನು ಅಮೇರಿಕದಲ್ಲಿ ಕಾಣಸಿಗದ ಒಂದು [illegible] ಪ್ರತ್ಯಾಶೆಯ ಮತ್ತು ಬಂಧಮುಕ್ತತೆಯ ಉಲ್ಲಾಸದಿಂದ ಸ್ವಾಗತಿಸಿದರು. ಅದರಲ್ಲಿ ಭಾಗಿಗಳಾದವರಲ್ಲೂ ಈ ವ್ಯತ್ಯಾಸ ಕಂಡು ಬಂದಿತು. ವಿದೇಶಮಂತ್ರಿಗಳಾದ ಆಚೆಸನ್ ಮತ್ತು ಬೆವಿನ್ನರು ರಶಿಯನ್ನರೊಡನೆ ಮಾತುಕತೆ ನಡೆಸುವುದು ಒಂದು ಕೇವಲ ಔಪಚಾರಿಕ ಕರ್ತವ್ಯವೆಂದು ತಿಳಿದರೆ, ಶೂಮನ್ನರಾದರೋ ಆ ಸಭೆ ಸೇರುವಂತಾದದ್ದೇ ಉಗ್ರ ಪರಿಸ್ಥಿತಿ ಸ್ವಲ್ಪ ಶಿಥಿಲವಾಗಿ ಮುಂದಿನ ಸಂಧಾನಗಳಿಗೆ ಅನುಕೂಲವುಂಟಾಯಿತು ಎಂದು ತಮ್ಮ ಮಂತ್ರಿಮಂಡಲಕ್ಕೆ ಹೇಳಿದರೆಂದು ತಿಳಿಯುತ್ತದೆ.

ಫ್ರೆಂಚ್ ವಿದೇಶಮಂತ್ರಿ ತೀವ್ರಗಾಮಿಯೂ ಅಲ್ಲ, ರಶಿಯವತ್ಸಲನೂ ಅಲ್ಲ. ಅನೇಕ ಮುಂದಗಾಮಿಗಳಾದ ಫ್ರೆಂಚ್ ರಾಷ್ಟ್ರೀಯರು ಲಂಡನ್ ವಾಶಿಂಗಟನ್ನುಗಳನ್ನು ಹೆಚ್ಚಾಗಿ ಅವಲಂಬಿಸಿದ ಬಗ್ಗೆ ಅವನನ್ನು ಚೆನ್ನಾಗಿ ದೂರಿದ್ದಾರೆ. ಆದರೆ ಶೂಮನ್ನರು ಮಾತ್ರ ಪಂಡಿತ ನೆಹರು ಒಮ್ಮೆ ಹೇಳಿದ "ಪರಿಸ್ಥಿತಿಯ ಕಠಿನ ತರ್ಕ"ವನ್ನು ಒಪ್ಪಿಕೊಂಡಿದ್ದಾರೆ: ಫ್ರೆಂಚ್ ಜನರು ಯುದ್ಧಾಪಾಯಗಳನ್ನು ಲವಲೇಶವಾದರೂ ಕಡಿಮೆ ಮಾಡಲು ಬೇಡಿಕೊಳ್ಳುವರೆಂಬುದು ಅವರ ಅಂತರಾತ್ಮನಿಗೆ ಚೆನ್ನಾಗಿ ಅವಗತವಾಗಿರುವ ಅಂಶ.

ಇತಿಹಾಸದಿಂದ ಭಾರತ ಕಲಿಯುತ್ತಿರುವ ಪಾಠ

೭ನೇ ಪುಟದಿಂದ ಬಂದುದು)

[illegible]. ಪ್ರತಿಯೊಂದು ದೊಡ್ಡ ಕ್ರಾಂತಿಯಲ್ಲೂ ಜನರನ್ನು ಕೂಡಿಸಲು [illegible] ಮಾಡಲೇ ಬೇಕಾಗುತ್ತದೆ. ಆದರೆ ಮುಂದೆ ಅವರ ಮಾತೇ ಅವರಿಗೆ ಮುಳುವಾಗುತ್ತದೆ. ಮಾತ್ರವಲ್ಲ, ಅವರ ವಿರೋಧಿಗಳು ಅವರಿಗಿಂತಲೂ ಉಗ್ರ ಕ್ರಾಂತಿಕಾರಿಯಾದ ವಾಗ್ದಾನಗಳನ್ನು ಮಾಡುತ್ತಾರೆ. ಅದು ಕಾರಣ, ದೇಶದಲ್ಲಿ ಹೆಚ್ಚು ಶಿಸ್ತು ಸಂಯಮಗಳಿದ್ದರೆ ಇನ್ನಷ್ಟು ಪ್ರಗತಿಯಾಗುತ್ತಿತ್ತು.

ಭವಿಷ್ಯತ್ತನ್ನು ಊಹಿಸಲು ನಾನೇನೂ ಜೋಯಿಸನಲ್ಲ. ಆದರೆ ಬ್ರಿಟಿಶ ಮಾಡಿರುವ ಪ್ರಜಾತಂತ್ರ [illegible] ಭವಿಷ್ಯ ಒಳ್ಳೆಂದು ಹೇಳಬಹುದು. ಆದರೆ ಬೇಕಾದ [illegible] ನೋಡಿದರೆ ನನಗೆ [illegible] ಜೊಂಪಿಸಿದವಾಗಿರುವ [illegible]

ಪಕ್ಕೆ ಬಂದಿಲ್ಲ. ಊಹಿಸಲಾರದ ಅನೇಕ [illegible]ದಾರಿಗಳು ಕವಲೊಡೆಯುವವು. ಅಂ[illegible] ನ್ಯೂನತೆಗಳು ಇನ್ನೂ ಬಹಳ ಉಳಿದಿವೆ [illegible] ನೆಹರೂ ಅವರು ನಮ್ಮ ಆಂತರಿಕ ದೌರ್ಬ[illegible]ಗಳನ್ನು ಒತ್ತಿ ಹೇಳಿದ್ದು ಯೋಗ್ಯವೇ [illegible] ಸಾಮೂಹಿಕ ಆದರ್ಶವಾದದಿಂದ ವ್ಯವ[illegible] ಪ್ರಪಂಚಕ್ಕಿಳಿದ ನಾವು ಇದೇ ಐತಿಹಾಸಿಕ [illegible] ವನ್ನವಲಂಬಿಸಿದರೆ ಐತಿಹಾಸಿಕ ಪಥವ[illegible] ಲಂಬಿಸಿದರೆ ಐತಿಹಾಸಿಕ ಸತ್ಯಗಳ ಅರಿವ[illegible] ವದುಸಾಧ್ಯವಿದೆ. ಅದಿಲ್ಲದೆ ನಾವು ಸುರಕ್ಷಿ[illegible] ಸಮೃದ್ಧರೂ ಆಗುವಂತಿಲ್ಲ. ನಮ್ಮ ರಾ[illegible] ಜೀವನ, ಗೌರವ, ಸ್ವಾತಂತ್ರ್ಯಗಳು [illegible] ಅಡಕವಾಗಿವೆ. ನಾವು ನಮ್ಮ ರಾಷ್ಟ್ರೀಯ[illegible]ಗಳತ್ತ ಇನ್ನಷ್ಟು ಜಾಗೃತರಾಗಿ [illegible] ದೇಶದಶಕ್ತಿ, ಐಕ್ಯ ಮತ್ತು ಅಧಿಕಾರಗ[illegible] ಹೆಚ್ಚಿಸಲು ಹೆಣಗಬೇಕು.

ಪಂಡಿತ ಜವಾಹರಲಾಲರು [illegible] ಅಲಹಾಬಾದಿಗೆ ಹೋದಾಗ ಸ್ವರಾಜ್ಯ [illegible]ದಲ್ಲಿ ಸಾಲೆಯ ಮಕ್ಕಳ ಕೂಡ ಅರ್ಧಗಂಟೆ[illegible] ಹೆಚ್ಚು ಕಾಲ ಆ ವಾಡಿದರು. ಎಲ್ಲಕ್ಕೂ [illegible] ನಾಲ್ಕು ವರ್ಷದ ಹುಡುಗ ಅವರನ್ನು [illegible]ಸಿದ. ಅವರೊಡನೆ ಪಂಡಿರರು [illegible]ದರು.

ಮುಂಬಯಿ

ಹಿಮಾಲಯದ ಶಿಖರವನ್ನೇರಲು ಸ್ವಿಟ್ಸರ್ಲಂಡದಿಂದ ಬಂದಿದ್ದ ಮೂವರು ಪ್ರವಾಸಿಕರು ಪಿರ್ಯಾಮಿಡ್ ಶಿಖರವನ್ನು ಯಶಸ್ವಿಯಾಗಿ ಏರಿ ಬಂದು ಮುಂಬಯಿಯಿಂದ ವಿಮಾನ ಮಾರ್ಗವಾಗಿ ಜಿನೇವಾಕ್ಕೆ ಹಿಂತಿರುಗಿದರು. ಇವರು ಪಿರ್ಯಾಮಿಡ್ (೨೩೫೦೦) ಡ್ಯಾನಿ (೨೨೦೦೦) ಮತ್ತು ಕೊಂಗೋಮಾ (೨೦೦೦೦) ಶಿಖರಗಳನ್ನು ಏರಿ ಬಂದಿರುವರು.

ಬ್ರಾಝಿಲ್‌ದಲ್ಲಿ ಹಿಂದೀ ರಾಯಭಾರಿಗಳಾಗಿದ್ದ ಈಗ ನಿವೃತ್ತರಾಗಲಿರುವ ಶ್ರೀ ಎಂ. ಆರ್. ಮಸಾನಿಯವರು ತಮ್ಮ ಪರಿವಾರದೊಡನೆ ಲಂಡನ ಮಾರ್ಗವಾಗಿ ಮುಂಬಯಿಗೆ ಬಂದಿರುವರು. ಬ್ರಾಝಿಲ್‌ದ ಜನರು ಹಿಂದುಸ್ತಾನದ ಬಗ್ಗೆ ಸ್ನೇಹಭಾವವುಳ್ಳವರಾಗಿರುವರೆಂದು ಅವರು ಒಂದು ಸಂದರ್ಶನದಲ್ಲಿ ಹೇಳಿದರು.

ಹಿಂದೀ ಬಂದರಗಳಿಗೆ ಬರುವ ಎಲ್ಲ ಹಡಗಗಳ ಪ್ರಯಾಣಿಕರ ಸೌಕರ್ಯಗಳ ಸಂಬಂಧದಲ್ಲಿ ವಿಚಾರ ಮಾಡಲು ಹಿಂದುಸ್ತಾನ ಸರಕಾರದವರು ಬೇಗನೆ ಒಂದು ಸಮಿತಿಯನ್ನು ನೇಮಿಸಲಿರುವರು. ಓರ್ವ ಸರಕಾರಿ ಅಧಿಕಾರಿಗಳು, ಹಡಗ ಕಂಪನಿಗಳ ಇಬ್ಬರು ಪ್ರತಿನಿಧಿಗಳು ಹಾಗೂ ಓರ್ವ ಸರಕಾರೇತರರು ಹೀಗೆ ತ್ರಿಪಕ್ಷೀಯ ಸಮಿತಿಯಿದು.

ಹಿಂದುಸ್ತಾನ ಸರಕಾರದವರು ಉಚ್ಚ ತಾಂತ್ರಿಕ ಶಿಕ್ಷಣಕ್ಕಾಗಿ ತೆರೆಯಲಿರುವ ೫ ಪೊಲಿಟೆಕ್ನಿಕ್ ಶಾಲೆಗಳಲ್ಲಿ ಕುರ್ಲಾದಲ್ಲಿಯ ಒಂದು ಶಾಲೆಯೂ ಇರುವದೆಂದು ತಿಳಿಯುತ್ತದೆ. ಈಗ ಕುರ್ಲಾದಲ್ಲಿ ನಿರಾಶ್ರಿತರ ಶಿಬಿರವೊಂದಿದ್ದು ಅದನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗುವದು.

ಉಗಿಬಂಡಿಯಲ್ಲಿ ಇಂಜಿನ ಡ್ರಾಯವರನು ಗಾರ್ಡನೊಡನೆ ಗಾಡಿ ನಡೆದಾಗ, ಸಂಪರ್ಕವನ್ನಿಟ್ಟುಕೊಳ್ಳಲು ಅನುಕೂಲವಾಗುವಂತೆ ರೇಡಿಯೊ ಇರಬೇಕೆಂಬ ಪ್ರಯೋಗಗಳು ನಡೆದಿವೆ. ಈಗ ಗಾರ್ಡನು ಡ್ರಾಯವರನೊಡನೆ ಮಾತಾಡಬೇಕಾದರೆ ಗಾಡಿಯನ್ನು ನಿಲ್ಲಿಸಿ ಡ್ರಾಯವರನ ವರೆಗೆ ನಡೆದುಕೊಂಡು ಹೋಗಬೇಕಾಗುವದು. ಇದನ್ನು ತಪ್ಪಿಸುವದಕ್ಕಾಗಿ ಈ ಪ್ರಯೋಗ ನಡೆದಿದೆ.

ಮುಂಬಯಿ ಸರಕಾರದವರು ಅಭಿವೃದ್ಧಿ ಶಾಖೆ ಎಂಬ ಹೊಸ ಶಾಖೆಯನ್ನು ಪ್ರಾರಂಭಿಸಿದ್ದಾರೆ. ಸದ್ಯಕ್ಕೆ ಆರೋಗ್ಯ ಮತ್ತು ಸ್ವರಾಜ್ಯ ಶಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಅದು ಕೆಲಸ ಮಾಡುವದು. ಇದರಿಂದ ಶಾಖೆಗಳಲ್ಲಿ ಕೆಲ ಮಾರ್ಪಾಡುಗಳಾಗಿವೆ.

ಮಹಾರಾಷ್ಟ್ರ ಸಮಾಜವಾದಿ ಪಕ್ಷದ ಧುರೀಣರಾದ ಎಸ್. ಎಂ. ಜೋಶಿ ಮತ್ತು ಶ್ರೀ ಎಸ್. ಪಿ. ಲಿಮಯೆ ಇವರನ್ನು ಸಾರ್ವಜನಿಕ ಸುರಕ್ಷಿತತೆಯ ಕಾಯದೆಯನ್ವಯ ೬ ನೇ ತಾ. ಸೆರೆಹಿಡಿಯಲಾಯಿತು. ರಾಜಬಹದ್ದೂರ ಮೋತೀಲಾಲ ಗಿರಣಿಯನ್ನು ಮುಚ್ಚಿದ ಬಗ್ಗೆ ಕೂಲಿಕಾರರು ಹೂಡಿದ ಸತ್ಯಾಗ್ರಹ ಕಾಲಕ್ಕೆ ಜೋಶಿಯವರು ಕೂಲಿಕಾರರ ಸಭೆಯಲ್ಲಿ ಭಾಷಣ ಮಾಡಿದ್ದರು.

ಬಡೋದೆಯ ಸ್ವಾಮೀ ನಾರಾಯಣದೇವಾಲಯವನ್ನು ೪ ನೇ ತಾರೀಖಿನ ದಿನ ಹರಿಜನರಿಗೆ ಮುಕ್ತ ಮಾಡಲಾಯಿತು. ಈ ನಗರದಲ್ಲಿ ಹರಿಜನರಿಗೆ ಮುಕ್ತವಾದ ಮೊದಲನೆಯ ದೇವಸ್ಥಾನವು ಇದೆ.

ಪಶ್ಚಿಮ ಭಾರತ ಅಡ್ವೊಕೇಟ ಸಂಘದ ವಾರ್ಷಿಕ ಸಾಮಾನ್ಯ ಸಭೆ ಸೇರಿ ಶ್ರೀ ಎಸ್. ಎಂ. ಹುನಗುಂದ ಇವರು ಗೌರವ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಶ್ರೀ ಜಿ. ಆರ್. ಮುದಭಾವಿ ಮತ್ತು ಕೆ. ಜಿ. ದಾತಾರರು, ಕೌನ್ಸಿಲ್ ಸಭಾಸದರಾದರು.

ಅಹಮದಾಬಾದ ಪುಣೆಗಳಿಗೆ ಮುನಿಸಿಪಲ್ ಕಾರಪೋರೇಶನವನ್ನು ಕೊಡಬೇಕೆಂಬ ಮಸೂದೆ [illegible] ದ್ದಾರೆ. ಈ ಮಸೂದೆ ಕಾಯದೆಯಾದ ಕೂಡಲೆ ಜಾರಿಯಲ್ಲಿ ಬರುವದು.

ಅಹಮ್ಮದಾಬಾದ ನಗರಸಭೆಯ ಹದ್ದಿಯಲ್ಲಿರುವ ಬೈಲು ಜಾಗೆಗಳ ಈಗಿನ ಮಾರಾಟದ [illegible] ಒಪ್ಪಿಂದು [illegible]

ಹೊಸದಿಲ್ಲಿ

[illegible] ಸಲು ೩೦ ಶೇಕಡಾಗಳಿಗಿಂತ ಹೆಚ್ಚಿಂದ [illegible] ೧ ನೇ ವರ್ಗದ ಪ್ರಯಾಣಿಕರಿಗೆ ೮ ಆಣೆ, ೨ ನೇ ವರ್ಗದವರಿಗೆ ೪ ಆಣೆ, ಮತ್ತು ೩ ನೇ ವರ್ಗದವರಿಗೆ ೨ ಆಣೆಯಂತೆ ಕಟ್ಟಿಟ್ಟು ತೆಗೆದುಕೊಳ್ಳಬೇಕೆಂದು ಅವರ ವಿಚಾರ ಇದೆ. ಬಂದಿಗಳಲ್ಲಿ ಟಾಂಗಾಗಳಲ್ಲಿ ಕುಳಿತು ಬರುವವರಿಗೆ ತಲೆಪಟ್ಟಿಯು ಇಲ್ಲವಂತೆ ಈ ಮಸೂದೆಗೆ ಕೇಂದ್ರ ಸರಕಾರದ ಮನ್ನಣೆ ಅವಶ್ಯ.

[illegible] ರಾದ ಸರದಾರ ಜಗಜೀತಸಿಂಗರನ್ನು ಕಪ್ಪು ಮತ್ತು ಉಳ್ಳ ಇವುಗಳ ಪರವಿಟ್ಟುಗಳ ದುರುಪಯೋಗ ಮಾಡಿದ ಬಗ್ಗೆ ಬಂಧಿಸಲಾಗಿದೆ.

ಈ ವರೆಗೆ ಸಾಗುವಳಿಯಾಗದಿದ್ದ ೧೬ ಸಾವಿರ ಎಕರೆ ಭೂಮಿಯನ್ನು ನಿವೃತ್ತ ಸೈನಿಕರು ಈ ಚಳಿಗಾಲದೊಳಗಾಗಿ ಸಾಗುವಳಿಮಾಡಲಿರುವರೆಂದು ತಿಳಿಯುತ್ತದೆ ಸಂರಕ್ಷಣ ಶಾಖೆಯ ಪುನರ್ನಿವೇಶ ವಿಭಾಗದ ಯೋಜನೆಯನ್ವಯ ಈ ಕೆಲಸ ನಡೆಯುವದು.

ಹಿಂದುಸ್ತಾನದ ಚಹಾ ನಿಯಂತ್ರಣ ಕಾಯದೆಯ ಮೇರೆಗೆ ೧೯೪೯-೫೦ ನೇ ವರ್ಷದಲ್ಲಿ ೪೩೫೦ ಲಕ್ಷ ಪೌಂಡು ಚಹ ನಿರ್ಯಾತವಾಗಬೇಕೆಂದು ಹಿಂದುಸ್ತಾನ ಸರಕಾರ ನಿರ್ಧರಿಸಿದೆ. ಚಹಾದ ಪರಮಾವಧಿ ನಿರ್ಯಾತಕ್ಕೆ ಉತ್ತೇಜನವೀಯಬೇಕೆಂದು ಈ ನಿರ್ಧಾರಮಾಡಲಾಗಿದೆ.

ಜುಲೈ ತಿಂಗಳು ೫೧೪ ವಿಶೇಷ ಗಾಡಿಗಳನ್ನು ಧಾನ್ಯ ಮತ್ತು ಇತರ ಪದಾರ್ಥಗಳ ಸಾಗಾಟಕ್ಕಾಗಿ ಬಿಡಲಾಯಿತು. ಮುಂಬಯಿ ಪ್ರದೇಶದಿಂದ ಇತರ ಕಡೆಗಳಿಗೆ ಈ ಅವಧಿಯಲ್ಲಿ ೧೪೯೧೪೬ ಬಟ್ಟೆ ಗಂಟುಗಳು ಸಾಗಿಸಲ್ಪಟ್ಟವು. ಜೂನ ತಿಂಗಳಲ್ಲಿ ೧೬೭೫೬೩ ಗಂಟುಗಳನ್ನು ಸಾಗಿಸಲಾಗಿತ್ತು.

ಸಮಾಜವಾದಿಪಕ್ಷವು ಅಧಿಕಾರಕ್ಕೆ ಬಂದರೆ ವಯಸ್ಕರ ಮತಾಧಿಕಾರ ಪದ್ಧತಿಯ ಮೇಲೆ ಹೊಸ ಘಟನಾ ಸಮಿತಿಯನ್ನು ಕರೆದು ಹೊಸ ರಾಜ್ಯಘಟನೆಯನ್ನು ಸಿದ್ಧಪಡಿಸುವದಾಗಿ ಜಯಪ್ರಕಾಶ ನಾರಾಯಣರು ಮುಂಬಯಿ ಎಲೆಫಿನಸ್ಟನ್ ಕಾಲೇಜಿನಲ್ಲಿ ಭಾಷಣ ಮಾಡುತ್ತ ಹೇಳಿದರು.

ಸೌರಾಷ್ಟ್ರದಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವದಕ್ಕಾಗಿ ೫ ಕೋಟಿ ರೂಪಾಯಿಗಳ ಸಾಲಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಕೇಳಿಕೊಳ್ಳಲಾಗಿದೆ. ಅಲ್ಲಿ ಈಗ ಬೆಳೆಯುತ್ತಿರುವ ಆಹಾರ ೧೦೦ ಕ್ಕೆ ೨೫ ರಷ್ಟು ಕಡಮೆ ಬೀಳುತ್ತದೆ.

ಆಸಾಮ

ಆಸಾಮದ ರಾಜಧಾನಿಯಾದ ಗೌಹತಿಯಲ್ಲಿ ೫ ನೇ ತಾರೀಖು ಮಧ್ಯಾಹ್ನ ಸೌಮ್ಯ ಸ್ವರೂಪದ ಭೂಕಂಪವಾಯಿತು. ಭೂಮಿಯು ಕೆಲ ಸೆಕೆಂದುಗಳ ವರೆಗೆ ನಡುಗಿತು. ಇದರಿಂದ ಹಾನಿಯಾದ ಸುದ್ದಿ ಬಂದಿಲ್ಲ.

ಮಣಿಪುರ ತ್ರಿಪುರಾ ಮತ್ತು ಖಾಸಿ ಸಂಸ್ಥಾನಗಳ ಭವಿತವ್ಯವನ್ನು ಕುರಿತು ಆಸಾಮ ಸರಕಾರ ಮತ್ತು ಹಿಂದೀ ಸಂಸ್ಥಾನ ಶಾಖೆಯವರಲ್ಲಿ ದಿಲ್ಲಿಯಲ್ಲಿ ಮಾತುಕತೆ ಪ್ರಾರಂಭವಾಗಿದೆ. ಮಣಿಪುರ ಮತ್ತು ಖಾಸಿ ಸಂಸ್ಥಾನಗಳು ಆಸಾಮದಲ್ಲಿ ಲೀನವಾಗಿ [illegible] ಬೇಕಾಗಿ ತಿಳಿಯುತ್ತದೆ. ಈ ವಿಚಾರದ [illegible] ಮತ್ತು ಮುಂಬೈಯಲ್ಲಿ [illegible]

[illegible]

ಮದ್ರಾಸ

ಜಮೀನದಾರಿ ನಿರ್ಮೂಲನ ಕಾಯದೆಯನ್ವಯ ಮದರಾಸ ಸರಕಾರವು ಆಂಧ್ರ ಪ್ರಾಂತದಲ್ಲಿಯ ವಿಜಯನಗರ, ಬೊಬ್ಬಿಲಿ [illegible] ಪುರಂ, ವೆಂಕಟಗಿರಿ ಹಾಗು ತಮಿಳನಾಡಿನಲ್ಲಿ ರಾಮನಾಡ ಮತ್ತು ಶಿವಗಂಗಾ ಮೊದಲಾದ [illegible] ದೊಡ್ಡದೊಡ್ಡ ಜಮೀನದಾರಿಗಳ ಭೂಮಿಗಳನ್ನು ವಶಪಡಿಸಿಕೊಂಡಿತು. [illegible] ವರುಷಗಳಲ್ಲಿ ಒಟ್ಟಿಗೆ [illegible] ಜಮೀನದಾರಿಗಳನ್ನು [illegible] ಇನಾಮದಾರಿಗಳನ್ನು ಅಂದರೆ ಒಟ್ಟಿಗೆ ೧೪೦ ಲಕ್ಷ ಎಕರೆ ಭೂಮಿಯನ್ನು ಸರಕಾರವು ವಶಪಡಿಸಿಕೊಳ್ಳಲಿದೆ ಒಟ್ಟಿಗೆ ೧೫ ಕೋಟಿ [illegible] ಲಕ್ಷ ರೂ. ಪರಿಹಾರ ಧನವನ್ನು ಕೊಡಬೇಕಾಗುವದು.

ಮದರಾಸವು ಮೊದಲಿನಿಂದಲೆ ಮಿಕ್ಕವುಗಳ ಆಹಾರ [illegible] ಎಂದು [illegible] ಶ್ರೀ. ಜಿ. ಗೋಪಾಲರೆಡ್ಡಿಯವರು ಹೇಳಿದರು. [illegible]

[illegible]

ಬಿಹಾರ

[illegible]

ಮಧ್ಯಪ್ರಾಂತ

[illegible]

ಕರ್ನಾಟಕವಾರ್ತೆ

ಧಾರವಾಡ

ಲಕ್ಷ್ಮೇಶ್ವರದಲ್ಲಿ ಗಣಪತಿ ಉತ್ಸವದ ಅಂಗವಾಗಿ, ೨ ನೇ ನಂಬರ ಶಾಲೆಯಲ್ಲಿ ಶ್ರೀ [illegible] ಅವರ ಹಿರಿತನದಲ್ಲಿ ಬಾಲಕರ ರಸ ಭರಿತವಾದ ಸಂಭಾಷಣೆ ಕಾವ್ಯಗಾಯನ ವಿವಿಧವಿನೋದಾವಳಿಗಳು ಜರುಗಿದವು. ಪ್ರೊ. ಧಾರವಾಡಕರರು ಬಾಲಕರಿಗೆ ಉಪದೇಶಪರ [illegible]

[illegible] ಹೊಸ ವರ್ಷಕ್ಕೆ ಅಧ್ಯಕ್ಷರಾಗಿ [illegible] ಅಧ್ಯಕ್ಷ ಸ್ಥಾನಕ್ಕೆ [illegible] ಕಳೆದ ೧೮ ವರುಷ ಕಾಂಗ್ರೆಸ್ [illegible] ಭಾಗವಹಿಸಿದ್ದಕ್ಕಾಗಿ [illegible]

[illegible]

[illegible] ಭಾರತದ ಪ್ರತಿನಿಧಿ ಸದಸ್ಯರಾಗಿ ಹೋಗಲಿರುವ ಶ್ರೀ ಡ. ಪ. ಕರಮರಕರರು ೯ ನೇ ತಾರೀಕು ಮೋಟಾರಿನಿಂದ ಮುಂಬಯಿಗೆ ಹೋದರು. ಭಾರತದಿಂದ ಹೊರಡಲಿರುವ ಪ್ರತಿನಿಧಿಗಳ ಸಭೆ ದಿಲ್ಲಿಯಲ್ಲಿ ೧೨ ಕ್ಕೆ ಸೇರಲಿದ್ದು ಅದಕ್ಕೆ ಅವರು ಹಾಜರು ಇದ್ದು ಅಂದೇ ಮುಖ್ಯ ಮಂತ್ರಿಗಳನ್ನು ಕಂಡು ಮುಂಬಯಿ ಮಾರ್ಗವಾಗಿ ಲಂಡನ್ನಿಗೆ ಹೋಗಿ ಮುಂದೆ ನ್ಯೂಯಾರ್ಕಿಗೆ ಹೋಗುವರು.

ಉತ್ತರ ಕನ್ನಡ

ಅಂಕೋಲೆಗೆ ಹೊಸದಾಗಿ ಬಂದ ಅಬಕಾರೀ ಅಸಿಸ್ಟಂಟ ಇನಸ್ಪೆಕ್ಟರ ಶ್ರೀ ಡಿ. ಎಸ್ [illegible] ಇವರು [illegible] ಗ್ರಾಮದಲ್ಲಿ [illegible] ಗ್ಯಾಲನ್ ಮತ್ತು [illegible] ಗೋಣಿ [illegible] [illegible] ಆವರನ್ನು ಬಂಧಿಸಿದರು.

[illegible]

ಬೆಳಗಾವಿ

ಇಟಗಿಯಲ್ಲಿ ಶ್ರೀ ಎಚ್. ಕೆ. ಪೂಜಾರರು ತೆಗೆದ ಪ್ರೌಢಶಿಕ್ಷಣವರ್ಗಕ್ಕೆ ಸ್ಪೇಶಲ್ ಅಫೀಸರ ಟಿ. ಕೆ. ಪಾಟೀಲರು ಭೆಟ್ಟಿಕೊಟ್ಟು ಜನರಿಗೆ ಮನೋರಂಜನವಾಗುವಂತೆ ಭಾಷಣ ಮಾಡಿದರು. ಈ ಶಿಕ್ಷಣದ ಲಾಭ ಪಡೆಯುವದಾಗಿ ನೆರೆದವರು ಆಶ್ವಾಸನವಿತ್ತರು. ಹಿರೇಮನ್ನೋಳಿಯಲ್ಲಿ ತೆಗೆದ ಪ್ರೌಢಶಿಕ್ಷಣ ವರ್ಗವು ಚೆನ್ನಾಗಿ ನಡೆದಿದೆ.

ಕರ್ನಾಟಕ ಪ್ರಾಂತೀಯ ಸಮಾಜ ಶಿಕ್ಷಣ ಪರಿಷತ್ತನ್ನು ಬರುವ ಅಕ್ಟೋಬರದಲ್ಲಿ ಗೋಕಾಕ ತಾಲೂಕಿನ ಮರಡೀಮಠದಲ್ಲಿ ಕರೆಯಬೇಕೆಂದು ನಿಶ್ಚಯಿಸಲಾಗಿದೆ. ಶ್ರೀ ಗುರುಲಿಂಗಪ್ಪ ಕೌತನಾಳಿ ಇವರ ಅಧ್ಯಕ್ಷತೆಯಲ್ಲಿ ತಾತ್ಪೂರ್ತಿಕ ಸ್ವಾಗತ ಸಮಿತಿಯು ರಚಿತವಾಗಿದೆ. ಮುಖ್ಯಮಂತ್ರಿ ಶ್ರೀ ಖೇರ ಮೊದಲಾದವರನ್ನು ಪರಿಷತ್ತಿಗೆ ಆಮಂತ್ರಿಸಲಾಗುವದು.

ಬೈಲಹೊಂಗಲದಲ್ಲಿ ಮಹಾತ್ಮಾಗಾಂಧಿಯವರ ಪುತ್ಥಳಿಯನ್ನು ಪ್ರತಿಷ್ಠಾಪಿಸುವದಕ್ಕಾಗಿ ನಿಧಿಯನ್ನು ಕೂಡಿಸಲಾಗಿದ್ದಿತಷ್ಟೇ [illegible] ಪುತ್ಥಳಿಯೂ ಸಂಗಮರವರೀ ಅಸ್ತಿಭಾರವೂ ಸಿದ್ಧವಾಗಿದ್ದು ೭-೮ ದಿನಗಳಲ್ಲಿ ಮುಂಬಯಿಯಿಂದ ಬರಲಿದೆಯೆಂದು ತಿಳಿಯುತ್ತದೆ. ಗಾಂಧೀ ಜಯಂತಿಯ ಕಾಲಕ್ಕೇ ಇದರ ಪ್ರತಿಷ್ಠಾಪನೆಯಾಗುವದೋ ಏನೋ ಎಂದು ಜನರ ಅಭಿಪ್ರಾಯ.

ಬೆಳವಡಿಯಲ್ಲಿಯ ೧೮ ಜನರನ್ನು ಸರಕಾರದವರು ಗುಂಡಾ ಕಾಯದೆಯನ್ವಯ ಜಿಲ್ಲೆಯಿಂದ ಹೊರಗೆ ಕಳಿಸಿದ್ದು ಅನ್ಯಾಯದ್ದಾಗಿದೆಯೆಂದು ಶಿವಪ್ರಪ್ಪಾ ಹರಕುಣಿಯವರು ಸರಕಾರಕ್ಕೆ ತಿಳಿಸಿ ಅದರ ವಿಚಾರವಾಗಬೇಕೆಂದು ಕೇಳಿಕೊಂಡಿದ್ದರು. ಅದಕ್ಕೆ ಉತ್ತರ ಬಾರದ್ದರಿಂದ [illegible] ನೇ ತಾರೀಕಿನಿಂದ ಅವರು ವೀರಭದ್ರದೇವರ [illegible] ಮುಂದೆ ಉಪವಾಸ ಕೈಕೊಂಡಿರುವರೆಂದು ತಿಳಿಯುತ್ತದೆ.

[illegible] ಸಾಲ್ಯ ಉದ್ಗ್ರಂಥಗಳನ್ನು ಕೊಡಮಾಡಿದ್ದು ಚಂದಾಹಣ ಕೇವಲ ೬ ರೂ. ಇದೆ ಎಂದು ಮಂಡಳದವರು ತಿಳಿಸುತ್ತಾರೆ.

ಇದೇ ತಿಂಗಳ ಅಮೇರಿಕೆಯಿಂದ ಮರಳಿದ ಶ್ರೀ ಬಿ. ಕೆ. ಜವಳಿಯವರು ಬೆಳಗಾವಿಯ ಜಿ.ಎ. ಕಾಲೇಜಿನ ವೈಸ ಪ್ರಿನ್ಸಿಪಾಲರಾಗಿ ನೇಮಕ ಹೊಂದಿದ್ದು ಅವರು ತಮ್ಮ ಅಧಿಕಾರವನ್ನು ವಹಿಸಿಕೊಂಡಿರುವರೆಂದು ತಿಳಿಯುತ್ತದೆ. ಇವರನ್ನು ಅಸಿಸ್ಟಂಟ ಇನಸ್ಪೆಕ್ಟರರನ್ನಾಗಿ ನೇಮಿಸಿದೆಯೆಂದು ಮೊದಲು ಸುದ್ದಿ ಬಂದಿತ್ತು.

ವಿಜಾಪುರ

ಮುರನಾಳದಲ್ಲಿ ಹೊಸದಾಗಿ ಸ್ಥಾಪಿತವಾದ ಮಿಡ್ಲಸ್ಕೂಲ ಶಾಲೆಯ ಪ್ರಾರಂಭ ಮಹೋತ್ಸವ [illegible] ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಹೆಡ್ ಮಾಸ್ತರ ಶ್ರೀ [illegible] ಸ್ಕೂಲ ಕಮಿಟಿ ಚೇರಮನ್ ಶ್ರೀ ಹತ್ತಿ [illegible]

[illegible]

ದಕ್ಷಿಣ ಕನ್ನಡ

ಮಂಗಳೂರು ಪೌರ ಸಭೆಯವರು ಪಾಕಿಸ್ತಾನದಿಂದ ಮಂಗಳೂರಿಗೆ ಬಂದ ೧೨ ನಿರಾಶ್ರಿತ ಕುಟುಂಬಗಳಿಗೆ ಸಹಾಯ ನೀಡುವಲ್ಲಿ ತಮ್ಮ ಸಂಪೂರ್ಣ ಸಹಕಾರ ನೀಡಲು ಸಿದ್ಧರಿದ್ದೇವೆಂದು ಜಿಲ್ಲಾ ಕಲೆಕ್ಟರಿಗೆ ಭರವಸೆ ಕೊಡುವ ನಿರ್ಧಾರ ಮಾಡಿರುತ್ತಾರೆ.

ಮಂಗಳೂರಿನ ಸೈಂಟ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ರಾವ್ ಬಹಾದೂರ್ ಎಂ. ವೈದ್ಯನಾಥನ್ ರವರು ಅಮೇರಿಕ ಮತ್ತು ಯುರೋಪುಗಳ ವಿಶ್ವವಿದ್ಯಾನಿಲಯಗಳ ಶಿಕ್ಷಣ ಪ್ರಚಾರವೆಂಬ ವಿಚಾರವಾಗಿ ದಿನಾಂಕ ೩೦ ರಂದು ಭಾಷಣವಿತ್ತರು. ಅಂದಿನ ಸಭೆಗೆ ಸಂಘದ ಅಧ್ಯಕ್ಷ ಶ್ರೀ ವಿ. ಸಿ. ವಿಶ್ವನಾಥನ್ ಅಧ್ಯಕ್ಷರಾಗಿದ್ದರು. ಕಾರ್ಯದರ್ಶಿ ಶ್ರೀ ಬದ್ರಿರಾಂ ಡಿ. ಸಿಲ್ವರು ಅಭಿನಂದಿಸಿದರು.

ಮಂಗಳೂರಿನ ಭಗಿನೀ ಸಮಾಜದ ಆಶ್ರಯದಲ್ಲಿ ೩ ರಿಂದ ೫ ವರ್ಷದೊಳಗಿನ ಮಕ್ಕಳಿಗೊಂದು "ನರ್ಸರಿ" ತರಗತಿಯನ್ನು ದಿನಾಂಕ ೧ ರಿಂದ ಮಂಗಳೂರಿನ ಗಾಂಧೀ ರಸ್ತೆಯಲ್ಲಿರುವ ಬೆಸೆಂಟ್ ಮಂದಿರದಲ್ಲಿ ತೆರೆದಿರುತ್ತಾರೆ.

ಉಡುಪಿ ಕರ್ನಾಟಕ ಸಂಘದ ೫ ನೇ ವರ್ಷ ವರ್ಧಂತಿಯು ಸಪ್ಟಂಬರ ೨೮ ರಂದು ಜರಗುವುದು. ಮರುದಿನದಿಂದ ೩ ದಿನಗಳ ವರೆಗೆ ಸಾಹಿತ್ಯೋತ್ಸವವೂ ಜರಗುವುದು. ಈ ಸಂದರ್ಭದಲ್ಲಿ ದಿನಾಂಕ ೨೮ ರಂದು ಮದ್ರಾಸ್ ಸರಕಾರದ ಕನ್ನಡ ಆಸ್ಥಾನ ಕವಿ ಶ್ರೀ ಮಂಜೇಶ್ವರ ಗೋವಿಂದ ಪೈಗಳಿಗೆ ಮಾನಪತ್ರವೊಂದನ್ನು ಸಮರ್ಪಿಸುವ ನಿರ್ಧಾರವೂ ಆಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ೪೪ ಸೀಟುಗಳಲ್ಲಿ ೨೨ ಸೀಟುಗಳು ಚುನಾವಣೆ ಇಲ್ಲದೇ ತುಂಬಲ್ಪಟ್ಟವೆ. ಈ ಪೈಕಿ ೨೦ ಸ್ಥಾನಗಳು ಕಾಂಗ್ರೆಸ್ಸಿಗೂ ೧ ಸ್ಥಾನ ಸ್ವತಂತ್ರರಿಗೂ ೧ ಸ್ಥಾನವು ಐರೋಪಿಯನರಿಗೂ ಸಿಕ್ಕಿದೆ. ಉಳಿದ ೨೨ ಸ್ಥಾನಗಳಿಗೆ ಚುನಾವಣೆಯು ನಡೆಯುವುದು.

ಕಳೆದ ೧೯ ವರುಷ ಉಡುಪಿಯ ಶ್ರೀ ಪೂರ್ಣಪ್ರಜ್ಞ ಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಮಹಾಪಾಠಶಾಲೆಯ ಪ್ರಿನ್ಸಿಪಾಲರಾಗಿದ್ದ ಶ್ರೀ ಎಂ. ರಾಮಚಂದ್ರರಾವ ಇವರಿಗೆ ವ.ಮ [illegible] ಕಾಲೇಜಿನ ಲೆಕ್ಚರರಾಗಿ [illegible] ವರ್ಗವಾಗಿದೆ. ಅಧ್ಯಾಪಕರೂ ವಿದ್ಯಾರ್ಥಿಗಳೂ ಉಡುಪಿ ಸ್ವಾಮಿಗಳೂ ಅವರನ್ನು ಆದರದಿಂದ ಗೌರವಿಸಿ ಬೀಳ್ಕೊಟ್ಟದ್ದಲ್ಲದೆ ಶ್ರೀಗಳು ಶ್ರೇಯಸ್ಸನ್ನು ಕೋರಿದರು.

ಹೈದರಾಬಾದ

ನಿಜಾಮ ರೇಲ್ವೆಯಲ್ಲಿಯ ನಿಲ್ದಾಣಗಳಲ್ಲಿ ರಾತ್ರಿ ೧೧ ರಿಂದ ಬೆಳಗಿನ ೪ ಗಂಟೆಯ ವರೆಗೆ ತಂಪು ಮತ್ತು ಉಷ್ಣಪೇಯಗಳನ್ನು ಸಿಗರೇಟು ಮತ್ತು ಇನ್ನಿತರ ಅಲ್ಪೋಪಹಾರಗಳನ್ನು ಮಾರಬಾರದೆಂದು ವಿಧಿಸಲಾಗಿದೆ. ನಿದ್ರೆ ಮಾಡುವ ಪ್ರವಾಸಿಕರಿಗೆ ತೊಂದರೆಯಾಗಬಾರದೆಂದು ಹೀಗೆ ಮಾಡಲಾಗಿದೆಯಂತೆ. ಆದರೆ ಜಂಕ್ಶನ್ ಮೊದಲಾದವುಗಳಲ್ಲಿ ಈ ನಿರ್ಬಂಧವಿಲ್ಲ.

ಕನ್ನಡ ಸಂಸ್ಥಾನ

ಬೆಂಗಳೂರಿನ ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕ ಶ್ರೀ ಟಿ. ವೆಂಕೋಬರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದ ಮೈಸೂರ ಪತ್ರಿಕಾ ಕರ್ತರ ಸಮ್ಮೇಲನದಲ್ಲಿ ಮೈಸೂರು ವೃತ್ತಪತ್ರ ಕಾಯದೆ (೧೯೪೦) ಮೊದಲ್ಗೊಂಡ ಪತ್ರಿಕಾ ಸ್ವಾತಂತ್ರ್ಯದ ಮೇಲಿರುವ ಎಲ್ಲ ನಿರ್ಬಂಧಕ ಕಾಯದೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಬಿನ್ನವಿಸುವ ಗೊತ್ತುವಳಿ ಸ್ವೀಕೃತವಾಯಿತು. ಪತ್ರಿಕಾ ಸಲಹೆ ಸಮಿತಿಯ ನಿರ್ಮಾಣ ಕಾರ್ಯಕ್ಕೆ ಬೆಂಬಲ ಕೊಡಲಾಯಿತು.

ಮೈಸೂರು ಪತ್ರಿಕೋದ್ಯೋಗಿಗಳು ಅನುಸರಿಸಬೇಕಾದ ವರ್ತನೆಯ ನಿಯಮಗಳನ್ನು ಸಿದ್ಧಪಡಿಸುವದಕ್ಕಾಗಿ ಮೈಸೂರು ಪತ್ರಿಕಾಕರ್ತರ ಸಮ್ಮೇಲನದಲ್ಲಿ ಸಮಿತಿಯೊಂದು ನೇಮಕವಾಯಿತು. ಮೈಸೂರು ಸರಕಾರವು ಕನ್ನಡ ಟಾಯಿಪರಾಯಿಟರ ಸಿದ್ಧಪಡಿಸುವದಕ್ಕಾಗಿ ಸಮಿತಿಯನ್ನು ನೇಮಿಸಬೇಕು, ಮೈಸೂರಲ್ಲಿ ಸುದ್ದಿಯ ಶಾಖಾಕಚೇರಿಯನ್ನು ತೆರೆಯಬೇಕೆಂದು ಬಿನ್ನವಿಸುವ ಗೊತ್ತುವಳಿಯೂ ಸ್ವೀಕೃತವಾಯಿತು.

ಮೈಸೂರಿನ ಪ್ರಜೆಗಳ ರಾಜಕೀಯ ಸಾಮಾಜಿಕ ಆರ್ಥಿಕ ಮೊದಲಾದ ಹಕ್ಕುಗಳ ಹಿತರಕ್ಷಣೆಗಾಗಿ ಸ್ಥಾಪಿತವಾಗಿರುವ ಮೈಸೂರು ಪ್ರಜಾಸಂಘದ ಎರಡನೇ ಸಭೆ ೩೧ ಕ್ಕೆ ಸೇರಿ ತಾತ್ಪೂರ್ತಿಕ ಕಾರ್ಯ ಸಮಿತಿಯ ಆಯ್ಕೆಯಾಯಿತು. ಸಂಘಕ್ಕೆ ಹೆಚ್ಚಿನ ಸದಸ್ಯರನ್ನು ಕಲೆಹಾಕಬೇಕೆಂದು ಮುಂದಿನ ಮುನ್ಸಿಪಲ್ ಚುನಾವಣೆಗಳ ಮತದಾನ ತಿದ್ದುಪಡಿಯತ್ತ ಗಮನಿಸಬೇಕೆಂದು ನಿರ್ಣಯಿಸಲಾಯಿತು.

ಪೂರ್ವ ಆಫ್ರಿಕೆಯ ಧುರೀಣರಾದ ಪೀಟರ ಕೋಯಿನಾಂಗರವರು ೨ ನೇ ತಾರೀಕಗೆ ಮಾಲೆಕಲ್ಲು ತಿರುಪತಿಯಲ್ಲಿ ಇರುವ ಕಸ್ತೂರಬಾ ಗ್ರಾಮ ಸೇವಿಕಾ ವಿದ್ಯಾಲಯಕ್ಕೆ ಭೆಟ್ಟಿ ಕೊಟ್ಟು ರಚನಾತ್ಮಕ ಕಾರ್ಯಗಳನ್ನು ಪರಿಶೀಲಿಸಿ ಗ್ರಾಮಸೇವಿಕೆಯರ ನಾಲ್ಕನೇ ತಂಡದ ಶಿಕ್ಷಣದ ಪ್ರಾರಂಭೋತ್ಸವವನ್ನು ಜರುಗಿಸಿದರು. ಶ್ರೀಮತಿ ಯಶೋಧರಾ ದಾಸಪ್ಪನವರು ಅತಿಥಿಗಳನ್ನು ಸ್ವಾಗತಿಸಿದರು.

ಎಲಿಂದಾ ತಾಲೂಕಿನಲ್ಲಿ ಸಪ್ಟಂಬರ ೧ ನೇ ತಾರೀಕು ಕಮ್ಯುನಿಸ್ಟರು ಹಾಗು ಅಲ್ಲಿ ತಳವೂರಿದ ಗೂರ್ಖಾ ಸೈನಿಕರಲ್ಲಿ ಘರ್ಷಣೆ ಸಂಭವಿಸಿತೆಂದೂ ಇಬ್ಬರು ಸಶಸ್ತ್ರ ಕಮ್ಯುನಿಸ್ಟ ಘರ್ಷಣೆಯಲ್ಲಿ ಗುಂಡಿಗೆ ಆಹುತಿಯಾದರೆಂದೂ ತಿಳಿಯುತ್ತದೆ.

ಹೈದರಾಬಾದ ಕಾಂಗ್ರೆಸ್ಸಿನ ವಾರ್ಷಿಕಾಧಿವೇಶನಕ್ಕಾಗಿ ೧೬೩೪ ಪ್ರತಿನಿಧಿಗಳನ್ನಾರಿಸಲು ಕಾಂಗ್ರೆಸ್ಸಿನ ಸುಮಾರು ೧೨ ಲಕ್ಷ ಪ್ರಾಥಮಿಕ ಸದಸ್ಯರು ಇದೇ ೨೨ ರಿಂದ ಒಂದು ವಾರ ನಡೆವ ಚುನಾವಣೆಯಲ್ಲಿ ಭಾಗವಹಿಸಲಿದ್ದಾರೆ. ಈ ರೀತಿ ಕಾಂಗ್ರೆಸ್ಸಿನಲ್ಲಿ ಆಮೂಲಾಗ್ರ ಚುನಾವಣೆ ಹೈದರಾಬಾದದಲ್ಲಿ ನಡೆಯುತಿರುವದು ಇದೇ ಮೊದಲ ಸಲ. ಈ ಪ್ರತಿನಿಧಿಗಳು ಅನಂತರ ಹೈದರಾಬಾದ ಸಂಸ್ಥಾನ ಕಾಂಗ್ರೆಸ ಸಮಿತಿಯನ್ನು ಆರಿಸುವರು ಕಾಂಗ್ರೆಸ ಮುಖಂಡತ್ವದಲ್ಲಿ ಬದಲಾವಣೆಯಾಗಬೇಕೆನ್ನುವವರಿಗೆ ಇದೊಳ್ಳೆ ಸಂಧಿ.

ಸಂತತಿಸಂಯಮ

ಭಾರತದ ಜನಸಂಖ್ಯೆ ಪ್ರತಿವರ್ಷ ೫೦ ಲಕ್ಷದಷ್ಟು ಹೆಚ್ಚುತ್ತಿದೆ. ಇದು ಹೀಗೇ ಹೆಚ್ಚುತ್ತ ಹೋದರೆ ದೇಶದಲ್ಲಿ ದಾರಿದ್ರ್ಯ ಬೆಳೆದೀತೆಂದು ಜನರಿಗೆ ಸದ್ಬೋಧ ಮಾಡುವ ಉದ್ದೇಶದಿಂದ ಭಾರತ ಸರಕಾರದ ಚಿತ್ರಶಾಖೆ "ಯೋಜನಾಬದ್ಧ ಮಾತಾಪಿತೃತ್ವ" ಎಂಬ ಹೆಸರಿನ ಪ್ರಮಾಣ ಚಿತ್ರವೊಂದನ್ನು ತಯಾರಿಸಿದೆಯೆಂದು ತಿಳಿದು ಬಂದಿದೆ.

ಸಂತತಿಸಂಯಮವು ಕೇವಲ ಮಕ್ಕಳ ಹಿತ ದೃಷ್ಟಿಯಿಂದಲ್ಲದೆ ಮಾತಾಪಿತೃಗಳ ಆರೋಗ್ಯ ಸುಖಶಾಂತಿಗಳ ದೃಷ್ಟಿಯಿಂದಲೂ ಅವಶ್ಯವೆಂಬುದನ್ನು ಯಾರೂ ಅಲ್ಲಗಳೆಯರು. ಮೇಲೆ ಹೇಳಿದ ಚಿತ್ರದಲ್ಲಿ ದೇಶದ ಆರ್ಥಿಕ ದುರವಸ್ಥೆಯನ್ನು ಧೈರ್ಯದಿಂದ ಇದಿರಿಸುವ ಅಂಶ ಪ್ರತಿಪಾದಿತವಾಗಿದೆಯೆಂದು ತಿಳಿಯುತ್ತದೆ.

ಸರಕಾರದ ಶಿಕ್ಷಣ ಮತ್ತು ಆರೋಗ್ಯ ಶಾಖೆಗಳು ವಯಸ್ಕ ಸ್ತ್ರೀಪುರುಷರಲ್ಲಿ ಸಂತತಿ ಸಂಯಮವನ್ನು ಸಾಧಿಸಲು ಸಹಕಾರಿಯಾದ ನೀತಿ ಮತ್ತೆ, ಹೊಣೆಯ ಅರಿವು, ಲಾಭಾಲಾಭ ವಿವೇಕ ಮುಂತಾದವನ್ನು ದಿಲ್ಲಿಯಿಂದ ಹಳ್ಳಿಯವರೆಗೂ ಮುಟ್ಟುವಂತೆ ಪ್ರಚಾರ ಮಾಡುವದು ಆವಶ್ಯಕ. ಇದಕ್ಕೆ ರೂಪರಂಗವೊಂದಲ್ಲದೆ, ಇತರ ಶೈಕ್ಷಣಿಕ ಸಾಧನಗಳನ್ನೂ ಬಳಸಬೇಕು. ಸಂತತಿ ನಿರೋಧದ ಸತ್ಕ್ರಮ ದುಷ್ಕ್ರಮಗಳ ಬಗ್ಗೆ ಸಂಪೂರ್ಣ ವಿವರಗಳನ್ನು ತಜ್ಞರ ಮೂಲಕ ಬರೆಸಿ ಪ್ರಕಟನೆ ಪಡಿಸಿ ಬೋಧಿಸುವ ವ್ಯವಸ್ಥೆಯಾಗಬೇಕು.

ಬಡವರಿಗೆ ಮಕ್ಕಳು ಹೆಚ್ಚು ಎಂಬುದು ಹಳವಾತು. ಶ್ರೀಮಂತರಿಗೆ ಸುಖವಿಲಾಸಗಳ ವೈವಿಧ್ಯ ಬೇಕಾದಷ್ಟಿರುವುದರಿಂದ ಪಂಚೇಂದ್ರಿಯಾವಲಂಬನ ಬಹಳ ಕಡಿಮೆ; ಬೇಕೆಂದರೂ ಕೆಲವೊಮ್ಮೆ ಅವರ ಆಚಾರ ವಿಚಾರಗಳ ಪರಿಣಾಮವಾಗಿ ಉಂಟಾದ ದೇಹಸ್ಥಿತಿ ಮನಃಸ್ಥಿತಿಗಳ ದೆಸೆಯಿಂದ ಮಕ್ಕಳಾಗದ್ದಕ್ಕೆ ಹಲವು ನಿದರ್ಶನಗಳಿವೆ. ದರಿದ್ರರಿಗೆ ಸುಖವೈವಿಧ್ಯವಿಲ್ಲ; ತೃಪ್ತಿಯ ಸಾಧನಗಳ ಸಂಖ್ಯೆ ಅತಿಶಯವಾಗಿ ಮಿತವಿರುತ್ತವೆ; ಆದುದರಿಂದ ಅಂಥ ದಂಪತಿಗಳ ಆಚಾರ ವಿಚಾರಗಳ ತೃಪ್ತಿಗೆ, ಪೋಷಣೆಗೆ ಪಂಚೇಂದ್ರಿಯಾವಲಂಬನ ಮುಖ್ಯವೆನಿಸುವುದೇ ಅವರಿಗೆ ಹೆಚ್ಚು ಮಕ್ಕಳಾಗಲು ಕಾರಣ. ಆದುದರಿಂದ ಕೇವಲ ಕೃತಕ ಸಾಧನಗಳನ್ನು ಹಂಚುವಿಕೆ, ನೀತಿಬೋಧ ಇವುಗಳಲ್ಲದೆ ಬಹು ಸಂಖ್ಯ ಬಡವರ ಆರ್ಥಿಕ ಮತ್ತು ಔದ್ಯೋಗಿಕ ಸ್ಥಿತಿಯನ್ನು ಮೇಲಕ್ಕೇರಿಸುವುದೂ ಸಂತತಿ ಸಂಯಮನದ ಒಂದು ಅಂಗವೆನ್ನಬೇಕಾಗುತ್ತದೆ.

ಸರ್ವಶಿಕ್ಷಣ ಏಕಾಏಕಿ ಸಾಧ್ಯವಿಲ್ಲದ ಈ ಕಾಲದಲ್ಲಿ ಶಾಸನಾದಿಗಳಿಂದ ಜನರ ಮನಃಪ್ರವೃತ್ತಿಯನ್ನು ನಿರೋಧಿಸುವುದು ದುಷ್ಕರ. ನೀತಿಯನ್ನು ದೇವಧರ್ಮಾದಿಗಳ ಮೂಲಕ ಪ್ರಚುರಪಡಿಸುವ ಪದ್ಧತಿಯಿಂದ (ಪಾಶ್ಚಾತ್ಯರ ಕೃತಕ ಸಾಧನ ಪ್ರಯೋಗದಿಂದಾಗುವ ಹಾನಿ ಬೆರೆದ ಲಾಭವಾಗುವುದು ತಪ್ಪಿ) ಗಾಂಧಿಯವರ ಬ್ರಹ್ಮಚರ್ಯ ಮಾರ್ಗವು ಪುರಸ್ಕೃತವಾಗಿ ಏನೂ ಹಾನಿಯಿಲ್ಲದ ಪರಿಶುದ್ಧವೂ ಪೂರ್ಣ ಲಾಭಕರವೂ ಆದ ಪರಿಣಾಮ ಜೀವನದಲ್ಲಿ ಉಂಟಾಗಬಹುದು. ಈ ಅಂಶವನ್ನು ಸಂತತಿ ನಿರೋಧಕ ಪ್ರಚಾರಕರು ಗಮನಕ್ಕೆ ತಂದುಕೊಳ್ಳುವುದು ಅತ್ಯವಶ್ಯಕ. ಜನರ ಒಂದೊಂದೇ ಆಚಾರ ಅಥವಾ ವಿಚಾರವನ್ನು ತಿದ್ದಲು ಪ್ರಯತ್ನಿಸುವದಕ್ಕಿಂತ ಎಲ್ಲಕ್ಕೂ ಮೂಲಾಧಾರವಾದ ನೀತಿಧರ್ಮವನ್ನು ದೇವರ ಹೆಸರಿನಲ್ಲಿ ಪ್ರಚುರಪಡಿಸುವ ಪ್ರಯತ್ನ ಎಲ್ಲ ಕ್ಷೇತ್ರದಲ್ಲೂ ಹೆಚ್ಚು ಫಲಕಾರಿಯಾಗದಿರದು.

ಗೋಪೀನಾಥ

'ಗೋಪೀನಾಥ' ಚಿತ್ರವೀಗ ಮುಂಬಯಿಯ ೬ ಪ್ರಸಿದ್ಧ ರೂಪರಂಗಗಳಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಮಹೇಶ ಕೌಲರು ಅದರ ನಿರ್ಮಾಪಕರು ಮತ್ತು ದಿಗ್ದರ್ಶಕರು. ನಿನು ಮಜುಮದಾರರು ಸಂಗೀತಗಾರರು. ಅದು ಶಾಂತಿಲೋಕ ಚಿತ್ರದ ತಯಾರಿಕೆ; ಹೊರಪಟ್ಟಿದ್ದು ಪರ್ಲ್ ಪಿಕ್ಚರ್ಸಿನ ಮೂಲಕ. ರಾಜಕಪೂರ, ತೃಪ್ತಿ ಮಿತ್ರ, ಲತಿಕಾ, ಅನ್ವರ್, ಬಾಯಿ ಮತ್ತು ಬೇಬಿ ಜುಬೇದಾ ಮುಖ್ಯ ಪಾತ್ರಿಯರು. ಪತಿಭಕ್ತಿ ಇದರ ಕಥಾವಸ್ತು. ಈಗಿನ ಪರಿಸ್ಥಿತಿ ನೋಡಿದರೆ ಇದರ ಪ್ರದರ್ಶನ ಯಶಸ್ವಿಯಾಗುವ ಲಕ್ಷಣವಿದೆಯೆನ್ನಲಾಗುತ್ತದೆ.

× × ×

ಅಂದಾಜ್

ಮೆಹಬೂಬರ ಚಿತ್ರವಾದ 'ಅಂದಾಜ್' ಈಗ ಮುಂಬಯಿಯ 'ಲಿಬರ್ಟಿ' ರಂಗದಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಇದೀಗ ಪ್ರದರ್ಶನದ ೨೬ ನೆಯ ವಾರ. ೨೫ ವಾರಗಳು [illegible] ರೂಪಾಯಿಗಳು. ಇಷ್ಟು ಸಂಪಾದನೆ ಮಾಡಿಕೊಟ್ಟ ಚಿತ್ರ ಇಲ್ಲಿಯ ವರೆಗೆ ಇನ್ನೊಂದಿಲ್ಲ. ಇನ್ನೂ ಜನ ನುಗ್ಗುತ್ತಲೇ ಇದೆ ನೋಡಲು.

× × ×

ಚಿತ್ರ ಭವಿಷ್ಯ

ಅಮೇರಿಕವೊಂದನ್ನು ಬಿಟ್ಟರೆ ಭಾರತದಷ್ಟು ಇನ್ನಾವ ದೇಶವೂ ಚಲಚ್ಚಿತ್ರಗಳನ್ನು ತಯಾರಿಸುತ್ತಿಲ್ಲ. ಸುಮಾರು ೧೦ ಕೋಟಿ ರೂಪಾಯಿಗಳು ಅದರ ಬಂಡವಳ; ೨೫೦ ನಿರ್ಮಾಣ ಮಂದಿರಗಳು; ೧೮೦೦೦ ಕೆಲಸಗಾರರು ಮತ್ತು ವರ್ಷಕ್ಕೆ ೨೦೦ ಕಥಾನಕ ಚಿತ್ರಗಳು ಸಿದ್ಧವಾಗುತ್ತವೆ.

ಈಗ ೨೧ ವರ್ಷಗಳ ಹಿಂದೆ ರಂಗಾಚಾರಿ ಸಮಿತಿ ಚಿತ್ರಗಳ ಬಗ್ಗೆ ಒಂದು ಸಲ ವಿಚಾರಣೆ ನಡೆಸಿತ್ತು. ಅನಂತರ ಈಗ ಭಾರತ ಸರಕಾರವು ೬ ಜನರ ಒಂದು ವಿಚಾರಣಾಸಮಿತಿಯನ್ನು ಸಿನೆಮಗಳ ಭವಿಷ್ಯವನ್ನು ರೂಪಿಸಲು ನಿಯಮಿಸಿದೆ.

ಶ್ರೀ ಎಸ್. ಕೆ. ಪಾಟೀಲರು ಸಮಿತಿಯ ಅಧ್ಯಕ್ಷರು; ಶ್ರೀಗಳಾದ ಎಸ್. ಸತ್ಯನಾರಾಯಣ, ವಿ. ಶಂಕರ್, ವಿ. ಶಾಂತಾರಾಮ, ಬಿ. ಎನ್. ಸರಕಾರ ಮತ್ತು ಡಾ. ಆರ್ ತ್ರಿಪಾಠಿ ಇವರು ಸದಸ್ಯರು. ಇನ್ನು ಮುಂದೆ ಭಾರತೀಯ ಚಿತ್ರಗಳು ಯಾವ ಮಾರ್ಗವನ್ನು ಹಿಡಿದರೆ ರಾಷ್ಟ್ರೀಯ ಸಂಸ್ಕೃತಿ, ವಿದ್ಯಾಭ್ಯಾಸ ಮತ್ತು ಹಿತಕರವಾದ ವಿನೋದ ಇವುಗಳನ್ನು ಸಾಧಿಸಲು ಶಕ್ತವಾದಾವು ಎಂಬ ಅಂಶವನ್ನು ಇವರು ಪರಿಶೀಲಿಸಿ ನಿರ್ಣಯಿಸಲಿದ್ದಾರೆ.

ತಾಂತ್ರಿಕ ಸಾಧನ ಸಲಕರಣೆಯಲ್ಲಷ್ಟೇ ಅಲ್ಲದೆ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ರೂಪರೇಖೆಗಳ ಜ್ಞಾನದಲ್ಲೂ ಬಹಳ ಹಿಂದಿರುವ ಚಿತ್ರ ನಿರ್ಮಾಪಕರನ್ನು ಸಮಿತಿ ಯೋಗ್ಯ ಮಾರ್ಗದಲ್ಲಿ ಒಯ್ಯಲು ಪ್ರಯತ್ನಿಸುವುದು ಸ್ತುತ್ಯವಾಗಿದೆ.

ಹೇಗಿನ ದುಂಡು ಮೇಜಿನ ಪರಿಷತ್ತಿಗೆ ಹೋಗಿರುವ ಇಂಡೊನೇಶಿಯದ ಪ್ರಜಾರಾಜ್ಯದ ಮತ್ತು ಮಹಾಮಂಡಲಿಯ ಪ್ರತಿನಿಧಿಗಳಲ್ಲಿ ಡಚ್ ಸೈನ್ಯದ ನಿವರ್ತನದ ಕಾಲಾವಧಿಯ ಬಗ್ಗೆ ಏಕಮತ್ಯವುಂಟಾಗಿಲ್ಲವೆಂದು ತಿಳಿಯುತ್ತದೆ. ಅಲ್ಲಿಯ ಅಲ್ಪಸಂಖ್ಯರ ಮತ್ತು ಮುಖ್ಯ ಹಿತ ಸಂಬಂಧವುಳ್ಳವರ ಅಭಿಪ್ರಾಯಕ್ಕೆ ಕೊಡತಕ್ಕ ಪುರಸ್ಕಾರದ ಬಗ್ಗೆ ಮೇಲಿನ ಎರಡು ಪಕ್ಷಗಳಿಗೂ ಡಚ್ ಸರಕಾರೀ ಪ್ರತಿನಿಧಿಗಳಿಗೂ ಭಿನ್ನಾಭಿಪ್ರಾಯವುಂಟಾಗಿದೆ.

ಮೂಲೆ ಮೂಲೆಗಳಿಂದ

ಚೀನೀ ರಾಷ್ಟ್ರೀಯ ಸರಕಾರದವರು [illegible]

[illegible]

ಉತ್ತರ ಬ್ರಹ್ಮದ [illegible] ಜೆನ್ನಾಗಿ [illegible] ಸುದ್ದಿ ಬಂದಿದೆ.

ಅಮೇರಿಕವು ಬ್ರಿಟನ್ ಅಥವಾ ಇತರ ಯಾವುದಾದರೂ ದೇಶಕ್ಕೆ ಕಳಿಸಲಾರದೆ ತನ್ನಲ್ಲಿರುವ ೮ ಕೋಟಿ ಪೌಂಡುಗಳಷ್ಟಾಗುವ ಒಣಗಿಸಿದ ಕೋಳಿಯ ಮೊಟ್ಟೆಗಳನ್ನು ಗೊಬ್ಬರಕ್ಕಾಗಿ ಬಳಸಲು ಆಲೋಚಿಸುತ್ತಿರುವದಾಗಿ ತಿಳಿದು ಬಂದಿದೆ.

ಮೇ ೯ರಲ್ಲಿ ದಿಲ್ಲಿಯಲ್ಲಿ ಸಹಿಮಾಡಿದ ವ್ಯಾಪಾರಸಂಧಿಗೆ ಯುರೋಪಿನಲ್ಲಿ ಭಾರತದ ಮುಖ್ಯ ವ್ಯಾಪಾರಾಧಿಕಾರಿಯಾಗಿರುವ ಸರ್ **ರಾಘವನ್ ಪಿಳ್ಳೆಯವರೂ** ಫ್ರಾನ್ಸಿನಲ್ಲಿರುವ ಫಿನ್ನಿಶ್ ಮಂತ್ರಿಯೂ ಮನಃಸಮ್ಮತಿಯನ್ನು ವಿನಿಮಯ ಮಾಡಿಕೊಂಡರು.

ಮನಿಲಾದಿಂದ ನ್ಯೂಯಾರ್ಕಿಗೆ ಮರಳಿದ ಬಳಿಕ, ಅಲ್ಲಿ ಸೂಚಿಸಲಾದ ಶಾಂತಸಾಗರದ ಒಕ್ಕೂಟವೆಂಬುದು ಪೂರ್ವ ಏಶಿಯ ಪರಿಸ್ಥಿತಿಯ ಒಂದು ಮುಂದಾಲವೇ ಸರಿ; ತನಗೆ ಆ ಒಕ್ಕೂಟವನ್ನು ಸಾಧಿಸಲು ಅಧಿಕಾರ ಕೊಡಲಾಗಿದೆ; ಸಂಧಿತ ದೇಶಗಳ ನೇತೃವನ್ನೇ ಅನುಸರಿಸಿ ಬಾಗ್ವಿಯೋದಲ್ಲಿ ಆಗ್ನೇಯ ಏಶಿಯ ರಾಷ್ಟ್ರಗಳ ಪರಿಷತ್ತನ್ನು ಕರೆಯಲಾಗುವುದು ಎಂದು ಜನರಲ್ ರೋಮುಲೋ ಅವರು ಹೇಳಿದ್ದಾರೆ.

ವಾಶಿಂಗ್‌ಟನ್ನಿನಲ್ಲಿ ಸಭೆಸೇರಿದ ಬ್ರಿಟಿಶ್ ಅಮೇರಿಕನ್ ಮತ್ತು ಕೆನಡದ ತಜ್ಞರು ಸೆಪ್ಟಂಬರ್ ೭ರಲ್ಲಿ ಕೊನೆಗೊಳಿಸುವ ಆರ್ಥಿಕ ಪರಿ[illegible]

[illegible]

[illegible]

ವ್ಯಾಟಿಕಾನ್ ನಗರವನ್ನು [illegible]

ಸಂ. ರಾ. ಸಂಘದ [illegible]

ಯುಗೋಸ್ಲೇವಿಯದ [illegible]

[illegible]

ಹೊಸ ಪುಸ್ತಕಗಳು

ಹೊಸ ಪಠ್ಯಪುಸ್ತಕಗಳು

* ಶ್ರೀ ಕೃಷ್ಣಮೂರ್ತಿ ಬಿ. ಓಂಕಾರರು "ಶಾಸ್ತ್ರೀಯ ಕಾರಣಗಳ ಸಂಗ್ರಹ" "ಹರಿಶ್ಚಂದ್ರ ಕಾವ್ಯಸಂಗ್ರಹ" ಮತ್ತು "ಸಾರಾಂಶ ಬರಹ" ಎಂಬ ಮೂರು ಪುಸ್ತಕಗಳನ್ನೂ ಶ್ರೀ ಎಂ. ಎಂ. ಸಂದಿಕೋಲಮಠರು "ವಿಜಾಪೂರ ಜಿಲ್ಲೆಯ ಭೂಗೋಲ" ಎಂಬುದನ್ನೂ ಬರೆದಿದ್ದಾರೆ 'ಶಾಸ್ತ್ರೀಯಕಾರಣಗಳಸಂಗ್ರಹ" ಎಂಬುದು Science in scientific reasons. ಎಂಬದರ ಭಾಷಾಂತರವೋ ಭಾವಾನುವಾದವೋ ಬರೆದವರಿಗೇ ಗೊತ್ತು. ಇದೊಂದು ವಿಜ್ಞಾನದ "ಗಾಯಿಡು". ಶಿಕ್ಷಣಜ್ಞರೂ ಸರಕಾರಗಳೂ ಈ ಗಾಯಿಡುಗಳ ಹಾವಳಿಯನ್ನರಿತು ಅವುಗಳನ್ನು ಪುರಸ್ಕರಿಸದ ಈ ಕಾಲದಲ್ಲಿ ಸೋಮಾರಿಗಳ, ದಡ್ಡರ ಮತ್ತು ಅಶ್ರದ್ಧಧಾನರ ಅಯಾ ಗುಣಗಳನ್ನು ಪೋಷಿಸಿ ತನ್ಮೂಲಕ ಹಣಗಳಿಸುವ ಈ ಪ್ರಯತ್ನ ನಿಂದ್ಯ; ಇದು ಗುರುಗಳ ಗುರುತ್ವವನ್ನು ಶಿಷ್ಯರು ಮನ್ನಿಸದೆ ಈ ಸಹಾಯಕ ಪುಸ್ತಕಗಳೆನಿಸಿಕೊಂಬ ದುರ್ಮಾರ್ಗದರ್ಶಕಗಳನ್ನು ಅಧರಿಸಿ ಉರುಹೊಡೆದು ಪಾಸಾಗಲು ಯತ್ನಿಸುವ ದುಷ್ಪ್ರಯತ್ನಕ್ಕೆ ಎಡೆಗೊಡುತ್ತದೆ. ಈ "ಗಾಯಿಡುಬ್ರಹ್ಮ" ರಿಗೆ ಶಬ್ದ ವ್ಯುತ್ಪತ್ತಿ ಕೂಡ ಸಾಲದು. ಸ್ವಲ್ಪ, ಎಣ್ಣೆ, ಚಿತ್ತಕರಡ, ಎದ್ದು, ಸೀಸಿನಿಂದ, ಬಡೆದು, ಹೆಜ್ಜೆಜ್ಜು, ಹಡಗ ಬಾಗಿಲ, ಕವಣಿ, ನದಿ, ಅಗಳಾದು ಟಿಪ್ಪಣಿ, ಎಂಬಿಷ್ಟು ಗ್ರಾಮ್ಯಗಳಲ್ಲದೆ ದೂರದಿಂದ ಎಂಬಲ್ಲಿ ದೂರಿನಿಂದ ಎರಡು ಮುಂತಾಗಿ ಹಲವಾರು ಅಶುದ್ಧ ಪ್ರಯೋಗಗಳಿವೆ.

"ಸಾರಾಂಶ ಬರಹ"ದಲ್ಲೂ ಶ್ರೀ ಓಂಕಾರರು ತಮ್ಮ ಅಲ್ಪ ವ್ಯುತ್ಪನ್ನತೆಯನ್ನು ಪರೀಕ್ಷಾ ಕಡಲು, ಸುಸೂತ್ರ, ಅಭ್ಯಾಸಿಗ, ಕಡಕೊಂಡು ಮುಂತಾದ ಪ್ರಯೋಗಗಳಲ್ಲಿ ಹೊರಗೆಡಹಿದ್ದಾರೆ. ಈ ಅರಾಣೆಯ ಪುಸ್ತಕದಲ್ಲಿ ಸಾರಗ್ರಹಣದ ಬಗ್ಗೆ ಅತ್ಯಲ್ಪ ವಿವರಣೆಕೊಟ್ಟದ್ದಲ್ಲದೆ ಮಾದರಿಯವೆಂದು ಕೊಟ್ಟ ಸಾರಸಂಗ್ರಹಗಳು ಕೂಡ ಅಷ್ಟೇನೂ ಉತ್ತಮ ಮಾದರಿಯ ಲಕ್ಷ್ಯಗಳಾಗಿಲ್ಲ.

ಕಾವ್ಯವ್ಯಾಖ್ಯೆ

"ಹರಿಶ್ಚಂದ್ರಕಾವ್ಯ"ದ ಮೇಲಿನ "ಗಾಯಿಡು" ಮತ್ತಷ್ಟು ವಿರೂಪಗಳಿಂದ ತುಂಬಿದೆ. ೪ ನೆಯ ಪುಟದಲ್ಲಿ ಪೆರಸು ಎಂಬುದನ್ನೊಂದು ಸ್ವತಂತ್ರ ಧಾತುವೆಂಬಂತೆ ಉಲ್ಲೇಖಿಸಿದ್ದು ನರಳುತ್ತ ಎನ್ನಲು ನೆರಳುತ್ತ ಎಂದದ್ದು ಉಬ್ಬಸವೆಂದರೆ ಆಯಾಸದಿಂದುಂಟಾಗಿ ಬಿಡುವ ಊರ್ಧ್ವಶ್ವಾಸವೆನ್ನದೆ, ಆಯಾಸ ಎಂದು ಮುಂತಾಗಿ ತಾತ್ಪರ್ಯಾರ್ಥವನ್ನು ಕಠಿನ ಶಬ್ದಗಳ ಅರ್ಥವೆಂಬ ಶೀರ್ಷಿಕೆಯ ಕೆಳಗೆ ಕೊಟ್ಟಂತೆ ಹಲವೆಡೆ ಮಾಡಿದ್ದು, ತೆಗೆದ ಎಂಬುದನ್ನು ನಗೆ(ದ) ಎಂದೂ ಕೆಡಹಲು ಎಂಬುದನ್ನು ಕೆಡುಹಲು ಎಂದೂ ಬಿದ್ದು ಎಂಬುದನ್ನು ಬಿದ್ದ ಎಂದೂ ಬರೆದಂತೆ ತಪ್ಪು ತಪ್ಪಾಗಿ ತಮ್ಮ ಅರ್ಥವಿವರಣದಲ್ಲಿ ಬರೆದಿರುವುದು; ಮುಂದರವರ್ತನನ್ನು ಮುಂದಾರ[illegible] ಬರೆದದ್ದು; [illegible] "[illegible]" ಎಂಬುದು "[illegible]" ಎಂದಿರಬೇಕಾದಲ್ಲಿ "[illegible]" ಎಂದು ವಿವರಿಸಿರುವುದು; [illegible] ಭ ದೋಷಗ ಮುಂತಾಗಿ [illegible]ಗಳ [illegible]ಗಳನ್ನು ತಪ್ಪಾಗಿ ಕೊಟ್ಟಿರುವುದು. ಇಂಥ ಹಲವಾರು ದೋಷಗಳಲ್ಲದೆ [illegible] [illegible] [illegible], ಅರ್ಥ[illegible] ಅರ್ಥ[illegible], [illegible] [illegible] [illegible] [illegible] [illegible] [illegible], [illegible] [illegible] [illegible] "[illegible]" [illegible] [illegible] [illegible] [illegible] "[illegible]" [illegible] [illegible] [illegible].

* [illegible]

[illegible]

ಭೂಗೋಲ

"ವಿಜಾಪೂರ ಜಿಲ್ಲೆಯ ಭೂಗೋಲ"ದಲ್ಲಿ ದರೂ ಹೆಸರಿನಲ್ಲೇ "ಪ್ರಥಮ ಚುಂಬನೇ ದಂತಭಂಗಃ" ಎಂಬಂತೆ ಅಪರೂಪವಿರುವುದು ಸ್ವತಃಸಿದ್ಧವಿದೆ. ಚೋಣಿ, ಅಗಲು, ತೆಗ್ಗು, ಒಕ್ಕಲತನ, ತಾಳೀಕೋಟಿ, ಟಂಗಿನಕಾಯಿ, ಪಂಢರಪೂರ, ಮಣಿಪಟ್ಟಿ ಮುಂತಾದ ಕುಗ್ರಾಮ್ಯಗಳಲ್ಲದೆ, ಪದೇ ಪದೇ ಧಡದಲ್ಲಿದ್ದ, ಬಡೆದಾಟ ಮುಂತಾದ ಅಪಪ್ರಯೋಗಗಳೂ, ಇಮಾರತಿ, ಪುರವಣಿ, ಶೇತಕೀ ಶಿಕ್ಷಣ ಮುಂತಾದ ಅಗ್ರಾಹ್ಯಪದಗಳೂ ಉಪಯುಕ್ತವಾಗಿವೆ.

ಪದಪ್ರಯೋಗದ ದೋಷಗಳನ್ನು ಮುಖ್ಯವಾಗಿ ಉಲ್ಲೇಖಿಸಿರುವುದು ಬಾಲಶಿಕ್ಷಣಕ್ಕಾಗುವ ಕುಠಾರಾಘಾತವನ್ನು ವಿವರಿಸುವ ಉದ್ದೇಶದಿಂದಲೇ. ಎಳೆಯ ವಯಸ್ಸಿನಲ್ಲೇ ಅಪಶಬ್ದಗಳು ತಲೆಗಂಟಿಕೊಂಡರೆ ವಿದ್ಯಾರ್ಥಿಗಳು ಬೆಳೆದು ದೊಡ್ಡವರಾಗಿ ವ್ಯಾಕರಣತೀರ್ಥ ಪದವಿಯನ್ನು ಪಡೆದರೂ ಅವರ ಬಾಯಿ ಮತ್ತು ಕೈಗಳಿಂದ ಅಪರೂಪಗಳು ನಿಯಂತ್ರಿತವಾಗಿ ಹೊರಡುವುದು ಅನುಭವಸಿದ್ಧವಾಗಿದೆ. ಒಬ್ಬ ಮನೋವಿಜ್ಞಾನಿ ಮಕ್ಕಳಲ್ಲಿ ಉಚ್ಚಾರಣ ಸ್ಪಷ್ಟತೆ ಬೇಗನೆ ಉಂಟಾಗದಿರಲು ತಾಯಿಯರು ಮುದ್ದಿನಿಂದ ತಪ್ಪು ಮಾತು ಹೇಳಿಕೊಡುವುದು ಮುಖ್ಯಕಾರಣ ಎಂದಿದ್ದಾನೆ. ಅದೇ ಮೇರೆಗೆ ಹಿರಿಯಕ್ಕತನ ವಹಿಸಿದ ಶಿಕ್ಷಕರು ತಮ್ಮ ಮಾತು ಮತ್ತು ಬರಹಗಳಲ್ಲಿ ಈ ಪ್ರಕಾರ ಗರತಿಗಾರಿಕೆಯನ್ನು, ಶುದ್ಧತೆಯನ್ನು, ಸುಂದರತೆಯನ್ನು ಬಿಟ್ಟುಕೊಟ್ಟರೆ ಭಾಷೆ ಮತ್ತು ಸಾಹಿತ್ಯಗಳು ಕಳೆಗೆಟ್ಟು ದುರ್ಭಗವಾಗುವುದು ಸ್ವಾಭಾವಿಕವಲ್ಲವೆ?

ಧನಸಂಗ್ರಹಕ್ಕಾಗಿ ಅಜ್ಞರ ಸೋಮಾರಿತನದ ದುರ್ಲಾಭ ಪಡೆಯಲು ಪ್ರಯತ್ನಿಸುವ ಆರೋಪವೊಂದಲ್ಲದೆ, ಅವರನ್ನು ಕುಜ್ಞರನ್ನಾಗಿ ಮಾಡುವ ಪ್ರಯತ್ನವನ್ನು ಕೈಕೊಂಡ ಆರೋಪವೂ ಇಂಥ ಪಠ್ಯ ಮತ್ತು ಸಹಾಯಕ ಪುಸ್ತಕಗಳ ಲೇಖಕರನೇಕರ ಮೇಲೆ ಇದೆ. ಶಿಕ್ಷಕರೂ ವಿದ್ಯಾರ್ಥಿಗಳೂ ಇಂಥವನ್ನು ಪುರಸ್ಕರಿಸಿದರೆ ಲಾಭಕ್ಕಿಂತ ನಷ್ಟವೇ ಹೆಚ್ಚೆಂದು ವಿಷಾದದಿಂದ ಹೇಳಬೇಕಾಗಿದೆ.

'ಕಾಲಪ್ರವಾಹ'ದ ಪ್ರತಿವಿಮರ್ಶೆ

೨೦-೬-೪೯ ರ 'ಕರ್ಮವೀರ'ದಲ್ಲಿ ನವಕಲ್ಯಾಣಮಠದ ಶ್ರೀ ಕುಮಾರಸ್ವಾಮಿಯವರ 'ಕಾಲಪ್ರವಾಹ'ದ ಬಗ್ಗೆ ಒಂದು ವಿಮರ್ಶೆ ಪ್ರಕಟವಾಗಿತ್ತು. ಆ ಬಗ್ಗೆ ಪ್ರಕಾಶಕರಾದ ಶ್ರೀ ವಿ. ರು. ಕೊಪ್ಪಳ ಇವರು ಒಂದು ಪ್ರತಿವಿಮರ್ಶೆಯನ್ನು ಬರೆದು ಕಳಿಸಿ ನಮ್ಮ ವಿಮರ್ಶೆಯಿಂದ ಶ್ರೀ ಸ್ವಾಮಿಗಳ 'ಗೌರವಕ್ಕೆ ಕುಂದುಂಟಾಗಿದೆ'ಯೆಂಬರ್ಥವನ್ನು ಪ್ರಕಟಿಸಿದರು. ವಿಮರ್ಶೆಯ ಪ್ರತಿವಿಮರ್ಶೆಯನ್ನು ಪ್ರಕಟಿಸುವುದು ಪತ್ರಿಕಾಸಂಪ್ರದಾಯಕ್ಕೆ ವಿರುದ್ಧವಾಗಿದೆಯೆಂದೂ ಶ್ರೀ ಸ್ವಾಮಿಗಳ ಬಗ್ಗೆ ನಮ್ಮಲ್ಲಿ ಅಗೌರವವಿಲ್ಲೆಂದೂ ಅವರಿಗೆ ಬರೆದೂ ಅವರು ತೃಪ್ತರಾಗದೆ ತಮ್ಮ ಪ್ರತಿವಿಮರ್ಶೆಯನ್ನು ಈ ನಗರದ ಇನ್ನೊಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದಲ್ಲದೆ ನಮ್ಮ ವಿಮರ್ಶಕರ ತಪ್ಪುಗಳನ್ನು ಖಾಸಗಿ ಪತ್ರದಲ್ಲಿ ನಾವು ಒಪ್ಪಿಕೊಂಡಿದ್ದರೂ ಅವನ್ನು ಪತ್ರಿಕೆಯಲ್ಲಿ ಪ್ರಕಟಿಸಲಿಲ್ಲೆಂಬ ಅರ್ಥದ ಟಿಪ್ಪಣಿ ಬರೆದಿದ್ದಾರೆ. ನಾವು ಪತ್ರದಲ್ಲಿ ಒಂದು ಅಚ್ಚಿನ ತಪ್ಪು (೧೫-೮-೪೭ ರ ಬದಲು ೧೮-೮-೪೭ ಎಂದು ಬಿದ್ದದ್ದು) ಮತ್ತು "ನಿಬಿರಯಲು" ಎಂಬ ಶಬ್ದದ ಕುಸ್ತಕೆಯ ಬಗ್ಗೆ ವ್ಯಕ್ತಗೊಳಿಸಿದ ಸಂಶಯದ ನಿಶ್ಚಿತ ಇವೆರಡನ್ನು ಬಿಟ್ಟು [illegible]. [illegible] [illegible] [illegible] [illegible] [illegible]. ಮೇಲಿನ [illegible] ಮತ್ತು [illegible] [illegible] [illegible] ಬಿಟ್ಟರೆ ನಮ್ಮ ವಿಮರ್ಶೆಯ ಬಗ್ಗೆ ನಮ್ಮ ನಿಲುವು ಯಥಾಪೂರ್ವವಾಗಿದೆಯೆಂದು ಹೇಳಬಯಸುತ್ತೇವೆ. —ಸಂ.

ಮಕ್ಕಳಿಗೆ ತಾಯಿಯುಸಿರು

೧

ಹದಿನೈದು; ಇಂದಿಹುದು, ಹರ್ಷದಾ
    ಎಂಟನೆಯ (ಅಗಸ್ಟ)
ತಿಂಗಳಿನ! ಗತಿಸಿದವು ಕಾಲದಾ ಚಕ್ರದಲಿ
ವರ್ಷಗಳು ಎರಡಿಂದು. ಇಂದು ಶುಭ
    ದಿನವಿಹುದು.
ಆಸೇತುಹಿಮನಗದ ಭೂಖಂಡ ಭಾರತದ
ಹೃದಯಾಂತರಾಳದಿಂ ನ‍ು ಉಕ್ಕಿ
    ಬರಲಿಂದು.
ನಕ್ಕು ನಗಿಸುವ ಕಲೆಯೆ ನಿಮ್ಮಾತ್ಮ
    ಮಂದಿರದ
ಜ್ಯೋತಿಯೆನಿಸಲಿ. ಪರರ ಆನಂದ
    ಸಾಗರಕೆ
ಇಂದುವಿನ ರೂಪದಲಿ ನೀವಿಂದು
    ನಲಿಯುವಿರ
ಭಾರತಾಂಬೆಯ ಆಶೆ ಬೆಳೆಸುತಲಿ
    ಮಕ್ಕಳಿರ?

೨

ತಾಯಿ ಸಹಿಸುವದೇಕೊ ಪ್ರಸವ
    ವೇದನೆ ದುಃಖ?
ಮುಂಬರುವ ಮುದ್ದುಮುಖ
    ಮುದ್ದಿಡಲು ತಾನೇನು
ಲೆಕ್ಕಿಸದೆ ಸಹಿಸುವಳು. ಪೂ-ತಳಿರು-
    ಮಿಡಿ ಕಾಯಿ
ಬೀತಲತೆ ಜೀವಿಪುದು, ಮರೆತು
    ದುಃಖದ ಭರವ
ಕಾಮಸಖನಾಗಮನವನೆ ಸ್ಮರಿಸಿ.
    ಸೃಷ್ಟಿಯಲಿ
ಆಶೆಯೊಂದೇದೀಪ ಜೀವನದ ಮಾರ್ಗದಲಿ.
ನಿಮ್ಮ ಮುಖ ಬೆಳೆಸುವದು
    ಮಾತೃಸುಖವಾಕೆಯಲಿ!
ತಾಯಿಕಣ್ಣೊಳಗಿರುವ ಆಶೆ ಕಾಣದಲಿರುವ
ನಿಮ್ಮಾತ್ಮದಾ ಶುದ್ಧಿ ಕೈಕೊಳ್ಳಿ ಮಕ್ಕಳಿರ!

೩

ಇನ್ನೂರು ವರ್ಷಗಳು ದಾಸ್ಯದಲಿ
    ಕಳೆದಿಹವು!
ಕೊನೆಗೊಮ್ಮೆ ಸ್ವಾತಂತ್ರ್ಯ ಸೂರ್ಯ
    ನುದಿಸಲು ಜನವು
ಪಣಿದಿಹುದು ಸ್ವಾಗತವ ನೀಡಿಹುದು.
    ಹೃದಯದಲಿ
ಪ್ರೇಮ ಪೀಠದಲವನ ಕೂರಿಸಿತು.
    "ವಿಧಿಲೀಲೆ"
ತಿಳಿಯುವದೆ? ತಿಳಿಸುವನೆ
    ಗೋಪ್ಯವನು ಕಾಲನಟ?
ನಡೆದಿಹುದು ಏನಿಲ್ಲ! ರುದ್ರ ಭೀಕರ ದೃಶ್ಯ
ದುರ್ದಿನವ ತಂದಿಹುದು. ಕಂದಿದನು
    ರವಿರಾಯ
ಮೂಡು ಮೂಡುತೆ! ಜನದ ಅದಲು
    ಬದಲಿನ ಸಂತೆ,
ಶಾಂತಿ ದೂತನ ಕುಸಿದು ಕೆಡವಿಹುದು
    ಈ ಕಂತೆ!
ತಾಳ ಮೇಳಗಳಿಲ್ಲ ಕೃತಿಮತಿಗೆ
    ಎಂಬುಹದೆ
ನೀತಿಯನ್ನು ...ಂದು ಹಬ್ಬದೊಳು
ಪ್ರಚುರಪಡಿಸುವ ಪ...
ಕೃತಕ ಸಾಧನ ಪ್ರ...ದೊಳು. ನಿಮ್ಮಂತ
    ...ವಾಗು
    ರಂಗದೊಳು
ಈ ಮಾತಿನರ್ಥವನು ಅಳಿಸಲಾರದ ತೆರದಿ
ಬರೆದು ಕೊರೆಯಿರಿ. ತಿಳಿದು ನಡೆದು
    ತಾಯಿಗೆ ಸೌಖ್ಯ
ಕೊಡುವ ಭರವಸೆ ನೀಡೆ, ಅಣಿಯಿಡಿ
    ಮಕ್ಕಳಿರಾ!

೪

ತಾಯಿ ಮಡಿಲೊಳು ಮೊಗ್ಗೆ,
    ಮೋಹಿಸುವ ರೂಪದಲಿ
ಇದ್ದರೂ, ಹೊರಗಣದ ಗಾಳಿ-ನೀರ್-
    ಬೆಳಕಿರದೆ
ಬೆಳೆಯುವದೆ? ಮಕ್ಕಳಿರ! ಇದನರಿದು
    ನೀವಿಂದು
ತಂದೆ ಗುರು ರಾಷ್ಟ್ರಗಳು ಗಾಳಿ-ನೀರ್-
    ಬೆಳಕೆಂದು
ತಿಳಿದು ನಡೆನುಡಿಗಳಲಿ ಹೆಜ್ಜೆ
    ಹೆಜ್ಜೆಯುಲವರ
ಗೌರವಿಸಿ ಅತ್ಯಧಿಕ ನಡೆಯುತಿರಿ.
    ನಿಮಗಿರುವ
ಮಾತೃರಕ್ತದಿ ಬೆಳೆದ ಬುದ್ಧಿ, ಬೆಳಕನು
    ಕಂಡು
ಸುರಭಿಭಾರದಿ ಮೊಗ್ಗೆ ಬಿರಿದಿಕೆ ರವಲ್ಲಿಂದು,
ಜ್ಞಾನ ಪ್ರಭೆಯೊಳು ಮಿಂದ ಜೀವನದ
    ಹೂವರಳಿ
ಮಾತೃಪೂಜೆಗೆ ಇರಲಿ ಮಕ್ಕಳಿರ
    "ಜೈಹಿಂದ"!

ಬೀದಳರ ಅನಂತಾಚಾರ್ಯ ಅಥಣಿ

ವ್ಯಂಗ್ಯ ಕತೆ

ಕನಸಿನ ರಾಜ

ಲೇ:— ಶ್ರೀ ಎಂ. ಎಸ್. ಪೊಣ್ಣಪ್ಪ, ಕೊಡಗು

ಕನಸು ಕಾಣುವುದೆಲ್ಲಾ ಸತ್ಯಾಂಶವಾದರೆ ನಾನೂ ಒಬ್ಬ ರಾಜನಾಗಿ ಪ್ರಜಾಪ್ರತಿನಿಧಿ ಸರಕಾರವೆಂಬದನ್ನು ಮರೆತು "ರಾಜಾಧಿರಾಜ ಮಾರ್ತಾಂಡ ತೇಜ, ಭೋಪರಾಕು," ಎಂಬದಾಗಿ ಹೊಗಳಿಸಿಕೊಂಡು ಒಡ್ಡೋಲಗದಲ್ಲಿ ಮೈಮರೆತು ಮೆರೆಯಬಹುದಾಗಿತ್ತು.

ಮೊನ್ನೆ ಒಂದು ರಾತ್ರಿ ನಾನೂ ತಿರುಕನ ಕನಸಿನಂತಿದ್ದ ಒಂದು ಕನಸು ಕಂಡೆ. ಭರವಸೆಯೆಂಬ ರಾಜ್ಯದ ರಾಜನು ಅಲ್ಲಿಯ ಪ್ರಜೆಗಳು ಬೇಡಿದಕ್ಕೆಲ್ಲಾ ಬರೇ ಭರವಸೆ ಮಾತ್ರ ಕೊಡುತ್ತಿದ್ದ. ಅತನ ಮೇಲೆ ಜುಗುಪ್ಸೆಹೊಂದಿದ ಪ್ರಜೆಗಳು ನನ್ನನ್ನು ರಾಜನಾಗುವಂತೆ ಕೇಳಿಕೊಂಡರು. ನಾನು ರಾಜ್ಯಭಾರವನ್ನು ವಹಿಸಿಕೊಂಡ ನಂತರ ಚರಾಚರಗಳನ್ನು ಕೂಡ ಬದಲು ಮಾಡಿಬಿಡುವಷ್ಟು ಅದಳತೆಯಲ್ಲಿ ಬದಲಾವಣೆ ಮಾಡಿದೆ.

ನಾನು ಮನುಷ್ಯನಿಗೆ ಜೀವನಾಧಾರವಾದ ದವಸ ಧಾನ್ಯಗಳನ್ನು ಬೆಳೆಸಲು ಮೊದಲು ಮಾಡಿದೆ. ಹಿಂದಿನ ರಾಜನು "ಹೆಚ್ಚಿಗೆ ಅಹಾರ ಬೆಳೆಯಿರಿ" ಎಂಬ ಜಾಹಿರಾತಿಗೆ ಅನ್ವಯಿಸಿ ಬೆಳೆಗಳನ್ನು ಪೇಟೆ ಪಟ್ಟಣಗಳ ಗೋಡೆಗಳಲ್ಲಿ ಬೆಳೆಸುತ್ತಿದ್ದದನ್ನು ನಿಲ್ಲಿಸಿ ನಾಡಿನ ಬೆನ್ನೆಲುಬು ಅನ್ನಿಸಿಕೊಂಡು ಹಗಲು ರಾತ್ರಿ ದುಡಿಯುವ ರೈತರ ಗದ್ದೆಗಳಲ್ಲಿ ಹೆಚ್ಚಿಗೆ ಅಹಾರ ಬೆಳೆಗಳು ಬೆಳೆಯುವಂತೆ ಮಾಡಿದೆ. ಪಡ ಭೂಮಿಗಳನ್ನು ಮತ್ತು ಪೈಸಾರಿ ಜಾಗವನ್ನು ಐಶ್ವರ್ಯವಂತರಿಗೂ ಮೈಗಳ್ಳರಿಗೂ ನೌಕರರಿಗೂ ಕೊಡದೆ ಸ್ವತಃ ದುಡಿಯುತ್ತಿರುವ ವ್ಯವಸಾಯಗಾರರಿಗೆ ಕೊಡಿಸಿ ಹೆಚ್ಚಿನ ಅಹಾರ ಬೆಳೆಯುವಂತೆ ಮಾಡಿದೆ.

ಮೊದಲಿನ ರಾಜನು ನೀರಾವರಿ ಕಾಲುವೆಗಳನ್ನು ಪೆನ್ನು ಪೆನ್ಸಿಲುಗಳಿಂದ ಕಟ್ಟಿಸಿ ಕಾಗದಗಳ ಮೇಲೆ ಹರಿಯಬಿಡುತ್ತಿದ್ದದನ್ನು ನಿಲ್ಲಿಸಿ ನಾನು ಅವುಗಳನ್ನು ಕಲ್ಲು ಮಣ್ಣುಗಳಿಂದ ಕಟ್ಟಿಸಿ ರೈತರ ಗದ್ದೆಗಳ ಮೇಲೆ ನೀರನ್ನು ಹಾಯಿಸಿ ಹುಲುಸಾಗಿ ಅಹಾರ ಧಾನ್ಯ ಬೆಳೆಯುವಂತೆ ಮಾಡಿದೆ. ಹೆಚ್ಚಿಗೆ ಅಹಾರ ಬೆಳೆಯಲೆಂದು ಸರಕಾರದಿಂದ ಕೊಡಲ್ಪಡುತ್ತಿದ್ದ ಗೊಬ್ಬರಗಳು ಪೇಟೆ ಪಟ್ಟಣಗಳ ಮನೆಗಳಲ್ಲಿ ಇಲಿ ಹೆಗ್ಗಣಗಳ ಮೇಲ್ವಿಚಾರಣೆಯಲ್ಲಿರುತ್ತಿದ್ದವು. ಅವುಗಳನ್ನೆಲ್ಲಾ ಕಾಲಕ್ಕೆ ಸರಿಯಾಗಿ ರೈತರ ಗದ್ದೆಗಳಿಗೆ ಸಾಗಿಸಿ ಬೆಳೆಗಳು ಹುಲುಸಾಗಿ ಬೆಳೆಯುವಂತೆ ಮಾಡಿದೆ.

ಬೆಳೆದ ಅಹಾರವನ್ನೆಲ್ಲಾ ತಿಂದುಂಡು ಕಾಡುಮರಗಳಂತೆ ಬೆಳೆದು ದುಷ್ಟ ಪ್ರಾಣಿಗಳಂತೆ ಕಚ್ಚಾಡಿದರೆ ಸಾಕೆ? ಪ್ರಜೆಗಳಲ್ಲಿ ಜ್ಞಾನವನ್ನು ಬೆಳೆಸಲೋಸುಗ ತಕ್ಕ ವಿದ್ಯಾಭಿವೃದ್ಧಿಯಾಗಲೆಂದು ಪೇಟೆ ಪಟ್ಟಣಗಳಲ್ಲಿ ಹೈಸ್ಕೂಲ್ ಕಾಲೇಜುಗಳನ್ನು ಕಟ್ಟಿಸಿ ಕಾಬೆದಾರಿಗಳನ್ನು ತಯಾರಿಸುವ ಬದಲು ನಾಡಿನ ರೈತರ ಎಳೆ ಹಸುಳೆಗಳಿಗೆ ಸರಿಯಾದ ವಿದ್ಯಾಬುದ್ಧಿ ಬರುವಂತೆ ಶಾಲೆಗಳನ್ನು ಹೆಚ್ಚಿಸಿದೆ. ವಿದ್ಯಾವಂತರೂ ಮೇಧಾವಿಗಳೂ ಆದ ಉಪಾಧ್ಯಾಯರನ್ನು ನೇಮಿಸಿದೆ. ಅವರು ತಮ್ಮ ಹೊಟ್ಟೆ ಹೊರೆಯುವುದಕ್ಕಾಗಿ ಉಪವೃತ್ತಿಯನ್ನು ಕೈಕೊಂಡು ಎಳೆ ಮಕ್ಕಳ ವಿದ್ಯೆಗೆ ನಿಗಾ ಕೊಡದೆ ಅವುಗಳ ಆಯುಷ್ಯವನ್ನು ಹಾಳು ಮಾಡದಂತೆ ಉಪಾಧ್ಯಾಯರಿಗೆ ಹೆಚ್ಚಿನ ಸಂಬಳವನ್ನು ಕೊಡಿಸಿದೆ. ಶಾಲೆಯನ್ನು ದನದ ಕೊಟ್ಟಿಗೆಗಳಂತೆ ಕಟ್ಟಿಸದೆ ಎಳೆ ಮಕ್ಕಳು ದೃಢಕಾಯರಾಗಿ ಬೆಳೆಯಲು ಗಾಳಿ ಬೆಳಕು ಯಥೇಚ್ಛವಾಗಿ ಬೀಳುವುದರಿಂದ ಸರಿಯಾದ ರೀತಿಯಲ್ಲಿ ಕಟ್ಟಿಸಿದೆ. ವಿದ್ಯಾ ಇಲಾಖೆಯ ಅಧಿಕಾರಿಗಳು ಅವರವರ ಕೆಲಸ ಕಾರ್ಯಗಳನ್ನು ಕ್ರಮಬದ್ಧವಾಗಿ ನಡೆಸುವಂತೆ ಕಟ್ಟುಪಾಡು ಮಾಡಿದ್ದರಿಂದ ಆವರೆಗೆ "ಬಡಮೇಷ್ಟ್ರು" ಅನಿಸಿಕೊಂಡಿದ್ದ ಎಳೆ ಮಕ್ಕಳ ಗುರುಗಳು ಕ್ಲಾಸಿನಲ್ಲಿ ತೂಕಡಿಸದಂತೆ ಮಾಡಿದೆ.

ಜ್ಞಾನದ ಬೆಳಕೆನಿಸಿಕೊಂಡ ವರ್ತಮಾನ ಪತ್ರಿಕೆಗಳ ಮೇಲೆ ಕಾನೂನು ಜರುಗಿಸಿ ರಾಜನೀತಿಯನ್ನು ಖಂಡಿಸಿ ಬರೆದವರನ್ನು ಜೈಲಿಗೆ ಕಳುಹಿಸುತ್ತಿದ್ದದನ್ನು ನಿಲ್ಲಿಸಿ ಪ್ರಜೆಗಳಿಗೆ ರಾಜನೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲದಂತೆ ಮಾಡಿದೆ. ಎತ್ತುಕತ್ತೆಗಳಂತೆ ಕೆಲಸ ಮಾಡುವ ಕೆಳಗಿನ ತರಗತಿಯ ನೌಕರರಿಗೆ ಹೆಚ್ಚಿನ ಸಂಬಳವನ್ನು ಮೇಲಿನ ತರಗತಿಯ ಹುದ್ದೆಯುಳ್ಳವರಿಗೆ ಕಡಮೆ ಸಂಬಳವನ್ನು ಕೊಡಿಸಿದೆ. ರಾಜನಾದ ನಾನು ಅವರಿಂದ ಬೇಡುವ ಕಾಣಿಕೆಗಳನ್ನು ಕೊಡದೆ ತನ್ನ ಜೀವನವನ್ನು ನಡೆಸುತ್ತಿದ್ದಂತೆ ಅವರವರಲ್ಲಿ ನೂರು ನೂರು ಕೇಳಿಸುತ್ತಿದೆ. ಇದನ್ನು ನೋಡಿದ ಮಂತ್ರಿಗಳು ತಮ್ಮ ಸಂಬಳದ ಅರ್ಧವನ್ನೇ ಹೊಂದಿಕೊಳ್ಳುವಂತಾಯಿತು. ಪರದೇಶದಲ್ಲಿದ್ದ ರಾಯಭಾರಿಗಳು ಸರಳ ಜೀವನ ಅಭ್ಯಸಿಸಿದರು. ಅವರ ದುಂದುಗಾರಿಕೆಗಾಗಿ ಕೊಡಲ್ಪಡುತ್ತಿದ್ದ ಹಣವೆಲ್ಲಾ ಸಾರ್ವಜನಿಕರಿಗೆ ಉಪಯೋಗವಾಗುವಂತಾಯಿತು. ಪ್ರತಿಯೊಬ್ಬ ಅಧಿಕಾರಿಯೂ ಸರಳ ವ್ಯಯವನ್ನು ಅಭ್ಯಸಿಸಿದ್ದರಿಂದ ಹುಟ್ಟುವಳಿಯು ಬೇಡಿಕೆಯು ಕಡಮೆಯಾಗಿ ಮುಕ್ಕರದ ಹಾವಳಿಯು ನಿಂತುಹೋಯಿತು.

ಹಿಂದಿನ ರಾಜನ ಕಾಲದಲ್ಲಿ ದೇಶದ ಸ್ಥಿತಿಗತಿಯನ್ನು ತಿಳಿದುಕೊಂಡು ಬರಲು ಕಳುಹಿಸುತ್ತಿದ್ದ ಅಧಿಕಾರಿಗಳು ಅಯಾ ಸ್ಥಳಗಳಿಗೆ ಹೋಗದೆ ಎಲ್ಲೋ ಒಂದು ಸ್ಥಳದಲ್ಲಿ ಕುಳಿತು "ಕುಡುಕರ ರಾಜ್ಯ, ಬೆಡಗಿನ ಸ್ಥಳ, ರಾವಣರಾಜ್ಯ"ವೆಂಬದಾಗಿ ಹುಟ್ಟಿಸುತ್ತಿದ್ದರು. ಆದ್ದರಿಂದ ಅಂಥ ಸ್ಥಳಗಳಿಗೆ ನಾನೇ ಖುದ್ದಾಗಿ ಹೋಗಿ ವಿಷಯಗಳನ್ನು ತಿಳಕೊಳ್ಳುತ್ತಿದ್ದೆ. ಅದಕ್ಕೆ ಮೊದಲು "ರಸ್ತೆ ಮಾಡಿಸಿ ಕೊಡಬೇಕು, ಸೇತುವೆ ಕಟ್ಟಿಸಿ ಕೊಡಬೇಕು, ಅಸ್ಪತ್ರೆ ಬೇಕು, ಶಾಲೆ ಬೇಕು, ನೀರಾವರಿ ಕಾಲುವೆಗಳು ಬೇಕು" ಎಂಬದಾಗಿ ಪ್ರಜೆಗಳು ಬರೆದುಕೊಳ್ಳುತ್ತಿದ್ದ ಅರ್ಜಿಗಳಿಗೆ ಬರೇ ಭರವಸೆ ಮಾತ್ರ ಕೊಡಲಾಗುತಿತ್ತು. ನಾನು ಅವರ ಬೇಡಿಕೆಗಳನ್ನು ಅಮೂಲಾಗ್ರವಾಗಿ ನೆರವೇರಿಸಿದೆ.

ನನ್ನ ರಾಜಮಾರ್ಗದಲ್ಲಿ ಪ್ರತಿದಿನ ಸರಾಸರಿ ಹತ್ತು ಕತ್ತೆಗಳು ಕಳ್ಳ ಸಂತೆಯಲ್ಲಿ ಹಣಗಳಿಸಿದವರನ್ನು ಹೊರಲಾರದೆ ಹೊತ್ತು ಸವಾರಿ ಮಾಡುತ್ತಿದ್ದವು. ಈ ಶಿಕ್ಷೆಯನ್ನು ನೋಡಿದ ಬೇರೆ ಜನರು ತಾವು ಗಳಿಸಿದ ಹಣವನ್ನು ಕೆರೆ ಬಾವಿಗಳನ್ನು ತೋಡಿಸಿಯೂ ಶಾಲೆ ಅಸ್ಪತ್ರೆಗಳನ್ನು ಕಟ್ಟಿಸಿಯೂ ತೀರಿಸಿಕೊಂಡು ಪುಣ್ಯಗಳಿಸಿದರು. ಕತ್ತೆ ಸವಾರಿ ಮಾಡಿಸಿದ್ದೇ ಅಲ್ಲದೆ ಅವರವರ ಶರೀರದ ತೂಕದಷ್ಟು ಬೆಳ್ಳಿ ನಾಣ್ಯಗಳನ್ನು ಕೊಡಬೇಕೆಂದು ವಿಧಿಸಿದೆ. ಹರಿಜನೋದ್ಧಾರಕ್ಕಾಗಿ ತನ್ನ ಇಡೀ ಜೀವನವನ್ನು ಸವೆಯಿಸಿದ ಗಾಂಧೀಜಿಯ ತತ್ವಕ್ಕನುಸಾರವಾಗಿ ಭರವಸೆ ರಾಜನು ಬರೇ ಮಾತಿನಲ್ಲಿ ಹರಿಜನೋದ್ಧಾರ ಮಾಡಿ ಹೂವಿನ ಹಾರ ಹಾಕಿಸಿಕೊಂಡು ಕಾರಿನಲ್ಲಿ ಹಣ್ಣು ಹಂಪಲುಗಳನ್ನು ತುಂಬಿಸಿಕೊಳ್ಳುತ್ತಿದ್ದ. ನಾನು ಆ ರಾಜಮರ್ಯಾದೆಯನ್ನೆಲ್ಲಾ ನಿಲ್ಲಿಸಿ ಹರಿಜನರಿಗೆ ಜ್ಞಾನೋದಯವಾಗುವಂತೆ ಆರ್ಥಿಕ, ನೈತಿಕ, ಸಾಮಾಜಿಕ ವಿಷಯಗಳನ್ನು ತಿಳಿಯಹೇಳುವಂತೆ ರಾತ್ರಿ ಶಾಲೆಗಳನ್ನು ಏರ್ಪಡಿಸಿ ಉಪಾಧ್ಯಾಯರನ್ನು ನೇಮಿಸಿದೆ. ರಾಜ್ಯದಲ್ಲಿ ಪಕ್ಷ ಪಂಗಡಗಳಿಂದ ಆಗುತ್ತಿದ್ದ ಅನಾಹುತಗಳನ್ನು ಪರಿಶೀಲಿಸಿ ಅವುಗಳ ಸ್ವಾರ್ಥಸಾಧಕ ಮುಂದಾಳುಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸಿದೆ. ಸ್ವಾರ್ಥಕ್ಕಾಗಿ ಜನಹಿತವನ್ನು ಬಲಿಯುಕ್ಕುವದು ನಿಂತು ದೇಶವು ನೆಮ್ಮದಿಗೊಂಡಿತು. ಅದಕ್ಕೆ ಮೊದಲು ಮುಂದಾಳುಗಳೆನಿಸಿಕೊಂಡವರು ತಮ್ಮದೇ ಆದ ಪತ್ರಿಕೆಗಳನ್ನು ತಯಾರಿಸಿಕೊಂಡು ನಿಷ್ಕಾರಣವಾಗಿ ರಾಜನನ್ನು ದೂರುವುದನ್ನು ನಿಲ್ಲಿಸಿದೆ.

ಭರವಸೆ ರಾಜನ ಕಾಲದಲ್ಲಿ ಮುನ್ಸಿಪಾಲಿಟಿಗೆ ಸಾಕಷ್ಟು ಉತ್ಪತ್ತಿ ಬರುತ್ತಿದ್ದರೂ ಅದು ರಾಜಬೊಕ್ಕಸಕ್ಕೆ ಸೇರದೆ ಹೇಗೊ ಅಲ್ಲೇ ಇಂಗಿ ಹೋಗುತಿತ್ತು. ಇದರ ಕಾರಣವನ್ನು ಕಂಡುಹಿಡಿದು ಅಲ್ಲಿಯ ಅಧಿಕಾರಿಗಳನ್ನು ಪೆನ್ಶನ್ ಕೊಟ್ಟು ಕಳುಹಿಸಿದೆ. ಅಜಂತರ ಬೇಹರಿಕಾಹದೆ ಕಳ್ಳ ಪೇಟೆ ಮಾಡುವುದು ನಿಂತು ಬೀಳಿಯೇ ಬೇಕೆ ಮೇಯುವುದು ... ಯಿತು.

ವ್ಯಾಪಾರಿಗಳ ದರಗಳು ಇಷ್ಟೇ ... ಕಳ್ಳ ... ಪಡಿಸಿದೆ ... ಜರಿಯಿತು. ... [illegible]

[illegible]

Reg. No. B. 3148

LICENCE No 3
Licenced to Post without Prepayment

KARMAVEER 12-9-49

ದಿಲ್ಲಿಯಲ್ಲಿ ಕರ್ನಾಟಕ ಧುರೀಣರು

ಎಡದಿಂದ ಬಲಕ್ಕೆ (ಮೂರನೆಯವರಿಂದ) ೧) ಶ್ರೀ ಎಸ್. ವಿ. ಕೃಷ್ಣಮೂರ್ತಿರಾವ (ಘಟನಾ ಸಮಿತಿ ಸದಸ್ಯರು) ೨) ಶ್ರೀ ನಿಜಲಿಂಗಪ್ಪ (ಘಟನಾ ಸಮಿತಿ ಸದಸ್ಯರು ಕಾಂಗ್ರೆಸ ಕಾರ್ಯ ಸಮಿತಿ ಸದಸ್ಯರು ಕ. ಪ್ರಾಂ. ಕಾಂ. ಸಮಿತಿ ಅಧ್ಯಕ್ಷರು) ೩) ಶ್ರೀ. ಟಿ. ಸುಬ್ರಮ್ಹಣ್ಯಂ (ಮೈಸೂರು ಘಟನಾಸಮಿತಿ ಅಧ್ಯಕ್ಷರು.) ೪) ಧಾರವಾಡ ನವಕಲ್ಯಾಣ ಮಠದ ಕುಮಾರಸ್ವಾಮಿಗಳವರು. ೫) ಶ್ರೀ ಸಿದ್ದಪ್ಪ ಕಂಬಳಿಯವರು (ಮುಂಬಯಿಯ ಹಿಂದಿನ ಶಿಕ್ಷಣ ಮಂತ್ರಿಗಳು). ೬) ಶ್ರೀ ರಂಗರಾವ ದಿವಾಕರ, ಕೇಂದ್ರ ಬಾನುಲಿ ಮತ್ತು ಸುದ್ದಿ ಶಾಖೆಯ ಮಂತ್ರಿಗಳು) ೭) ಶ್ರೀ ಸಿದ್ಧಲಿಂಗಯ್ಯ (ಮೈಸೂರ ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರು) ೮) ಶ್ರೀ ವೀರಪ್ಪ ಬಸರೀಗಿಡದ ೯) ಶ್ರೀ ಬಿ. ಎನ್. ಮುನವಳ್ಳಿ (ಘಟನಾ ಸಮಿತಿ ಅಧ್ಯಕ್ಷರು). ೧೦) ನಾಡಿಗ ಕೃಷ್ಣಮೂರ್ತಿ ಶ್ರೀ ಕಂಬಳಿಯವರ ಹಿಂದೆ ನಿಂತವರು ಶ್ರೀ ಎಲ್. ಎಸ್ ಪಾಟೀಲರು.

ಬಿಚುವನಾಲ್ಯಾಂಡಿಗೆ ಬಿಳಿಯ ರಾಣಿ

ವಿಲಾಯತಿಗೆ ಹೋದ ಹುಡುಗರು ಬಿಳಿಯ ಹುಡುಗಿಯರನ್ನು ಕಟ್ಟಿಕೊಂಡು ಬರುತ್ತಾರೆ ಎಂಬುದು ಹಿರಿಯರ ಮಾತು. ಅನುಭವವೂ ಹಾಗೆಯೆ ಹೇಳುತ್ತದೆ. ವಿಲಾಯತಿಗೆ ಹೋಗುವವರು ಯಾರು? ಅವರು ಯಾತಕ್ಕೋಸ್ಕರ ಹೋಗುತ್ತಾರೆ? ಎಂಬುದರ ಗೂಢವನ್ನು ಮೊದಲು ತಿಳಿಯುವದು ಅವಶ್ಯಕ.

ವಿಲಾಯತಿಯವರಿಗೆ ಶ್ರೇಷ್ಠೋ ಹಂಭಾವವಿದ್ದರೆ ಪಾಶ್ಚಾತ್ಯೇತರರಿಗೆ ನಿಚೋಹಂಭಾವ ಬಂದಿದೆ. ಇದರಿಂದ ಕಲಿಯುವ ನೆವಕ್ಕಾಗಿ, ಹವೆ ಬದಲಾವಣೆಯ ಹೆಸರಿನಲ್ಲಿ ಮತ್ತು ಅನುಭವ ಸಾಗರದಲ್ಲಿಯ ಹೊಸ ತರಂಗಗಳನ್ನು ಪರಿಚಯ ಮಾಡಿಕೊಳ್ಳಲಿಕ್ಕಾಗಿ ಪೌರಸ್ತ್ಯದಲ್ಲಿಯ ಶ್ರೀಮಂತ ಯುವಕರು ವಿದೇಶಗಳಿಗೆ ಹೋಗುವುದು ರೂಢಿ. ಹಳ್ಳಿಯ ಹುಡುಗಿಯರು ಸಂತೆಯ ಮಳಿಗರ ಮುಂತಾದ ಹಸರದ ಸಾಮಾನುಗಳನ್ನು ಕಂಡು ಬಾಯಿ ನೀರು ಕರೆಯುವಂತೆ ಇಲ್ಲಿಂದ ಹೋದ ಕುಬೇರ ಕುಮಾರರು ಅಲ್ಲಿಯ ಆಚಾರ, ವಿಚಾರ, ಅಂದ, ಚೆಂದಗಳಿಗೆ ಮಾರುವೋಗಿ ಅಭಿಮಾನ ಶೂನ್ಯರೂ ಪರಾಧೀನಚಿದಾಸರೂ ಆಗಿ ಹಿಂದಿರುಗಿದ್ದಕ್ಕೆ ಅನೇಕ ನಿದರ್ಶನಗಳಿವೆ.

ಪ್ರಣಯವೋ ಮೋಹವೋ ?

ಜೋಧಪುರದ ಮಹಾರಾಜರು ಹಿಂದೆ ಆಸ್ಪತ್ರೆಯ ನರ್ಸಾಗಿದ್ದ (ಸ್ಕಾಟ್ ದಂಪತಿಗಳಿಗೆ ಭಾರತದಲ್ಲಿ ಹುಟ್ಟಿದ) ಅಲೆಗ್ಸಾಂಡ್ರಾ ಮೆಕ್ ಬ್ರೈಡ್ ಎಂಬ ಬಿಳಿಯಳನ್ನು ಮದುವೆಯಾಗಿ ಮಹಾರಾಣಿಯನ್ನಾಗಿ ಸೀರೆ ಉಡಿಸಿ ಕರೆದುಕೊಂಡು ತಿರುಗುತ್ತಿರುವಂತೆ, ಆಫ್ರಿಕದ ಬಿಚುವನಾಲ್ಯಾಂಡಿನ ಅರಸುವರ ಸೆರಿತ್ಸೆಅಕ್ಸ್ ಫರ್ಡಿಗೆ ವಕೀಲಿಯನ್ನು ಕಲಿಯಲು ಹೋಗಿ ನಗರದ ಒಂದು ವಿಮೆಯ ಕಚೇರಿಯಲ್ಲಿ ಕುಮಾರಿ ರುತ್ ವಿಲಿಯಮ್ಸ್ ಎಂಬ ಟೈಪಿಸ್ಟಳನ್ನು ಸಂದರ್ಶಿಸಿ ಪ್ರಣಯ ಪಾಶಬದ್ಧನಾಗಿ ಅವಳನ್ನು ಮದುವೆ ಮಾಡಿಕೊಂಡು ತನ್ನ ದೇಶಕ್ಕೆ ಹಿಂದಿರುಗಿದನು. ಆಗ ಬಿಚುವನಾಲ್ಯಾಂಡಿನ ಅಧಿಕಾರಿಯಾಗಿ ಇವನ ರಕ್ಷಕತ್ವ ವಹಿಸಿದ್ದ ಬಾಮಂಗ್ವಾಟೋ ಕುಲದ ತ್ಸೆಕೇಡಿ ಆಳುತ್ತಿದ್ದನು. ಅವನಿಗೂ ಆ ಕುಲದ ಇತರರಿಗೂ ಥಕ್ಕನೆ ಆ ಮದುವೆ ಸರಿ ಬೀಳಲಿಲ್ಲ. ನಾಡಿನ ಸನಾತನತೆಗೂ "ಸುಧಾರಕ ಮನೋವೃತ್ತಿ" ಗೂ ಘರ್ಷಣವುಂಟಾಯಿತು. ಮಿಶ್ರ ವಿವಾಹದ ಬಗ್ಗೆ ಜನರು ಕ್ರುದ್ಧರಾದರು ಹತ್ತಿರದಲ್ಲೇ ಇರುವ ದ. ಆಫ್ರಿಕದಲ್ಲಿ ಮಿಶ್ರವಿವಾಹದ ವಿರುದ್ಧವಾಗಿ ಕಾಯದೆ ಕೂಡ ಆಗಿದೆ. ಅಲ್ಲದೆ ಬಿಚುವನಾಲ್ಯಾಂಡನ್ನು ತನ್ನಲ್ಲಿ ಸೇರಿಸಿಕೊಳ್ಳಲು ದಕ್ಷಿಣ ಆಫ್ರಿಕ ಬಹಳ ವರ್ಷಗಳಿಂದ ಹೊಂಚು ಹಾಕುತ್ತಿದೆ. ಅದಕ್ಕೀಗ ಬಿಳಿಯ ರಾಣಿಯು ದೆಸೆಯಿಂದ ಉಂಟಾದ ಗೊಂದಲ ಸದವಕಾಶವನ್ನು ಕಲ್ಪಿಸಬಹುದೆಂಬ ಆಶೆ. ಬ್ರಿಟನ್ನಿನೊಡನೆ ಘರ್ಷಣೆ ಮಾಡಿಕೊಳ್ಳಬಾರದೆಂಬ ಭಾವನೆಯಿಂದ ಮಾತ್ರ ಮಾಲನ್ ಸರಕಾರ ಕೈಯೆತ್ತದೆ ಸುಮ್ಮನಿದೆ. ಏಕೆಂದರೆ, ಬಿಚುವನಾಲ್ಯಾಂಡ್ ಬಸುತೋಲ್ಯಾಂಡ್ ಮತ್ತು ಸ್ವಾಜೀಲ್ಯಾಂಡ್ ಎಂಬೀ ಮೂರೂ ರಾಜ್ಯಗಳು ಬ್ರಿಟನ್ನಿನ ಮೇಲಾಳಿಕೆಗೆ ಒಳಪಟ್ಟಿವೆ.

ಮದುವೆ ಮಾಡಿಕೊಂಡು ಸೆರಿತ್ಸೆ ಬಿಚುವನಾಲ್ಯಾಂಡಿನ ರಾಜಧಾನಿಯಾದ ಸೆರೋವೆಗೆ ಬಂದಾಗ ತ್ಸೆಕೇಡಿಯ ಅಧ್ಯಕ್ಷತೆಯಲ್ಲಿ ಅಲ್ಲಿಯ ಜನಸಂಘವಾದ ಗೋಟ್ಲಾ ಎಂಬುದರ ೬೦೦೦ ಪ್ರಜೆಗಳು ಸಭೆ ಸೇರಿ ಬಿಳಿಯ ರಾಣಿ ಬೇಡವೆಂದಿದ್ದರೂ ತ್ಸೆಕೇಡಿಯ ಆಳಿಕೆ ಬೇಡವಾಗಿದ್ದ ಕಾರಣ ಅದನ್ನು ತಪ್ಪಿಸಲೋಸುಗ ಹಸ್ತೀ ಸಹಿತನಾದ ಸೆರಿತ್ಸೆಯನ್ನು ಸ್ವಾಗತಿಸಿದರು. ಆಗ ಅವರಲ್ಲಿಯ ತನ್ನ ಪಕ್ಷದ ಶೇಕಡಾ ೪೦ ಜನರನ್ನು ಕರೆದುಕೊಂಡು ತ್ಸೆಕೇಡಿಯು ಅಧಿಕಾರ ತ್ಯಾಗಮಾಡಿ ಬುದ್ಧಿಪೂರ್ವಕವಾಗಿ ದೇಶ ಬಹಿಷ್ಕೃತನಾದನು ಮತ್ತು ಬಿಳಿಯಳನ್ನು ರಾಣಿಯಾಗಿ ದೇಶದಲ್ಲಿ ಸಂದಿಟ್ಟುಕೊಳ್ಳುವ ಆಲೋಚನೆಯನ್ನು ಬಿಡದಿದ್ದರೆ ಸೆರಿತ್ಸೆಯೊಡನೆ ಆ ಮರಣ ಹೋರಾಡುವೆನೆಂದು ಅವನು ಸಾರಿದನು!

ಬ್ರಿಟನ್ನಿನ ಧರ್ಮಸಂಕಟ !

ಬ್ರಿಟನ್ನು ಯಾವಾಗಲೂ ಮಿಶ್ರವಿವಾಹಕ್ಕೆ ಆಸ್ಪದಕೊಡುತ್ತ ಬಂದಿದೆ. ಅದು ಆರ್ಯ ದ್ರಾವಿಡರನ್ನು ಹೊರಗೆಡಹುತ್ತದಂತೆ. ಹಿಂದೆ ಆರ್ಯರು ದ್ರಾವಿಡರ ಹೆಣ್ಣನ್ನು ಮದುವೆಯಾದರೂ ಅವರಿಗೆ ತಮ್ಮ ಹೆಣ್ಣನ್ನು ಕೊಡಲು ಹಿಂಜರಿಯುತ್ತಿದ್ದರು. ಇಂದಿನ ಬಿಳಿಯರ ರೀತಿ ತದ್ವಿರುದ್ಧ. ಇವರು ತಮ್ಮ ಹೆಣ್ಣು ಯಾರು ಮದುವೆಯಾದರೂ ಅಡ್ಡಿಯಿಲ್ಲ, ಗಂಡು ಮಾತ್ರ ಶ್ವೇತೇತರಳನ್ನು ಮದುವೆಯಾಗಕೂಡದು ಎಂಬ ಭಾವನೆಯುಳ್ಳವರಾಗಿದ್ದಾರೆ. ಆದರೆ ಹಿಂದಿನ ಆರ್ಯರು ಆ ಪದ್ಧತಿಯಿಂದ ತಮ್ಮ ಸಂಸ್ಕೃತಿ ಕುಲಾಚಾರಗಳನ್ನು ಉಳಿಸಿಕೊಂಡು ಪ್ರಚುರಪಡಿಸಿದಂತೆಯೇ ಇವರು ಈ ಪದ್ಧತಿ ಹಿಡಿದು ತಮ್ಮ ಸಂಸ್ಕೃತಿ ಕುಲಾಚಾರಗಳನ್ನು ಉಳಿಸಿ,ಬೆಳೆಸಿ. ಪಸರಿಸುತ್ತ ಬಂದಿದ್ದಾರೆ!

ಮಿಶ್ರವಿವಾಹಾನುಕೂಲದ ತನ್ನ ಧೋರಣೆಯನ್ನು ಬ್ರಿಟನ್ನು ಬಿಡುವಂತಿಲ್ಲ. ಬಿಟ್ಟರೆ ಸದ್ಯ: ತನ್ನ ಕುಲಕ್ಕೆ ಅಪಮಾನವಾದಂತಾಗುತ್ತದೆ. ಹಾಗೆಂದು ಅದನ್ನೊಪ್ಪಿದರೆ ಬಿಚುವನಾಲ್ಯಾಂಡಿನಲ್ಲಿ ಬೆಳೆಯುತ್ತಿರುವ ಪ್ರಬಲವಾದ ವಿರುದ್ಧ ಮತವನ್ನು ಎದುರಿಸಬೇಕಾಗುತ್ತದೆ. ಆ ಜನರ ಏಳಿಗಾಗಿ ಒಂದು ದಿಲ್ಲಿಯನ್ನೂ ಈ ವರೆಗೆ ಖರ್ಚುಮಾಡದೆ ಕುಳಿತ ಬ್ರಿಟನ್ನಿಗೆ ದಕ್ಷಿಣ ಆಫ್ರಿಕದ ಒಕ್ಕೂಟವೊಮ್ಮೆ ತಮ್ಮಗಡಿಯಲ್ಲಿ ಹೊಕ್ಕಿರುವ ಈ ಪ್ರದೇಶವನ್ನೂ ಇನ್ನುಳಿದ ಎರಡು ರಾಜ್ಯಗಳನ್ನೂ ಬಿಟ್ಟು ಕೊಡಿರೆಂದು ಕೇಳಿದರೆ ಯಾವ ಉತ್ತರ ಕೊಡಬೇಕೆಂಬುದು ತಿಳಿಯದಾಗಿದೆ. ಅದರಿಂದ ಆ ಒಕ್ಕೂಟ ಅಸಂತೃಪ್ತವಾದರೆ ಕಾಮನವೆಲ್ತಿನಿಂದ ಅದು ಕಾಲಕ್ರಮೇಣ ಹೊರಬಿದ್ದರೂ ಒಮ್ಮೆ ಬಿದ್ದೀತು. ಹೀಗೆಲ್ಲ ವಿಚಾರಮಾಡಿ ದಾರಿಗಾಣದೆ ಬ್ರಿಟನ್ನೀಗ ಪ್ರಶ್ನೆಯ ವಿಚಾರಣೆಗಾಗಿ ಒಂದು ನ್ಯಾಯಮಂಡಲಿಯನ್ನು ಸೆರೋವಿಗೆ ಕಳಿಸಿದೆ. ವಿಚಾರಣೆಯಾಗುವವರೆಗೆ ರಾಜ್ಯಸೂತ್ರವನ್ನು ಬ್ರಿಟಿಶ್ ಅಧಿಕಾರಿಯೊಬ್ಬನು ವಹಿಸಬಹುದು ಎಂದು ರೀತಾ ಹಿಂಡೆನ್ನಳು 'ನ್ಯೂಸ್ಟೇಟ್ಸ್‌ಮನ್ ಎಂಡ್ ನೇಶನ್ನಿ'ನಲ್ಲಿ ಬರೆಯುತ್ತಾಳೆ.

ಅಂತೂ ಬಿಳಿಯ ರಾಣಿಯ ಪ್ರತಾಪ ಇಷ್ಟಿದೆ. ಆಫ್ರಿಕನ್ನರೂ ಏಶಿಯನ್ನರೂ ಈಗಲೂ ಬಿಳಿಯರ ಮೋಹಕ್ಕೆ ಒಳಗಾಗಿರುವದಕ್ಕೆ ಹಲವಾರು ನಿದರ್ಶನಗಳು ನಿತ್ಯವೂ ಸಿಕ್ಕುತ್ತವೆ. ಎಲ್ಲರೂ ಹೋಗಿ ಬೀದಿಯ ಬಿಳಿ ಹುಡುಗಿಯೊಬ್ಬಳನ್ನು ಕರೆದುಕೊಂಡು ಬಂದು ಮದುವೆಯಾಗಿ ಮನೆಗೆ ಮಾರಿಗಳಾಗುತ್ತಾರೆಂದಲ್ಲ. ಬಿಳಯರ ಆಚಾರ ವಿಚಾರಗಳೆಲ್ಲವನ್ನೂ ಗ್ರಾಹ್ಯಾಗ್ರಾಹ್ಯವಿವೇಕವಿಲ್ಲದೆ ಒಪ್ಪಿ ಮೆಚ್ಚಿ ಸ್ವದೇಶದ ನೀತಿ,ನಾಗರಿಕತೆ,ಸಂಸ್ಕೃತಿ ಸಂಪ್ರದಾಯ, ಶಿಷ್ಟಾಚಾರ, ಸಭ್ಯತೆ, ಸಮ್ಯಗ್ಜೀವನದ ಸದ್ಧರ್ಮಲಕ್ಷಣ ಇವುಗಳ ಶಕ್ತಿಯನ್ನು ಕುಂದಿಸಲು ತೊಡಗಿರುವದು ನಗರ, ಉಪನಗರ, ಪಟ್ಟಣ, ಅರೆಪೊಳಲುಗಳ ಕೌಟುಂಬಿಕ ಮತ್ತು ವೈಯಕ್ತಿಕ ಜೀವನದಲ್ಲಿ ಕಂಡುಬರುತ್ತದೆ. ಇದನ್ನು ನಿಲ್ಲಿಸಬೇಕಾದರೆ ಸ್ವಾಭಿಮಾನ, ಸ್ವದೇಶಾಭಿಮಾನಗಳುಳ್ಳ ತರುಣತರುಣಿಯರು ನಮ್ಮ ನಾಡಿನ ಪ್ರಾಚೀನ ವಾಙ್ಮಯವನ್ನು ಗಂಭೀರವಾಗಿ ಅಭ್ಯಾಸ ಮಾಡಿ ಗ್ರಾಹ್ಯಾಂಶಗಳ ಮಹತ್ವವನ್ನು ಮನಗಾಣಬೇಕು; ಬರಿಯ ಟೊಳ್ಳು ದೇಶಾಭಿಮಾನವನ್ನು ಬಿಸುಡಬೇಕು.

—ಧರ್ಮಚಕ್ಷು

ಮಲಯದಲ್ಲಿ ಕಮ್ಯುನಿಸ್ಟ್ ಸ್ತ್ರೀಯರು

ಮಲಯದಲ್ಲಿ ಚೀನೀ ಕಮ್ಯುನಿಸ್ಟರು ನಡೆಸುತ್ತಿರುವ ಕೂಟಯುದ್ಧದಲ್ಲಿ ಸ್ತ್ರೀಯರು ಬಹಳ ಭೀಕರ ಪಾತ್ರವನ್ನು ವಹಿಸುತ್ತಿದ್ದಾರೆಂದು ತಿಳಿದುಬಂದಿದೆ. ಒಂದು ವೇಳೆ ಪುರುಷಯೋಧರನ್ನು ಹೇಗಾದರೂ ಹಿಡಿಯಬಹುದು, ಆ ಭೀಕರ ಸ್ತ್ರೀಯರನ್ನು ಹಿಡಿಯಲು ಸಾಧ್ಯವೇ ಆಗದೆಂದು ಸರಕಾರೀ ಸೈನಿಕರೆನ್ನುತ್ತಿದ್ದಾರೆ.

ಹಠವಾದಿಗಳಾದ ಈ ಸ್ತ್ರೀಯರು ಕಾಡುಮೇಡುಗಳಲ್ಲಿ ತೋಳದಂತೆ ತಿರುಗುವರು. ಹಗಲಿನಲ್ಲಿ ಇವರು ಒಕ್ಕಲಿಗ ಸ್ತ್ರೀಯರಾಗಿ ಹೊಲಗಳಲ್ಲಿ ಕೆಲಸ ಮಾಡುತ್ತ, ತಮ್ಮ ಗಂಡಸರಿಗೆ ಅಗತ್ಯವಾದ ಸಾಮಾನು ಸರಕುಗಳನ್ನು ಹೊತ್ತುಕೊಂಡು ಹೋಗಿ ಅವರಿರುವ ಗುಪ್ತ ಸ್ಥಳಗಳಿಗೆ ಮುಟ್ಟಿಸುವರು; ರಾತ್ರಿಯಲ್ಲಿ ಸ್ವತಃ ಕೈಬಾಂಬು, ಕತ್ತಿ, ಕೋವಿಗಳನ್ನು ಹಿಡಿದು ಧೂಮಕೇತುಗಳಂತೆ ಸರಕಾರೀ ಸೈನಿಕರ ಮತ್ತು ಪೋಲೀಸರ ಮೇಲೆ ಹರಿಹಾಯುತ್ತಾರೆ.

ಮೊದಮೊದಲು ಕೆಲವೆಡೆ ಹೆಂಗಸರೆಂಬ ಕಾರಣದಿಂದ ಕರುಣೆದೋರಿ ಸೈನಿಕರು ಅವರನ್ನು ಬೆನ್ನಟ್ಟದೆ ಬಿಟ್ಟುಬಿಡುತ್ತಿದ್ದರು; ನಿರಾಯುಧರಾಗಿದ್ದಾಗ ಅವರಿಗೆ ಗುಂಡು ಹೊಡೆಯುತ್ತಿದ್ದಿಲ್ಲ. ಈಗ ಅವರ ಕಾಟ ಅತಿರೇಕವಾಗುತ್ತ ಬಂದುದರಿಂದ ಅವರ ತಲೆದಂಡ ತೆಗೆದುಕೊಳ್ಳಬೇಕೆಂದು ಅವರನ್ನು ಹಿಡಿದುಕೊಟ್ಟರೆ ದೊಡ್ಡ ಇನಾಮು ಕೊಡುವುದಾಗಿ ಪೋಲೀಸರು ಸಾರಿದ್ದಾರೆ. ಅಂಥವರಲ್ಲಿ ಇಬ್ಬರು ಸ್ತ್ರೀಯರು ಪ್ರಮುಖರು. ಅವರು ಬಟು ಅರೆಂಗ್ ಎಂಬ ಕಳ್ಳಗುಂಪಿಗೆ ಸೇರಿದವರು. ಅವರ ಚಯೊಕ್ ಅಮಾನುಷವೆಂದು ಪೋಲೀಸರೆನ್ನುತ್ತಾರೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತ ವರು ಮುದ್ರಿಸಿ ಪ್ರಕಟಿಸಿದರು.